# ಕ್ರಿಸ್ತನ ಜೀವನ

The Life of Christ *Illustrated* - Kannada



14

# ಕ್ರಿಸ್ತನ ಜೀವನ

## The Life of Christ *Illustrated* - Kannada

Script by Iva Hoth
Illustrations by Andre Le Blanc
Bible Editor, C. Elvan Olmstead, Ph.D.

*Cook Communications*
*Ministries International*

# The Life of Christ Illustrated

## Kannada Edition

Copyright 2015 Voice Media

info@VM1.global
Web home: www.VM1.global

All rights reserved. No part of the publication may be reproduced, distributed or transmitted in any form or by any means, including photocopying, recording, or other electronic, or mechanical methods, without the prior written permission of the publisher, except in the case of brief quotations embodied in critical reviews and certain other noncommercial uses permitted by copyright law. For permission requests, email the publisher, addressed "Attention: Permission Coordinator," at the address above.

This publication **may not be sold, and is for free distribution** only.

ಯೇಸುವಿನ ಜೀವನ

ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನರಿಂದ.

ಹೊಸ ಒಡಂಬಡಿಕೆಯ ಮೊದಲ ನಾಲ್ಕು ಪುಸ್ತಕಗಳನ್ನು
ಸುವಾರ್ತೆಗಳೆಂದು ಕರೆಯುತ್ತಾರೆ. ಅಂದರೆ ಯೇಸುವಿನ
ವಿಷಯವಾದ "ಶುಭವಾರ್ತೆ" ನಾಲ್ಕು ಪುಸ್ತಕಗಳೂ ಒಂದೇ
ವಿಷಯವಾದ ಯೇಸುವಿನ ಜೀವನ,
ಭೋದನೆ, ಮರಣ ಮತ್ತು ಪುನರುತ್ಥಾನವನ್ನು ತಿಳಿಸುತ್ತದೆ.




ಯೇಸುವು ಬಂದಾಗ ಇದ್ದ ಜಗತ್ತು
ಸುಮಾರು ೬೦ ವರ್ಷಗಳಿಂದ ಯೆಹೂದ್ಯರಿಗೆ ಸೇರಿದ ಪಾಲಸ್ತೀನ ದೇಶವನ್ನುರೋಮಸಾಮ್ರಾಜ್ಯದವರು ಆಳುತ್ತಿದ್ದಾರೆ. ಅವರನ್ನು ಹತೋಟಿ ಮಾಡಲು ಚುರುಕು ಮತ್ತು ಕ್ರೂರವಾದ ಹೆರೋದನನ್ನು ನೇಮಿಸಿದ್ದರು. ಯಹೋದ್ಯರು ಅವನನ್ನು ದ್ವೇಷಿಸಿದರು ಮತ್ತು ರೋಮ ಅಧಿಕಾರಿಗಳು ಅವನಿಗೆ ನೆರವಾಗಿದ್ದರು. ಈಗ ಕ್ರಿ.ಪೂ.೬
ಮುದುಕನೇ ಕೇಳು, ಇದನ್ನು ಎತ್ತಿಕೊಂಡು ಬಾ


ಆ ಪೆಟ್ಟಿಗೆಯು ಮುದುಕನಿಗೆ ಬಹಳ ಬಾರವಾಗಿದೆ.
ರೋಮನ್ನರಿಗೆ ಅದರ ಗಮನವಿಲ್ಲ


ಗಂಟೆಗಳ ನಂತರ ಮುದುಕನು ಮನೆ ತಲುಪುತ್ತಾನೆ.
ತಾತ, ಏನಾಯಿತು?
ರೋಮ ಸೈನಿಕನು ಹೆರೋದನ ಮನೆಗೆ ದೊಡ್ಡ ಪೆಟ್ಟಿಗೆಯನ್ನು ಹೊರಿಸಿಕೊಂಡು ಹೋದನು.



ಅದು ನಿಯಮ. ಯೆಹೂದನು ರೋಮ ಸೈನಿಕನ ಭಾರವನ್ನು ಮೈಲಿಗಟ್ಟಲೆ ಹೊರಬೇಕು. ಅದು ಸರಿಯಲ್ಲ ಆದರೆ ರೋಮನ್ನರು.
ಆದರೆ ಯಾಕೆ, ಅಮ್ಮಾ
ರೋಮನ್ನರು ಎಲ್ಲಕ್ಕೂ ನಮಗೆ ತೆರಿಗೆ ವಿಧಿಸುತ್ತಾರೆ. ಆದರೆ ನಾವು ಕೇಳುವ ಹಾಗಿಲ್ಲ. ದಾವೀದನ ಕಾಲದಲ್ಲಿ ನಾವು ಆಳುವವರಾಗಿದ್ದೆವು.
ಉಷ್! ಯಾರಾದರೂ ಕೇಳಿಸಿಕೊಂಡಾರು.
ದೇವರೇ ನೀನು ತಿಳಿಸಿದ ವಿಮೋಚಕನು ಯಾವಾಗ ಬರುವನು.
ವಿಮೋಚಕನ ದಾರಿ ಸಿದ್ಧಮಾಡುವವನು ಬರುತ್ತಾನೆಂದು ಪ್ರವಾದಿಯಾದ ಮಲಾಕಿ ಹೇಳಿದ್ದಾನೆ. ಆದರೆ ಅವನು ಇನ್ನೂ ಬಂದಿಲ್ಲ.


ಆ ದಿನ ಮಧ್ಯಾಹ್ನ ಯಹೂದ್ಯರು ಪ್ರಾರ್ಥನೆಗೆ ದೇವಾಲಯಕ್ಕೆ ಬಂದಾಗ-ವಯಸ್ಸಾದ ಯಾಜಕ ಜಕರೀಯನು ದೂಪಹಾಕಿ ಪ್ರಾರ್ಥಿಸಲು ಪವಿತ್ರ ಸ್ಥಳ ಪ್ರವೇಶಿಸಿದನು.
ಇದು ನನ್ನ ಜೀವನದ ಮಹತ್ವ ದಿನ. ಅನೇಕ ವರ್ಷಗಳ ನಂತರ ಪವಿತ್ರ ಬಲಿಪೀಠದಲ್ಲಿ ದೂಪಹಾಕುವ ಸರದಿ ನನಗೆ ಬಂದಿದೆ.


ಅವನು ರಹಸ್ಯ ಕೋಣೆಯಲ್ಲಿ ಬಹಳ ಸಮಯವಿದ್ದದರಿಂದ ಜನರು ಆಶ್ಚರ್ಯಪಡಲಾರಂಭಿಸಿದರು.
ಬೇರೆ ಯಾಜಕರಿಗಿಂತ ಜಕರೀಯನ ಪ್ರಾರ್ಥನೆ ಉದ್ದವಾಗಿತ್ತು.
ಅವನು ಒಳ್ಳೆಯ ಮನುಷ್ಯ ಆದರೆ ಅವನ ಕೆಲಸ ಮುಂದುವರೆಸಲು ಅವನಿಗೆ ಮಗನಿಲ್ಲ.


ಕಡೆಗೆ ಜಕರೀಯನು ಹೊರಗೆ ಬಂದನು ಆದರೆ ಮಾತನಾಡಲಿಲ್ಲ.
ದೇವರ ಪವಿತ್ರ ಸ್ಥಳದಲಿ ಏನಾಯಿತು?


ದೇವರಿಂದ ರಹಸ್ಯ
ಲೂಕ ೧:೨-೫೫
ದೇವಾಲಯದ ಪರಿಶುದ್ಧ ಸ್ಥಳ ಪ್ರವೇಶಿಸಿದ ಸಮಯದಿಂದ ಜಕರೀಯನು ಮಾತಾಡಲಿಲ್ಲ.
ಯರುಸಲೇಮಿನವರು, ಅವನು ದರ್ಶನ ನೋಡಿರಬಹುದು ಅಂದುಕೊಂಡರು ಆದರೆ ಜಕರೀಯನು ಏನೂ ಹೇಳಲಿಲ್ಲ. ಅವನು ತನ್ನ ಸೇವೆಯನ್ನು ಮುಗಿಸಿ ಮನೆಗೆ ಹಿಂತಿರುಗಿದನು. ಬಾಗಿಲ ಬಳಿಯಲ್ಲಿ ಅವನ ಹೆಂಡತಿಯು ಸಂದಿಸುತ್ತಾಳೆ.
ಜಕರೀಯನೇ ಏನಾಯಿತು? ಏಕೆ ನನ್ನೊಂದಿಗೆ ಮಾತಾಡಲಿಲ.
ಜಕರೀಯನು ತಕ್ಷಣ ಹಾಳೆಯ ಮೇಲೆ ಬರೆದು ಹೆಂಡತಿಗೆ ಓದಲು ಹೇಳಿದನು.
ಪವಿತ್ರ ಸ್ಥಳದಲ್ಲಿದ್ದಾಗ ದೇವದೂತನು ನನ್ನೊಂದಿಗೆ ಮಾತಾಡಿದನು. ನಮಗೊಬ್ಬ ಮಗನು ಹುಟ್ಟುತ್ತಾನೆ, ಅವನ ಹೆಸರು ಯೋಹಾನನು ಮತ್ತು ಅವನು ವಿಮೋಚಕನಿಗೆ ದಾರಿಸಿದ್ಧ ಮಾಡುತ್ತಾನೆಂದು ಅವನು ಹೇಳಿದನು.




ಬಹಳ ಸಂತೋಷದಿಂದ ದೇವರು ಹೇಳಿದನ್ನು ನಂಬಿದರು.. ಜಕರಿಯ ಮತ್ತು ಎಲಿಸಬೇತಳು ತಮ್ಮ ಮಗನ ಜನನಕ್ಕಾಗಿ ಸಿದ್ಧಮಾಡಿಕೊಂಡರು. ಅದೇ ಸಮಯದಲ್ಲಿ ದೇವರು ತನ್ನ ಜನರಿಗೆ ಮಾಡಿದ ವಾಗ್ದಾನಗಳನ್ನು ಗ್ರಂಥದಲ್ಲಿ ಓದಿದರು.




ದೇವದೂತನು ಹೇಳಿದ್ದನ್ನು ಮರಿಯಳು ಯಾರಿಗೂ ಹೇಳಲಿಲ್ಲ, ಆದರೆ ಕೆಲ ದಿನಗಳ ನಂತರ ಯೋಸೇಫನನ್ನು ನೋಡಲು ಬಡಗಿ ಅಂಗಡಿಗೆ ಹೋದಳು.
ನಾನು ನನ್ನ ಸಂಭಂದಿಕಳಾದ ಎಲಿಸಬೇತಳನ್ನು ನೋಡಲು ಹೋಗಬೇಕೆಂದಿದ್ದೇನೆ.
ಯಹೂದದಲ್ಲಿಯಾ? ನೀನೊಬ್ಬಳೇ ಹೋಗುವುದು ನನಗಿಷ್ಟವಿಲ್ಲ. ನಮಗೆ ಮದುವೆಯಾಗಿದ್ದರೆ ನಾವೇ ಕರೆದುಕೊಂಡು ಹೋಗುತ್ತಿದ್ದೆ.
ಆದರೆ ಮರಿಯಳೊಬ್ಬಳೇ ನಜರೇತನ್ನು ಬಿಡುತಾಳೆ.
ಎಲಿಸಬೇತಳಿಗೂ ಮಗನು ಹುಟ್ಟುತ್ತಾನೆಂದು ದೇವದೂತನು ಹೇಳಿದ್ದಾನೆ. ಅವಳೊಂದಿಗೆ ಮಾತಾಡುವುದು ಒಳ್ಳೆಯದು.
ಆಕೆಯು ಎಲಿಸತಬೇತಳನ್ನು ಸಂಧಿಸಿದಾಗ...
ಮರಿಯಳೇ, ದೇವರು ನಿನ್ನನ್ನು ಅದ್ಭುತವಾಗಿ ಆಶೀರ್ವದಿಸಿದ್ದಾನೆ. ಕರ್ತನ ತಾಯಿಯಾಗಿರುವ ನೀನು ಇಲ್ಲಿ ಬಂದ ಉದ್ದೇಶವೇನು ಹೇಳು.
ನನ್ನ ಆತ್ಮವು ದೇವರಲ್ಲಿ ಉಲ್ಲಾಸಿಸುತ್ತದೆ... ಆತನು ಮಹಾತ್ಕಾರ್ಯಗಳನ್ನು ಮಾಡಿದ್ದಾನೆ ಮತ್ತು ಆತನ ಹೆಸರು ಪವಿತ್ರನು.
ಎಲಿಸಬೇತಳ ಈ ವಂದನೆಯಿಂದ ಮರಿಯಳಿಗೆ ದೇವರ ರಹಸ್ಯ ತಿಳಿಯಿತು. ಸಂತೋಷದಿಂದ ಘಟ್ಟಿಯಾಗಿ ದೇವರಿಗೆ ಸ್ತೋತ್ರ ಮಾಡಿದಳು.

# ತಂದೆಯ ಪ್ರವಾದನೆ

ಲೂಕ ೧:೫೭-೮೦, ೨:೧-೫












ಅವರು ಹಿಂತಿರುಗಿ ಹೋಗುವಾಗ ಜಕರೀಯನ ಮಗನ ಜನನಕ್ಕೆ ಸಂಭಂದಪಟ್ಟ ವಿಚಿತ್ರ ಘಟನೆಗಳನ್ನು ಮಾತಾಡಿಕೊಂಡರು.







ಮಾರನೇ ದಿನ ಬೆಳಿಗ್ಗೆ ಮರಿಯಳನ್ನು ನೋಡಲು ಯೋಸೇಫನು ಹೊರಟನು.
ಮರಿಯಳೆ, ನೀನು ದೇವರ ಮಗನ ತಾಯಿಯಾಗಬೇಕೆಂದು ದೂತನು ನನಗೆ ಕನಸ್ಸಿನಲ್ಲಿ ತಿಳಿಸಿದನು. ನಿನ್ನನ್ನು ನಿನ್ನ ಮಗುವನ್ನು ನೋಡಿಕೊಳ್ಳಲು ದೇವರು ನನ್ನನ್ನು ಆರಿಸಿಕೊಂಡಿದ್ದಾರೆಂದು ನನಗೆ ತಿಳಿಯಿತು
ಮರಿಯಳು ಮದುವೆಯಾಗಿ ಯೋಸೇಫನ ಮನೆಗೆ ಬರುತ್ತಾಳೆ. ದಿನದ ಕೆಲಸ ಮುಗಿದ ಮೇಲೆ ಅವರಿಬ್ಬರೂ ಮಹಡಿಯ ಮೇಲೆ ಕುಳಿತು ನಕ್ಷತ್ರಗಳನ್ನು ನೋಡುತ್ತಾ ದೇವರು ತಮಗೆ ವಾಗ್ದಾನ ಮಾಡಿದ್ದನ್ನು ಮಾತಾಡಿಕೊಳ್ಳುತ್ತಾರೆ.
ಸಂತೆಯಿಂದ ಹಿಂತಿರುಗುವಾಗ ಯೋಸೇಫನು ಒಂದು ಸಮಾಚಾರ ತರುತ್ತಾನೆ. ಪ್ರತಿಯೊಬ್ಬನು ತನ್ನ ಹೆಸರು ಮತ್ತು ಆಸ್ತಿಯನ್ನು ನೋಂದಾಯಿಸಬೇಕೆಂದು ಅಗಸ್ಟ. ಚಕ್ರವರ್ತಿಯು ಆಜ್ಞಾಪಿಸಿದ್ದಾನೆ. ಯೋಸೇಫನು ಮತ್ತು ಮರಿಯಳು ದಾವೀದನ ಮನೆತನದವರಾದರಿಂದ ಅವರು ದಾವೀದ ನಗರವಾದ ಬೆತ್ಲೆಹೇಮಿಗೆ ಹೋಗಬೇಕಾಗಿತ್ತು.
ಆದರೆ ಈಗ ಹೋಗಲು ಸಾಧ್ಯವಿಲ್ಲ... ಬಿಡಲು ಸಾಧ್ಯವಿಲ್ಲ...
ಚಿಂತಿಸಬೇಡ ಯೋಸೆಫ್, ನಾವು ಹೋಗೋಣ. ದೇವರು ನಮ್ಮೊಂದಿಗಿರುತ್ತಾರೆ.
ನೊಂದಾಯಿಸಲು ಹೋಗುವಾಗ ಬೇರೆಯವರೂ ಅವರೊಂದಿಗೆ ಸೇರಿಕೊಳ್ಳುತ್ತಾರೆ. ಬಹಳ ದೂರ ನಡೆಯಬೇಕಾದುದರಿಂದ ಯೋಸೇಫನೂ, ಮರಿಯಳು ಕಡೆಯವರಾಗಿ ಬೆತ್ಲಹೇಮನ್ನು ತಲುಪುತ್ತಾರೆ.
ಬಹಳ ದೂರ ನಡೆದು ನನ್ನ ಹೆಂಡತಿ ಆಯಾಸವಾಗಿದ್ದಾಳೆ. ಸ್ಥಳ ಕೊಡುತ್ತೀರಾ?
ಕ್ಷಮಿಸಿ, ಈಗಾಗಲೇ ಬಹಳ ಜನರಿರುವುದರಿಂದ ನಮ್ಮಲ್ಲಿ ಸ್ಥಳವಿಲ್ಲ.


ದೇವದೂತರು ಹಾಡಿದ ರಾತ್ರಿ
ಲೂಕ ೧:೨೩-೫೫
ಬಹಳ ದೂರ ನಡೆದು ದಣಿದವರಾಗಿ ಯೋಸೇಫನು ಮತ್ತು ಮರಿಯಳು ಬೆತ್ಲಹೇಮ್ ಸೇರಿದ್ದಾರೆ, ಆದರೆ ತಂಗುವುದಕ್ಕೆ ಎಲ್ಲಿಯೂ ಸ್ಥಳವಿಲ್ಲ.
ನನ್ನ ಹೆಂಡತಿಯ ಹೆರಿಗೆ ಸಮಯ ಹತ್ತಿರವಾಗಿದೆ. ಆಕೆಗೆ ಸ್ಥಳ ಕೊಡುತ್ತೀರಾ?
ಈ ರಾತ್ರಿ ಇಲ್ಲ. ಆದರೆ ದನದ ಕೊಟ್ಟಿಗೆಯಲ್ಲಿ ಮಾತ್ರ ಖಾಲಿಯಾಗಿದೆ.
ಯೋಸೇಫನೇ, ನನಗೆ ಸುಸ್ತಾಗಿದೆ ಅದನ್ನೆ ತೆಗೆದುಕೋ
ಮರಿಯಳೆ, ಇದು ಯೋಗ್ಯ ಸ್ಥಳವಲ್ಲ
ಪರವಾಗಿಲ್ಲ ಯೋಸೆಪ್. ಎಂಥಾ ಸ್ಥಳವಾಗಿದ್ದರೂ ಅದಕ್ಕಾಗಿ ದೇವರಿಗೆ ಸ್ತೋತ್ರ


ಅದೇ ರಾತ್ರಿ ನಗರದ ಹೊರಗಿರುವ ಗುಡ್ಡದ ಬಳಿ ಕುರಿ ಕಾಯುತ್ತಿದ್ದಾರೆ. ಬೆತ್ಲೆಹೇಮಿಗೆ ಬಂದ ಜನರ ಗುಂಪಿನ ಬಗ್ಗೆ ಅವರು ಮಾತಾಡುತ್ತಿದ್ದಾರೆ.
ಹೆಚ್ಚು ತೆರಿಗೆ ವಸೂಲಿ ಮಾಡಲು ಅಗಸ್ಟ್ಯನು ಖಾನೇಷುಮಾರಿ ಮಾಡಿಸಿಕೊಳ್ಳಲು ಹೇಳಿರಬಹುದು. ಇಂತಹವರ ದಬ್ಬಾಳಿಕೆಯಿಂದ ನಮಗೆ ಬಿಡುಗಡೆಯಿಲ್ಲವಾ?
ದೇವರು ಒಬ್ಬ ವಿಮೋಚಕನನ್ನು ವಾಗ್ದಾನ ಮಾಡಿದ್ದಾರೆ. ಅವನನ್ನು ನಾನು ನೋಡಬೇಕೆಂದು ಪ್ರಾರ್ಥಿಸುತ್ತಿದ್ದೇನೆ.
ಇದ್ದಕ್ಕಿದ್ದ ಹಾಗೆ ಅವರ ಸುತ್ತಲೂ ದೊಡ್ಡ ಬೆಳಕು ಪ್ರಕಾಶವಾಗುತ್ತದೆ.
ಏನದು?
ಓ ದೇವರೇ ನಮ್ಮನ್ನು ರಕ್ಷಿಸು
ಹೆದರಬೇಡಿರಿ, ಕೇಳಿರಿ; ಜನರಿಗೆಲ್ಲಾ ಮಹಾ ಸಂತೋಷವನ್ನುಂಟುಮಾಡುವ ಶುಭಸಮಾಚಾರವನ್ನು ನಿಮಗೆ ತಿಳಿಸುತ್ತೇನೆ. ಅದೇನೆಂದರೆ, ಈ ಹೊತ್ತು ನಿಮಗೋಸ್ಕರ ದಾವೀದನೂರಿನಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ ಬಟ್ಟೆಯಿಂದ ಸುತ್ತಿರುವ ಒಂದು ಕೂಸು ಗೋದಲಿನಲ್ಲಿ ಮಲಗಿರುವುದನ್ನು ಕಾಣುವಿರಿ ಎಂದು ಹೇಳಿದನು


ಆಕಾಶವು ದೇವದೂತರ ಗಾನವೃಂದದಿಂದ ಕೂಡಿ.... ದೇವರಿಗೆ ಸ್ತೋತ್ರಗೀತೆ ಹಾಡಿದರು.
ಮೇಲಣ ಲೋಕದಲ್ಲಿ ದೇವರಿಗೆ ಮಹಿಮೆ, ಭೂಮಿಯಲ್ಲಿ ಮನುಷ್ಯರಿಗೆ ಸಮಾಧಾನ.
ದೇವದೂತರು ಅವರನ್ನು ಬಿಟ್ಟು ಹೋದ ಕೂಡಲೇ ಗುಡ್ಡವನ್ನು ಕತ್ತಲೆಯು ಆವರಿಸಿಕೊಳ್ಳುತ್ತದೆ.
ದೇವರು ಈ ರಾತ್ರಿ ಒಬ್ಬ ರಕ್ಷಕನನ್ನು ಕಳುಹಿಸಿದ್ದಾರೆ... ನಂಬುವುದಕ್ಕೆ ಕಷ್ಟವಾಗಿದೆ.
ಕುರುಬರಾದ ನಮಗೆ ಇದನ್ನು ಹೇಳಿದ್ದಾರೆಂದರೆ ಯೋಚಿಸಬೇಕಾದ ವಿಷಯ.
ದೇವದೂತನು ಹೇಳಿದ ರಕ್ಷಕನನ್ನು ನೋಡಲು ಬೆತ್ಲಹೇಮಿಗೆ ಹೋಗೋಣ ನಡೆಯಿರಿ.
ಕುತೂಹಲದಿಂದಲೂ, ಆಶ್ಚರ್ಯದಿಂದಲೂ ಕುರುಬರು ಬೆತ್ಲಹೇಮಿನ ಛತ್ರವನ್ನು ಪ್ರವೇಶಮಾಡುತ್ತಾರೆ.
ಆ ಗೋದಲಿಯಲ್ಲಿ ಬೆಳಕಿದೆ ನೋಡು.
ನಮ್ಮ ರಕ್ಷಕನು ಇಲ್ಲಿದ್ದಾನೆ. ನಾನು ಹೋಗಿ ನೋಡುತ್ತೇನೆ.

ಒಬ್ಬ ಅರಸನು ಹುಟ್ಟಿದ್ದಾನೆ.

ಲೂಕ ೨:೭, ೧೬-೨೦;ಮತ್ತಾಯ ೨:೧-೮

ಅದು ಒಂದು ವಿಚಿತ್ರವಾದ ಮತ್ತು ಪವಿತ್ರವಾದ ರಾತ್ರಿ. ಬೆತ್ಲೆಹೇಮಿಗೆ ಬಂದ ಜನರೆಲ್ಲರೂ ಇನ್ನೂ ನಿದ್ರೆ ಮಾಡುತ್ತಿರುವಾಗಲೇ ದೇವಕುಮಾರನು ಹುಟ್ಟಿದ್ದಾನೆ. ಮರಿಯಳು ಮಗುವನ್ನು ಬಟ್ಟೆಯಿಂದ ಸುತ್ತಿ ಗೋದಲಿಯಲ್ಲಿ ಮಲಗಿಸಿದ್ದಾಳೆ. ಕುರುಬರು ಅದನ್ನು ನೋಡಲು ಬಂದಿದ್ದಾರೆ.







ಹಿಂತಿರುಗಿದ ಮೇಲೆಯೂ ಆ ರಾತ್ರಿಯ ಘಟನೆಗಾಗಿ ದೇವರನ್ನು ಕೊಂಡಾಡುತ್ತಿದ್ದರು. ಅದೇ ರಾತ್ರಿ ಆ ದೇಶದ ಪೂರ್ವದಲ್ಲಿದ್ದ ಜ್ಞಾನಿಗಳು ಅವರು ಕಂಡ ವಿಚಿತ್ರ ಘಟನೆಯನ್ನು ಹೇಳುತ್ತಿದ್ದರು.
ಹೊಸ ನಕ್ಷತ್ರ ಎಲ್ಲಾ ನಕ್ಷತ್ರಗಳಿಗಿಂತಲೂ ಪ್ರಕಾಶಮಾನವಾಗಿದೆ. ಅದಕ್ಕೆ ವಿಶೇಷ ಅರ್ಥವಿರಬಹುದು
ಯಹೂದ್ಯರ ಅರಸೆನು ಹುಟ್ಟಿದ್ದಾನೆಂಬುದಕ್ಕೆ ಇದು ಗುರುತು.
ನಾವು ಯರುಸಲೇಮಿಗೆ ಹೋಗಿ ಆ ಅರಸನನ್ನು ನೋಡೋಣ.
ತಿಂಗಳುಗಟ್ಟಲೇ ಪ್ರಯಾಣ ಮಾಡಿ ಜ್ಞಾನಿಗಳು ಯರುಸಲೇಮನ್ನು ಸೇರಿದರು.
ಯಹೂದ್ಯರ ಅರಸನಾಗಿ ಹುಟ್ಟಿರುವವನನ್ನು ಆರಾದಿಸಲು ಬಂದಿದ್ದೇವೆ. ದಯವಿಟ್ಟು ಅವನೆಲ್ಲಿದ್ದಾನೆಂದು ಹೇಳಿ.
ನೀವು ತಪ್ಪಾಗಿ ತಿಳಿದಿದ್ದೀರಿ. ಇತ್ತೀಚೆಗೆ ಇಲ್ಲಿ ಯಾವ ಅರಸನೂ ಹುಟ್ಟಿಲ್ಲ.

ಜ್ಞಾನಿಗಳು ವಿಚಾರಿಸಲು ಅರಮನೆಗೆ ಬಂದಾಗ.... ತನ್ನ ಸಿಂಹಾಸವನ್ನು ಭದ್ರಪಡಿಸಿಕೊಳ್ಳಲು ಅನೇಕರನ್ನು ಕೊಂದ ಅರಸನಾದ ಹೆರೋದನು ಹೆದರಿದನು. ಅವನು ಮಹಾಯಾಜಕರನ್ನು ಮತ್ತು ಶಾಸ್ತ್ರಿಗಳನ್ನು ಕರೆಸಿದನು.









## ರಾತ್ರಿಯಲ್ಲಿ ಪ್ರಯಾಣ ಮಾಡಿದ್ದು
ಮತ್ತಾಯ ೨:೯-೧೪

ಹೆರೋದನನ್ನು ಸಂದಿಸಿದ ಮೇಲೆ ಜ್ಞಾನಿಗಳು ಬೆತ್ಲೆಹೇಮಿಗೆ ಹೊರಟರು. ಯರುಸಲೇಮನ್ನು ಬಿಟ್ಟ ಕೂಡಲೇ ಮೊದಲು ಕಂಡ ನಕ್ಷತ್ರವನ್ನು ಮತ್ತೆ ನೋಡಿದರು. ಅದು ಅವರನ್ನು ಬೆತ್ಲೆಹೇಮಿಗೆ ನಡೆಸಿತು ಮತ್ತು ಅಲ್ಲಿ...




ವಿಚಿತ್ರವಾಗಿ ಕಾಣುವ ಜನರು ಯೋಸೇಫನು ಮತ್ತು ಮರಿಯಳಿರುವ ಮನೆಯ ಮುಂದಿರುವುದನ್ನು ಕಂಡು ಬೆತ್ಲೆಹೇಮಿನವರು ಆಶ್ಚರ್ಯಪಟ್ಟರು. ಜ್ಞಾನಿಗಳು, ಅವರು ಬಂದ ಉದ್ದೇಶವನ್ನು ತಿಳಿಸಿದಾಗ ಅವರನ್ನು ಒಳಗೆ ಕರೆದರು. ಅವರು ಮಗು ಯೇಸುವಿಗೆ ಅಡ್ಡಬಿದ್ದರು.




ಆ ರಾತ್ರಿ ಜ್ಞಾನಿಗಳು ತಮ್ಮ ಮನೆಗಳಿಗೆ ಹಿಂತಿರುಗಲು ತೀರ್ಮಾನಿಸುತ್ತಾರೆ.
ನಾವು ಕಂಡ ಮಗುವಿನ ವಿಷಯದಲ್ಲಿ ಯೆರೂಸಲೇಮಿಗೆ ಹೋಗಿ, ನಾವು ಹೆರೋದನಿಗೆ ಈಗ ತಿಳಿಸಬಹುದು.


ಮರುದಿನ ಬೆಳಗ್ಗೆ.
ನನಗೊಂದು ಕನಸು ಬಿತು.
ಕನಸಿನಲ್ಲ ನಾವು ಯೆರೂಸಲೇಮಿಗೆ ಹೋಗಬಾರದೆಂದು ದೇವರು ಎಚ್ಚರಿಸಿದರು, ಯಾಕೆಂದರೆ ಹೆರೋದನು ಆ ಮಗುವನ್ನು ಕೊಲ್ಲಲು ಯೋಚಿಸಿದ್ದಾನೆ.


ನನಗೂ ಅದೇ ಕನಸು ಬಿತ್ತು. ಹೆರೋದನಿಗೆ ಏನೂ ತಿಳಿಸದೇ ನಾವು ಬೇರೆ ಮಾರ್ಗವಾಗಿ ಹೋಗೋಣ.


ಹೆರೋದನ ಕೋಪದ ವಿಷಯದಲ್ಲಿ ಎಚ್ಚರಿಸಲ್ಪಟ್ಟವರು ಜ್ಞಾನಿಗಳು ಮಾತ್ರವಲ್ಲ. ದೇವರ ದೂತನು ಯೋಸೇಫನಿಗೂ ಕಾಣಿಸಿಕೊಂಡನು.
ಮರಿಯಳೇ! ಹೆರೋದನು ಯೇಸುವನ್ನು ಕೊಲ್ಲಬೇಕೆಂದಿದ್ದಾನೆ, ನಾವು ತಕ್ಷಣ ತಪ್ಪಿಸಿಕೊಳ್ಳಲು ಐಗುಪ್ತಕ್ಕೆ ಹೋಗಬೇಕು
ಯೇಸುವನ್ನು ಕೊಲ್ಲುವುದಾ! ಓ, ಇಲ್ಲ
ಮಧ್ಯರಾತ್ರಿ ಯೋಸೇಫನು ಮತ್ತು ಮರಿಯಳು ಮಗುವೊಂದಿಗೆ ನಿಶ್ಶಬ್ದವಾಗಿ ಪಟ್ಟಣವನ್ನು ಬಿಟ್ಟು ಹೊರಟು ಹೋದರು.
ಜ್ಞಾನಿಗಳು ತಿರುಗಿ ಬರುತ್ತಾರೆಂದು ಹೆರೋದನು ಯೆರೂಸಲೇಮಿನಲ್ಲಿ ಕಾಯುತ್ತಿದ್ದಾನೆ, ಅವರು ಬಾರದೇ ಇದ್ದಾಗ ಅವನಿಗೆ ಅವರ ಮೇಲೆ ಸಂಶಯ ಬಂತು
ನನ್ನ ಸಿಂಹಾಸನವನ್ನೇರಲು ಆ ಮಗುವನ್ನು ಉಳಿಸಬಾರದು. ಅವನು ತಪ್ಪಿಸಿಕೊಳ್ಳುವುದಕ್ಕಿಂತ ಮುಂಚೆ ಬೆತ್ಲೆಹೇಮಿನ ಎಲ್ಲಾ ಮಕ್ಕಳನ್ನು ನಾನು ಕೊಲ್ಲಿಸುತ್ತೇನೆ.

## ಹುಡುಗನು ದೇವಾಲಯದಲ್ಲಿ

ಮತ್ತಾಯ ೨:೧೬-೨೩; ಲೂಕ ೨:೪೦-೫೨

ಯೇಸು ತನ್ನ ಸಿಂಹಾಸನವನ್ನು ತೆಗೆದುಕೊಳ್ಳುತ್ತಾನೆಂಬ ಬಯದಿಂದ ಹೆರೋದನು ಬೆತ್ಲೆಹೇಮಿನ ಎಲ್ಲಾ ಗಂಡು ಮಕ್ಕಳನ್ನು ಕೊಲ್ಲಬೇಕೆಂದು ಆಜ್ಞಾಪಿಸಿದನು. ಆದರೆ ಯೋಸೆಫನೂ ಮರಿಯಳೂ ಮಗುವೊಂದಿಗೆ ಐಗುಪ್ತಕ್ಕೆ ಹೋಗಿ ತಪ್ಪಿಸಿಕೊಂಡರು. ಕೆಲವು ತಿಂಗಳುಗಳಾದ ಮೇಲೆ ಹೆರೋದನು ಸತ್ತಿದ್ದಾನೆ, ನೀವು ಮಗುವನ್ನು ಕರೆದುಕೊಂಡು ನಜರೇತಿಗೆ ಹೋಗಬಹುದೆಂದು ದೇವದೂತನು ತಿಳಿಸಿದನು.



ಯೋಸೇಫನು ತನ್ನ ಬಡಗಿ ಅಂಗಡಿಯನ್ನು ಪ್ರಾರಂಬಿಸುತ್ತಾನೆ ಮತ್ತು ಯೇಸು ಕೆಲಸ ಕಲಿತು ಅವನಿಗೆ ಸಹಾಯ ಮಾಡುತ್ತಾನೆ. ಕೆಲಸ ಮುಗಿದ ಮೇಲೆ ಪಟ್ಟಣದ ಹಿರಿಯರು ಮಾತಾಡುವುದನ್ನು ಯೇಸು ಆಲಿಸುತ್ತಾನೆ.




ಆದರೆ ಯೋಸೇಫನು ಮತ್ತು ಮರಿಯಳು ದೇವರಿಗೆ ವಿಧೇಯರಾದರು. ಯೇಸುವಿಗೂ ಅದನ್ನು ಕಲಿಸಿಕೊಟ್ಟರು. ಅವರ ಪೂರ್ವಿಕರನ್ನು ದೇವರು ಐಗುಪ್ತದ ಗುಲಾಮತನದಿಂದ ಬಿಡಿಸಿದ್ದನ್ನು ನೆನೆಸಿ ದೇವರಿಗೆ ಕೃತಜ್ಞತೆ ಸಲ್ಲಿಸಲು ಪ್ರತಿವರ್ಷ ಯೆರೂಸಲೇಮಿಗೆ ಹೋಗುತ್ತಿದ್ದರು. ಯೇಸು ಅವರೊಂದಿಗೆ ಇದ್ದುದರಿಂದ ಅವರ ಪ್ರಯಾಣ ಸಂತೋಷಕರವಾಗಿರುತ್ತಿತ್ತು.



ದೇವಾಲಯದಲ್ಲಿ ಆರಾಧನೆ ಮಾಡುವಾಗ, ಯೆಹೂದ್ಯ ಗುರುಗಳ ಬಳಿ ಅನೇಕ ಪ್ರಶ್ನೆಗಳನ್ನು ಕೇಳಬೇಕೆಂದು ಯೋಚಿಸಿದನು



ಹಬ್ಬವು ಮುಗಿದ ಮೇಲೆ ಜನರು ಅವರವರ ಮನೆಗಳಿಗೆ ಹಿಂತಿರುಗಲು ಪ್ರಾರಂಭಿಸಿದರು




ಆದರೆ ಯೇಸುವನ್ನು ಯಾರೂ ಕಾಣಲಿಲ್ಲ. ಯೋಸೇಫನು ಮತ್ತು ಮರಿಯಳು ಯೆರೂಸಲೇಮಿಗೆ ಹಿಂತಿರುಗಿ ಛತ್ರದಲ್ಲಿಯೂ, ಬೀದಿಗಳಲ್ಲಿಯೂ ಮತ್ತು ಕಡೇದಾಗಿ ದೇವಾಲಯದಲ್ಲಿಯೂ ಹುಡುಕಿದರು.
ಯೇಸು! ಎಲ್ಲಾ ಸ್ಥಳಗಳಲ್ಲಿ ನಿನ್ನನ್ನು ಹುಡುಕಿದೆವು
ತಾಯಿ! ನಾನು ನನ್ನ ತಂದೆಯ ಮನೆಯಲ್ಲಿರುತ್ತೇನೆಂದು ನಿನಗೆ ಗೊತ್ತಿಲ್ಲವಾ?


ನಿಮ್ಮ ಮಗನ ವಚನ ಜ್ಞಾನ ನೋಡಿ ನಮಗೆ ಆಶ್ಚರ್ಯವಾಯಿತು. ಅವನು ಕೇಳುವ ಪ್ರಶ್ನೆ ನೋಡಿದರೆ ದೇವರ ಮತ್ತು ಆತನ ಶಾಸ್ತ್ರದ ಜ್ಞಾನವಿದೆಯೆಂದು ತೋರುತ್ತದೆ
ಯೇಸು ಸಾಮಾನ್ಯ ಮನುಷ್ಯನಲ್ಲ. ಅವನ ತಾಯಿಯಾದ ನನಗೆ ಅವನ ಬಗ್ಗೆ ಅರ್ಥವಾಗುತ್ತಿಲ್ಲ.


ಯೋಸೇಫ ಮತ್ತು ಮರಿಯಳೊಂದಿಗೆ ಹಿಂತಿರಿಗಿ ಬಂದು ಯೇಸು ೩೦ ವರ್ಷವಯಸ್ಸಿನವರೆಗೆ ಅವರ ಜೊತೆ ವಾಸಿಸಿದನು. ಯೇಸು ಚೆನ್ನಾಗಿ ಬೆಳೆದನು ಮತ್ತು ನಜರೇತಿನವರು ಅವನನ್ನು ಇಷ್ಟಪಡುತ್ತಿದ್ದರು. ಯೇಸುವೆಂದರೆ ದೇವರಿಗೂ ಇಷ್ಟ. ೭೦ ಮೈಲು ದೂರದ ಸ್ಥಳದಲ್ಲಿ ದೇವರು ಮುಂತಿಳಿಸಿದ ಹಾಗೆ ಅದೇ ವಯಸ್ಸಿನ ಇನ್ನೊಬ್ಬ ಮನುಷ್ಯನು ಯೇಸುವಿನ ಸೇವೆಗೆ ದಾರಿ ಸಿದ್ಧಮಾಡುತ್ತಿದ್ದನು.

ಕೋದಿಸಲ್ಪಟ್ಟನು
ಲೂಕ ೩-೪







ಹಳೇ ಪ್ರವಾದಿಗಳ ಹಾಗೆ ಪ್ರಸಂಗಿಸುತ್ತಾನೆಂದು ಕೇಳಿ ಸ್ನಾನೀಕನಾದ ಯೋಹಾನನ್ನು ನೋಡಲು ಜನರು ಅನೇಕ ಕಡೆಗಳಿಂದ ಬಂದರು. ಕೆಲವರು ಬರೀ ಕುತೂಹಲದಿಂದ ಬಂದರು, ಆದರೆ ಯೋಹಾನನಿಗೆ ಅವರ ಆಲೋಚನೆಗಳು ಗೊತ್ತಿತ್ತು.
ನೀವು ಯಹೂದ್ಯರಾದಾಕ್ಷಣ ದೇವರ ರಾಜ್ಯಕ್ಕೆ ಸೇರುತ್ತೇವೆಂದು ನೆನೆಸುತ್ತೀರೋ? ಇಲ್ಲ, ನೀವು ಮಾನಸಾಂತರ ಹೊಂದಬೇಕು.
ಪರಿಹಾಸ್ಯಗಾರರು ಹಾಗೇ ಹಿಂತಿರುಗುತ್ತಾರೆ, ಆದರೆ ಕೆಲವರು ಆಸಕ್ತಿಯಿಂದ ಕೇಳಿದರು. ಒಂದು ದಿನ ಯೋರ್ದಾನ ನದಿ ಹತ್ತಿರ ಗುಂಪು ಸೇರಿದೆ.
ನೀನು ದೇವರು ವಾಗ್ದಾನ ಮಾಡಿದ ರಕ್ಷಕನೋ?
ಇಲ್ಲ, ನಾನು ನೀರಿನಿಂದ ಸ್ನಾನ ಮಾಡಿಸುತ್ತೇನೆ, ಆದರೆ ಆತನು ಪವಿತ್ರಾತ್ಮನಿಂದ ಸ್ನಾನ ಮಾಡಿಸುತ್ತಾನೆ. ಆ ರಕ್ಷಕನ ಆಗಮನಕ್ಕಾಗಿ ನಿಮ್ಮನ್ನು ಸಿದ್ಧಮಾಡಿಕೊಳ್ಳಿ
ಯೋಹಾನನು ಹೇಳುತ್ತಿದ್ದ ಆ ರಕ್ಷಕನು ಆ ಗುಂಪಿನಲ್ಲಿಯೇ ಇದ್ದನು. ಯೇಸು ನಜರೇತಿನಿಂದ ಅಲ್ಲಿ ಬಂದು ನನಗೆ ದೀಕ್ಷಾಸ್ನಾನ ಕೊಡು ಎಂದು ಕೇಳಿದನು.
ನೀನ್ಯಾಕೆ ದೀಕ್ಷಾಸ್ನಾನಕ್ಕೆ ಬಂದಿದ್ದಿ? ನಾನು ನಿನ್ನಿಂದ ದೀಕ್ಷಾಸ್ನಾನ ಹೊಂದಬೇಕು.
ಯೋಹಾನನೇ, ನಾವು ದೇವರ ರಾಜ್ಯಕ್ಕೆ ಸೇರಿದವರೆಂದು ಈ ರೀತಿ ತೋರಿಸಬೇಕಾಗಿದೆ


ಯೇಸು ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡು ದಡ ಏರಿದ ಕೂಡಲೇ ದೇವರಾತ್ಮನು ಪಾರಿವಾಳದ ರೂಪದಲ್ಲಿ ಅವನ ಮೇಲೆ ಬಂದನು. ಆಗ ಪರಲೋಕದಿಂದ ಆಕಾಶವಾಣಿಯಾಯಿತು.
ಇವನು ನನ್ನ ಪ್ರಿಯಕುಮಾರನು, ಇವನನ್ನು ನಾನು ಮೆಚ್ಚಿದ್ದೇನೆ
ಅಲ್ಲಿ ನಡೆದದ್ದನ್ನು ಜನರು ಅರ್ಥಮಾಡಿಕೊಳ್ಳಲಿಲ್ಲ. ಅವರು ರಕ್ಷಕನನ್ನು ನೋಡಿದೆವೆಂದು ಅರಿಯದೆ ಮನೆಗಳಿಗೆ ಹಿಂತಿರುಗಿದರು. ದೇವರ ರಾಜ್ಯ ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಳ್ಳಿರಿ ಎಂಬ ಸಂದೇಶವನ್ನು ಯೋಹಾನನು ಮುಂದುವರಿಸಿದನು.
ತಂದೆಯ ಮಾತುಗಳು ಯೇಸುವಿಗೆ ಅಂಗೀಕಾರದ ಮಾತುಗಳಾಗಿದ್ದವು ಮತ್ತು ಪವಿತ್ರಾತ್ಮನ ವರವು ದೇವರ ಸಹಾಯದ ನಿಶ್ಚಯವಾಗಿತ್ತು. ದೇವರ ರಾಜ್ಯದ ಸ್ಥಾಪನೆಗಾಗಿ ಆಲೋಚಿಸಲು ಯೇಸು ಏಕಾಂತವಾಗಿ ಮರುಭೂಮಿಗೆ ಹೋದನು
೪೦ ದಿನಗಳಾದ ಮೇಲೆ ಯೇಸುವಿಗೆ ಹಸಿವಾಯಿತು. ಆತನು ಊಟದ ಬಗ್ಗೆ ಚಿಂತಿಸುತ್ತಿರುವಾಗ ಸೈತಾನನು ದೇವರ ಬಲವನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸುವಂತೇ ಪ್ರೇರೆಪಿಸುವ ಮಾತುಗಳನ್ನು ಹೇಳಿದನು, 'ನೀನು ನಿಜವಾಗಿಯೂ ದೇವರ ಮಗನಾಗಿದ್ದರೆ ಈ ಕಲ್ಲುಗಳನ್ನು ರೊಟ್ಟಿಗಳಾಗುವಂತೆ ಮಾಡು' ಎಂದು ಸೈತಾನನು ಯೇಸುವಿಗೆ ಹೇಳಿದನು.
ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದಲ್ಲ, ದೇವರ ಮಾತಿನಿಂದ ಬದುಕುವನೆಂದು ಗ್ರಂಥವು ಹೇಳುತ್ತದೆ.
ಸೈತಾನನು ಅಷ್ಟು ಸುಲಭವಾಗಿ ಬಿಡದೆ, ಈ ಸಲ ಇನ್ನೂ ಬಲವಾದ ಶೋಧನೆ ಕೊಡುತ್ತಾನೆ.


ಮರುಭೂಮಿಯಲ್ಲಿ ಜಯ
ಯೇಸು ದೇವರ ಕೆಲಸವನ್ನು ಮುಂದುವರೆಸಬಾರದೆಂದು ಹಾಗೂ ಭೂಲೋಕದ ಅದಿಕಾರ ಹುಡುಕಲೆಂದು ಸೈತಾನನು ಶೋದಿಸಿದನು, ಆದರೆ ಯೇಸು ಅದನ್ನೂ ನಿರಾಕರಿಸಿದನು. ಸೈತಾನನು ಈಗ ಇನ್ನೂ ಬಲವಾದ ಶೋದನೆಯನ್ನು ತರುತ್ತಿದ್ದಾನೆ.
'ನೀನು ದೇವಾಲಯ ಮೇಲಿಂದ ದುಮುಕಿ, ನಿನ್ನ ಶಕ್ತಿಪ್ರದರ್ಶನ ತೋರಿಸು, ಯಾಕೆಂದರೆ ನೀನು ದೇವರ ಮಗನೂ ಮತ್ತು ದೇವದೂತರು ನಿನ್ನನ್ನು ಎತ್ತಿಕೊಳ್ಳುವರು' ಎಂದು ಸೈತಾನನು ಹೇಳಿದನು.
'ದೇವರನ್ನು ಪರೀಕ್ಷಿಸಬಾರದು' ಎಂದು ಶಾಸ್ತ್ರವು ಹೇಳುತ್ತದೆ
ಎಲ್ಲಾ ಶೋದನೆಗಳನ್ನು ಜಯಿಸಿದ ಮೇಲೆ ಯೇಸು ಮರುಭೂಮಿಯನ್ನು ಬಿಟ್ಟು ಯೋರ್ದಾನಿನ ಆಚೆ ಇರುವ ಬೆಥಾನ್ಯಕ್ಕೆ ಹಿಂತಿರುಗಿದನು.


ಯೇಸು ಬೆಥಾನ್ಯಕ್ಕೆ ಪ್ರವೇಶ ಮಾಡಿದಾಗ ಸ್ನಾನಿಕನಾದ ಯೋಹಾನನು ತನ್ನ ಇಬ್ಬರು ಶಿಷ್ಯರಾದ ಆಂದ್ರೇಯ ಯೋಹಾನರಿಗೆ ತೋರಿಸ್ಥಿದನು.
ನಾನು ನಿಮಗೆ ತಿಳಿಸಿದ ರಕ್ಷಕನು ಈತನೇ
ಆ ಇಬ್ಬರೂ ಶಿಷ್ಯರು ಕೂಡಲೆ ಯೇಸುವನ್ನು ಹಿಂಬಾಲಿಸಿದರು
ಯಜಮಾನನೇ ನಾವು ನಿನ್ನೊಂದಿಗೆ ಮಾತಾಡಬಹುದಾ?
ಹೌದು, ನಾನಿರುವ ಸ್ಥಳಕ್ಕೆ ಬನ್ನಿ
ಯೇಸು ಹೇಳುವುದು ಕೇಳುವುದು ಒಂದು ಅದ್ಭುತವಾದ ಅನುಭವವಾಗಿದ್ದು. ಆ ಸಮಯದಲ್ಲಿ ಆಂದ್ರೇಯನಿಗೆ ಒಂದು ಜ್ಞಾಪಕ ಬರುತ್ತದೆ.
ಸ್ನಾನೀಕನಾದ ಯೋಹಾನನು ಹೇಳುವುದನ್ನು ಕೇಳಲು ನನ್ನ ಅಣ್ಣ ಕಪೆರ್ನೌಮಿನಿಂದ ಇಲ್ಲಿಗೆ ಬಂದಿದ್ದಾನೆ. ಅವನನ್ನು ಹುಡುಕಿ ಕರೆದುಕೊಂಡು ಬರುತ್ತೇನೆ.
ಆಂದ್ರೇಯನೂ, ತಾನು ಮತ್ತು ಅಣ್ಣನೂ ತಂಗಿದ್ದ ಸ್ಥಳಕ್ಕೆ ಓಡಿ ಹೋಗುತ್ತಾನೆ
ಸಿಮಿಯೋನನೇ! ನಾನು ರಕ್ಷಕನನ್ನು ನೋಡಿದೆ.


ಬೆಥಾನ್ಯದ ತಿರುಗು ದಾರಿಗಳಲ್ಲಿ ಸಿಮೆಯೋನನು ಕುತೂಹಲದಿಂದ ಆಂದ್ರೇಯನನ್ನು ಹಿಂಬಾಲಿಸುತ್ತಾನೆ
ಇವನು ನನ್ನ ಅಣ್ಣನಾದ, ಸಿಮೆಯೋನ
ಹೌದು, ನೀನು ಸಿಮೋನ, ಆದರೆ ಇನ್ನು ಮೇಲೆ ಪೇತ್ರ ಯಾಕೆಂದರೆ ನೀನು ಬಂಡೆಯ ಹಾಗಿರುವಿ
ಮರುದಿನ ಯೇಸು ಗಲಿಲಾಯದ ಉತ್ತರ ಪ್ರಾಂತಕ್ಕೆ ಹೋಗುತ್ತಾನೆ. ತನ್ನ ಶಿಷ್ಯನಾಗಲು ಇನ್ನೊಬ್ಬ ಯುವಕನಾದ ಫಿಲಿಪ್ಪನನ್ನು ಯೇಸು ಕರೆಯುತ್ತಾನೆ
ಆಂದ್ರೇಯನ ಹಾಗೆ ಫಿಲಿಪ್ಪನು ಯೇಸುವನ್ನು ಹಿಂಬಾಲಿಸಿ, ಈ ವಿಷಯವನ್ನು ತನ್ನ ಗೆಳೆಯನಿಗೆ ತಿಳಿಸಲು ಓಡುತ್ತಾನೆ
ನತಾನಿಯೇಲನೇ, ನನ್ನ ಜೊತೆ ಬಾ, ನಾನು ನಜರೇತಿನ ಯೇಸುವೆಂಬ ರಕ್ಷಕನನ್ನು ಕಂಡಿದ್ದೇನೆ
ನಜರೇತಿನಿಂದ ಏನಾದರು ಒಳ್ಳೆಯದು ಬರುವುದುಂಟಾ?
ನೀನು ಹೇಳುವುದು ನಿಜವಾಗಿದ್ದರೆ ಜನರು ಎಲ್ಲವನ್ನು ಬಿಟ್ಟು ಅವನನ್ನು ಹಿಂಬಾಲಿಸುತ್ತಾರೆ.
ನೀನೇ ಬಂದು ನೋಡು
ನತಾನಿಯೇಲನು ಯೇಸುವನ್ನು ನೋಡುತ್ತಾನೆ ಆದರೆ ನಂಬುವುದಿಲ್ಲ. ಆಗ ಯೇಸು ಮಾತಾಡುತ್ತಾನೆ.

ಆರು ನೀರಿನ ಜಾಡಿಗಳು

ಯೋಹಾನ ೧:೪೬-೫೧; ೨:೧-೧೧, ೨೩-೨೫; ೩:೧,೨




ಅವರು ಪಟ್ಟಣವನ್ನು ತಲುಪಿದಾಗ ಯೇಸುವಿನ ಸ್ನೇಹಿತನೊಬ್ಬನು ಅವರನ್ನು ವಂದಿಸುತ್ತಾನೆ.
ದಯವಿಟ್ಟು ನನ್ನ ಮದುವೆಗೆ ಬಾ... ನಿನ್ನ ತಾಯಿಯು ಬರಲಿದ್ದಾಳೆ
ವಂದನೆಗಳು... ನಾವು ನಿನ್ನ ಸಂತೋಷವನ್ನು ಹಂಚಿಕೊಳ್ಳಲಿಚ್ಛಿಸುತ್ತೇವೆ
ಸಂಭ್ರಮದ ವೇಳೆಯಲ್ಲಿ ಮದಲಿಂಗನಿಗೆ ಅವಮಾನವನ್ನುಂಟು ಮಾಡುವ ವಿಷಯವೊಂದನ್ನು ಕಂಡುಕೊಳ್ಳತ್ತಾಳೆ.ದ್ರಾಕ್ಷಾರಸವು ತೀರಿಹೋಗಿದೆ. ಅವಳು ಯೇಸುವಿಗೆ ಹೇಳಿ, ನಂತರ ಆಳುಗಳ ಬಳಿಗೆ ಹೋಗುತ್ತಾಳೆ.
ಆತನು ನಿಮಗೆ ಹೇಳುವದನ್ನೆಲ್ಲಾ ಮಾಡಿರಿ
ಈ ಬಾನೆಗಳನ್ನು ನೀರಿನಿಂದ ತುಂಬಿಸಿರಿ
ಯಾಕೆ ನೀರು? ನಮಗೆ ಬೇಕಾಗಿರುವದು ದ್ರಾಕ್ಷಾರಸ
ಆದರೆ ಆಳುಗಳಿಗೆ ಯೇಸುವಿನಲ್ಲಿ ಒಂದು ಬಲವಾದ ಅಧಿಕಾರ ಇದೆಯೆಂದು ಭಾಸವಾಗುತ್ತದೆ ಹಾಗು ಅವರು ಆತನಿಗೆ ವಿಧೇಯರಾಗುತಾರೆ
ಈಗ, ಸ್ವಲ್ಪನ್ನು ಪಾರುಪತ್ಯಗಾರನಿಗೆ ಕೊಡಿರಿ.
ಯಾಕೆ... ಇದು ದ್ರಾಕ್ಷಾರಸ! ಇದು ಒಂದು ಅದ್ಭುತವೆ! ಇವನು ದೇವರ ಪ್ರವಾದಿಯಾಗಿರಬೇಕು.. ಯಾವ ಸಾಮಾನ್ಯ ಮನುಷ್ಯನು ಇಂಥಹ ಸಂಗತಿಯನ್ನು ಮಾಡಲಾರನು.


ಔತಣದ ಪಾರುಪತ್ಯಗಾರನು ಆ ದ್ರಾಕ್ಷಾರಸದ ರುಚಿಯನ್ನು ನೋಡಿ ಎಷ್ಟು ಆಶ್ಚರ್ಯಗೊಂಡನೆಂದರೆ ವಿವಾಹ ಸಂಭ್ರಮದಲ್ಲಿದ್ದ ಮದಲಿಂಗನನ್ನು ಪಕ್ಕಕ್ಕೆ ಕರೆಯುತ್ತಾನೆ.
ಪ್ರಭುವೇ,ಉತ್ತಮ ದ್ರಾಕ್ಷಾರಸವನ್ನು ಸಾಮಾನ್ಯವಾಗಿ ಮೊದಲು ಹಂಚುತ್ತಾರೆ, ಆದರೆ ನೀನು ಅದನ್ನು ಕೊನೆಗೆ ಉಳಿಸಿದ್ದೀ.
ಜನರು ಸಂತೋಷವಾಗಿದ್ದರೆ ನನಗೂ ಸಂತೋಷವೇ!
ಯೇಸುವಿನ ಶಿಷ್ಯರು ಅದ್ಭುತದ ಬಗ್ಗೆ ಕೇಳಿದಾಗ ಚಕಿತರಾದರು. ಅವರು ಪಸ್ಕ ಹಬ್ಬಕ್ಕಾಗಿ ಯೆರೂಸಲೇಮಿಗೆ ಸಾಗುತ್ತಿರುವಾಗ ಇದರ ಕುರಿತು ಮಾತಾಡುತ್ತಾರೆ. ಮೆಸ್ಸೀಯನು ಬರುತ್ತಾನೆಂದು ಸ್ನಾನಿಕನಾದ ಯೋಹಾನನು ಹೇಳುವದನ್ನು ಕೇಳಿದ್ದ ಜನರ ಗುಂಪು ಪಟ್ಟಣದಲ್ಲೆಲ್ಲಾ ತುಂಬಿತ್ತು. ನಾವು ಅವನನ್ನು ಹೇಗೆ ಗುರುತಿಸುವೆವು?ಎಂದು ಮಾತಾಡಿಕೊಳ್ಳುತ್ತಿದ್ದರು.


ಯೇಸು ಜನರಿಂದ ತುಂಬಿದ್ದ ಬೀದಿಗಳನ್ನು ದಾಟಿಕೊಂಡು ಹೋಗುವಾಗ ಕುಂಟರನ್ನು, ರೋಗಿಗಳನ್ನು ಆತನು ವಾಸಿಮಾಡುತ್ತಾನೆ.
ನಾನು ನಡೆಯಬಲ್ಲೆ! ದೇವರಿಗೆ, ಸ್ತೋತ್ರ... ಈತನು ನನ್ನನ್ನು, ಗುಣಪಡಿಸಿದನು!


ಈ ಅದ್ಭುತಗಳ ಕಾರಣದಿಂದ ಜನರು 'ಯೇಸು ಮೆಸ್ಸಿಯನೋ? ಎಂದು ಪ್ರಶ್ನಿಸಿಕೊಳ್ಳತೊಡಗಿದರು. ಒಂದು ರಾತ್ರಿ ಯಾರು ತಿರುಗಾಡದ ವೇಳೆಯಲ್ಲಿ ಯೆಹೂದ್ಯ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಯು ಒಂದು ರಹಸ್ಯ ಉದ್ದೇಶದೊಂದಿಗೆ ಯೆರೂಸಲೇಮಿನ ಬೀದಿಗಳಲ್ಲಿ ಗುಪ್ತವಾಗಿ ಹೊರಟಿದ್ದಾನೆ.

ನ್ಯಾಯಾದೀಶನ ಸಮಸ್ಯೆ

ಯೋಹಾನ ೩:೩ - ೪:೬




ನೀನು ಭೂಲೋಕದ ತಂದೆತಾಯಿಯರಲ್ಲಿ ಒಮ್ಮೆ ಹುಟ್ಟಿರುವಿ. ಆದರೆ ನೀನು ದೇವರ ರಾಜ್ಯದಲ್ಲಿ ಜೀವಿಸಬೇಕಾದರೆ ದೇವರ ಆತ್ಮನಿಂದ ಹೊಸದಾಗಿ ಹುಟ್ಟಲೇಬೇಕು.
ನನಗೆ ಏನೂ ಅರ್ಥವಾಗಲಿಲ್ಲ
ನೀನು ಗಾಳಿಯನ್ನು ನೋಡಲಾರಿ ಆದರೆ ಅದು ಏನು ಮಾಡುತ್ತದೆಂಬುದನ್ನು ನೋಡುತ್ತಿ. ನೀನು ದೇವರ ಆತ್ಮನನ್ನು ಕಾಣಲಾರಿ ಆದರೆ ದೇವರ ಆತ್ಮನಿಂದ ಹೊಸದಾಗಿ ಹುಟ್ಟಿ ತನ್ನ ಹೃದಯದಲ್ಲಿ ದೇವರ ಆತ್ಮನನ್ನು ಹೊಂದಿರುವ ವ್ಯಕ್ತಿಯ ಜೀವಿತದಿಂದ ನೀನು ತಿಳಿಯುವಿ. ದೇವರು ಲೋಕವನ್ನು ಪ್ರೀತಿಸಿ ತನ್ನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬರಿಗೂ ಈ ಹೊಸಜೀವವನ್ನು ನೀಡುವದಕ್ಕೆ ತನ್ನನ್ನು ಕಳುಹಿಸಿದ್ದಾನೆ.
ನಿಕೋದೇಮನು ಇನ್ನೂ ಅರ್ಥಮಾಡಿಕೊಳ್ಳದೆ ಇದ್ದಾನೆ. ಆದರೂ ಯೇಸು ಮತ್ತು ಆತನ ಬೋಧನೆಗಳನ್ನು ಕುರಿತು ಹೆಚ್ಚು ಕಲಿಯುವ ಬಯಕೆಯನ್ನು ಹೊಂದಿದವನಾಗಿ ಹೊರಟು ಹೋಗುತ್ತಾನೆ.
ಯೆರೂಸಲೇಮಿನಲ್ಲಿನ ಜನರು ಇನ್ನೂ ತನ್ನನ್ನು ಅವರ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳಲು ಸಿದ್ಧರಿಲ್ಲ ಎಂಬುದನ್ನು ಯೇಸು ತಿಳಿಯುತ್ತಾನೆ, ಆದುದರಿಂದ ಆತನು ಆ ಪಟ್ಟಣದಿಂದ ಹೊರಡುತ್ತಾನೆ. ಯೂದಾಯದಲ್ಲಿ ಆತನು ಜನರಿಗೆ ದೇವರರಾಜ್ಯದ ಕುರಿತಾಗಿ ಮತ್ತು ಅದರೊಳಗೆ ಪ್ರವೇಶಿಸಲು ಅವರು ಏನು ಮಾಡಬೇಕೆಂದು ಹೇಳುತ್ತಾನೆ. ಈ ಸ್ಥಳದಲ್ಲಿ ಜನರು ಅತ್ಯಾಸಕ್ತಿಯಿಂದ ಕೇಳುತ್ತಾರೆ.
ಈ ಬೋಧಕನು ಎಲ್ಲಾ ಪ್ರವಾದಿಗಳಿಗಿಂತ ಶ್ರೇಷ್ಠನಾಗಿದ್ದಾನೆ.
ಯೇಸು ಯೂದಾಯದಲ್ಲಿ ಮಾಡಿದ ಯಶಸ್ವಿಕರ ಸೇವೆಯು ಸ್ನಾನಿಕನಾದ ಯೋಹಾನನ ಕಿವಿಗೆ ಮುಟ್ಟುತ್ತದೆ.
ಯೇಸು ದಿನದಿಂದ ದಿನಕ್ಕೆ ಹೆಚ್ಚುಪ್ರಸಿದ್ಧನಾಗುತ್ತಿದ್ದಾನೆಂದು ನಾನು ಕೇಳಿದೆ.
ದೇವರಿಗೆ ಸ್ತೋತ್ರವಾಗಲಿ, ಆತನಿಗಾಗಿ ದಾರಿಯನ್ನು ಸಿದ್ಧಮಾಡುವ ತನ್ನ ಲಕ್ಷ್ಯವನ್ನು ನಾನು ನೆರವೇರಿಸಿದ್ದೇನೆ. ಆತನು ಹೆಚ್ಚಿಸಲ್ಪಡ ಬೇಕು, ನಾನು ತಗ್ಗಿಸಲ್ಪಡಲಿ.


ಸ್ವಲ್ಪ ಕಾಲದ ನಂತರ ಯೇಸು ತನ್ನ ನಂಬಿಗಸ್ಥ ಸ್ನೇಹಿತನ ಕುರಿತು ಸುದ್ದಿಯನ್ನು ಕೇಳುತ್ತಾನೆ.
ಸ್ನಾನಿಕನಾದ ಯೋಹಾನನು ಕ್ರಾಂತಿಯನ್ನು ಪ್ರಾರಂಬಿಸಲು ಪ್ರಯತ್ನಿಸಿದ್ದರಿಂದ ಹೇರೋದನು ಅವನನ್ನು ಸೆರೆಮನೆಯಲ್ಲಿ ಹಾಕಿದ್ದಾನೆ.
ಕ್ರಾಂತಿ? ಇಲ್ಲ ನಿಜವಾದ ಕಾರಣವೇನೆಂದರೆ ಹೇರೋದನು ತನ್ನ ತಮ್ಮನ ಹೆಂಡತಿಯನ್ನು ವಿವಾಹವಾದದ್ದನ್ನು ಯೋಹಾನನು ಖಂಡಿಸಿದನು.
ಇದಾದ ಕ್ಷಣವೇ ಯೇಸು ತನ್ನ ಸೇವೆಯನ್ನು ಇನ್ನೊಂದು ಸ್ಥಳಕ್ಕೆ ವಿಸ್ತರಿಸಲು ತಿರ್ಮಾನಿಸಿದನು. ಆತನು ಸಮಾರ್ಯದ ಉತ್ತರಕ್ಕಿರುವ ಗಲಿಲಾಯಕ್ಕೆ ಪ್ರಯಾಣ ಪ್ರಾರಂಭಿಸುತ್ತಾನೆ.
ಅವರು ಸಮಾರ್ಯದಲ್ಲಿನ ಒಂದು ಪಟ್ಟಣವನ್ನು ತಲುಪಿದಾಗ ಯೇಸು ಆಹಾರವನ್ನು ಕೊಂಡು ಕೊಳ್ಳಲು ತನ್ನ ಶಿಷ್ಯರನ್ನು ಮುಂದಾಗಿ ಕಳಿಸುತ್ತಾನೆ.
ಸಮಾರ್ಯದ ಮಾರ್ಗವಾಗಿ ಗಲಿಲಾಯವನ್ನು ಶೀಘ್ರವಾಗಿ ಮುಟ್ಟ ಬಹುದು ಆದರೆ ಇದು ಉಚಿತವೆಂದು ತೋರುವದಿಲ್ಲ. ಸಮಾರ್ಯರು ಯೆಹೂದ್ಯರಾದ ನಮ್ಮನ್ನು ದ್ವೇಷಿಸುತ್ತಾರೆ
ಯೇಸು ಒಂದು ಬಾವಿಯ ಬಳಿಯಲ್ಲಿ ವಿಶ್ರಮಿಸಿಕೊಳ್ಳುತಿರುವಾಗ ಒಬ್ಬ ಸ್ತ್ರೀಯು ನೀರಿಗಾಗಿ ಬಾನೆಯೊಂದನ್ನು ಹಿಡಿದು ಕೊಂಡು ಬರುತ್ತಾಳೆ
ಯೆಹೂದ್ಯನು ! ಯೆಹೂದ್ಯರಿಗೆ ಸಮಾರ್ಯದಲ್ಲಿ ಸ್ವಾಗತವಿಲ್ಲ ಎಂದು ಇವನಿಗೆ ಗೊತ್ತಿಲ್ಲವೊ?


ವೈರಿಗಳ ಸ್ಥಳ
ಯೋಹಾನ ೪:೬-೪೪, ಲೂಕ ೪:೧೬-೨೮
ಯೆಹೂದ್ಯರು ಮತ್ತು ಸಮಾರ್ಯರು ಸುಮಾರು ೫೦೦ ವರ್ಷಗಳಿಂದಲೂ ಕಡು ವೈರಿಗಳಾಗಿದ್ದರು, ಆದಕಾರಣ ಯೇಸು ಸಮಾರ್ಯ ಸ್ತ್ರೀಯ ಬಳಿಗೆ ಕುಡಿಯಲು ನೀರನ್ನು ಕೇಳಿದಾಗ, ಅವಳು ವಿಸ್ಮಯ ಪಟ್ಟಳು
ಏನು? ಯೆಹೂದ್ಯನಾದ ನೀನು ಸಮಾರ್ಯಳಾದ ನನ್ನಿಂದ ನೀರನ್ನು ಕೇಳುವದೆ?
ನಾನು ಯಾರೆಂದು ನಿನಗೆ ತಿಳಿದಿದ್ದರೆ ಜೀವದ ನೀರನ್ನು ಕೊಡುವಂತೆ ನನ್ನನ್ನು ಬೇಡಿಕೊಳ್ಳುತ್ತಿದ್ದೀ.
ಆದರೆ ಬಾವಿಯು ಆಳವಾಗಿದೆ, ಅಲ್ಲಿಂದ ನೀರನ್ನು ತೆಗೆಯಲು ನಿನ್ನಲ್ಲಿ ಏನು ಇಲ್ಲ
ಈ ಬಾವಿಯ ನೀರನ್ನು ಕುಡಿಯುವವನು ತಿರಿಗಿ ದಾಹಗೊಳ್ಳುವನು ಆದರೆ ನಾನು ಕೊಡುವ ನೀರನ್ನು ಕುಡಿಯುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ, ಕಾರಣ ಇದು, ನಿತ್ಯಜೀವದ ದೇವರ ವರವಾಗಿದೆ.




ಆ ಸ್ತ್ರೀಯು ಇನ್ನೂ ಪಟ್ಟಣದಲ್ಲಿರುವ ವೇಳೆ ಯೇಸುವಿನ ಶಿಷ್ಯರು ಹಿಂದಿರಿಗಿ ಬಂದು ತಾವು ತಂದಿದ್ದ ಊಟವನ್ನು ಸೇವಿಸಲು ಆತನನ್ನು ಕರೆಯುತ್ತಾರೆ.







ಒಂದು ಸಬ್ಬತ್ತಿನ ದಿವಸದಲ್ಲಿ ಆತನು ತನ್ನ ಊರಾದ ನಜರೇತಿನಲ್ಲಿನ ಸಭಾಮಂದಿರಕ್ಕೆ ಹೋಗುತ್ತಾನೆ. ಅಲ್ಲಿ ಆತನು ಯೆಶಾಯನ ಪುಸ್ತಕದಲ್ಲಿನ ಒಂದು ಭಾಗವನ್ನು ಓದುತ್ತಾನೆ, ಅದು ಮೆಸ್ಸೀಯನ ಬರೋಣವನ್ನು ಕುರಿತು ತಿಳಿಸುತ್ತದೆ. ನಂತರ ಆತನು ಬೋಧಿಸಲು ಕುಳಿತುಕೊಳ್ಳುತ್ತಾನೆ.
ಇಂದು ನೀವು ಕೇಳಿರುವ ವಾಕ್ಯಭಾಗವು ನೆರವೇರಿರುತ್ತದೆ.
ನೀನು ಮೆಸ್ಸೀಯನೊ? ಯಾಕೆ, ನೀನು ನಜರೇತಿನ ಬಡಗಿಯೊಬ್ಬನ ಮಗನಷ್ಟೇ.
ಯಾವ ಪ್ರವಾದಿಗೂ ಸ್ವಂತ ಊರಿನಲ್ಲಿ ಸ್ವೀಕಾರವಿಲ್ಲ. ನೆನಪಿರಲಿ...ಎಲೀಷನ ದಿನಗಳಲ್ಲಿ ಇಸ್ರಾಯೇಲಿನೊಳಗೆ ಅನೇಕ ಕುಷ್ಠ ರೋಗಿಗಳಿದ್ದರು. ಆದರೆ ಪ್ರವಾದಿಯು ಹೊರಗಿನವನಾದ ನಾಮಾನನ್ನು ಮಾತ್ರವೇ ಗುಣಪಡಿಸಿದನು.
ದೇವರು ತನ್ನ ಸ್ವಕೀಯ ಜನರಾದ ಅವರಿಗಿಂತಲೂ ಅಪರಿಚಿತರಿಗೆ ಹೆಚ್ಚು ಕಾರ್ಯವನ್ನು ಮಾಡುತ್ತಾನೆಂಬ ಯೋಚನೆಯು ಆರಾಧನೆಗೆ ಬಂದಿದ್ದ ಅವರನ್ನು ಕೋಪಗೊಂಡ ಗಲಭೆಗಾರರನ್ನಾಗಿ ಮಾಡುತ್ತದೆ.
ಇವನನ್ನು ಪಟ್ಟಣದಿಂದ ಹೊರ ತಳ್ಳಿರಿ.
ಅವನನ್ನು ಸಾಯಿಸಿರಿ


ಆದರೆ ತಕ್ಷಣವೇ ಯೇಸು ಮೂವತ್ತು ವರ್ಷಗಳಿಂದಲೂ ತನ್ನನ್ನು ತಿಳಿದಿದ್ದ ಸ್ತ್ರೀಮುತ್ತು ಪುರುಷರ ಮುಖಗಳನ್ನು ದೃಷ್ಟಿಸುತ್ತಾನೆ. ನಂತರ ತಾನು ನಿಧಾನವಾಗಿ ಅವರ ಮದ್ಯದೊಳಗಿಂದ ನಡೆಯುತ್ತಾನೆ. ಹಾಗು ಆಶ್ಚರ್ಯವೇನೆಂದರೆ ಈ ಒಬ್ಬನಾದರೂ ಇವನನ್ನು ಮುಟ್ಟಲು ದೈರ್ಯಗೊಳ್ಳಲಿಲ್ಲ.


ಯೇಸು ನಜರೇತಿನಿಂದ ಗಲಿಲಾಯ ಸಮುದ್ರದ ದಡದಲ್ಲಿದ್ದ ಕಿಪೆರ್ನೌಮಿಗೆ ಹೋಗುತ್ತಾನೆ. ಅಲ್ಲಿ ಆತನು ಯೊರ್ದಾನ ನದಿಯ ಹತ್ತಿರ ಬೇಟಿಯಾದ ಸಹೋದರರು ಇರುವದನ್ನು ನೋಡುತ್ತಾನೆ.
ಪೇತ್ರ !ಅಂದ್ರೇಯ!ನನ್ನನ್ನು ಹಿಂಬಾಲಿಸಿರಿ, ನಿಮ್ಮನ್ನು ಮನುಷ್ಯರನ್ನು ಹಿಡಿಯುವವರನ್ನಾಗಿ ಮಾಡುತ್ತೇನೆ.


ಅವರು ತಕ್ಷಣವೇ ತಮ್ಮ ಬಲೆಗಳನ್ನು ಬಿಟ್ಟು ಯೇಸುವಿನೊಂದಿಗೆ ಹೋಗುತ್ತಾರೆ. ಅದೇ ದಡದಲ್ಲಿ ಮುಂದೆ ಯಾಕೋಬ ಮತ್ತು ಯೋಹಾನರೆಂಬ ಸ್ನೇಹಿತರನ್ನು ನೋಡುತ್ತಾನೆ.
ನನ್ನೊಂದಿಗೆ ಬನ್ನಿರಿ ಮತ್ತು ಶಿಷ್ಯರಾಗಿರಿ.


ಮೇಲ್ಛಾವಣಿಯ ಮೂಲಕ
ಮಾರ್ಕ ೨:೧-೧೨ ರಿಂದ
ಯೇಸು ಹೋದಲೆಲ್ಲಾ ಜನರು ಗುಂಪಾಗಿ ಆತನನ್ನು ಹಿಂಬಾಲಿಸುತ್ತಿದ್ದರು. ಒಂದು ದಿನ ಕಪೆರ್ನೌಮಿನಲ್ಲಿ ಯೇಸು ಬೋಧಿಸುತ್ತಲಿದ್ದ ಮನೆಯೊಳಗೆ ಅನೇಕ ಜನರು ಗುಂಪು ಗುಂಪಾಗಿ ತುಂಬಿಕೊಂಡು ಬೇರೆಯಾರೊಬ್ಬರು ಪ್ರವೇಶಿಸಲು ಸಾಧ್ಯ ಇರಲಿಲ್ಲ. ಕೆಲವು ಗಂಡಸರು ತನ್ನ ಅಸ್ವಸ್ಥ ಸ್ನೇಹಿತನನ್ನು ಯೇಸುವಿಗೆ ಬೇಟಿ ಮಾಡಿಸಲು ತಂದು ಜನರ ಗುಂಪಿನಿಂದ ಒಳಗೆ ಹೋಗಲು ಆಗಲಿಲ್ಲ. ಆದ್ದರಿಂದ ಅವರು ಅವನನ್ನು ಮೇಲ್ಛಾವಣಿಗೆ ಹೊತ್ತುಕೊಂಡು ಹೋಗುತ್ತಾರೆ.
ನಿನ್ನನ್ನು ಒಳಗೆ ಇಳಿಸಲು ರಂಧ್ರವನ್ನು ಮಾಡುತ್ತಿದ್ದೇವೆ.
ಏನು ಮಾಡುತ್ತಿದ್ದೀರಿ?


ಕೆಲವು ನಿಮಿಷಗಳ ಶ್ರಮದ ಫಲಿತವಾಗಿ ರೋಗಿಯನ್ನು ಮೇಲ್ಛಾವಣಿಯ ಮೂಲಕ ಕೆಳಗೆ ಇಳಿಸುತ್ತಾರೆ. ಸಹಾಯ ಮಾಡುವಂತೆ ಯೇಸುವನ್ನು ಬೇಡಿಕೊಳ್ಳುತ್ತಾರೆ, ಕಾರಣ ಯೇಸು ಆ ವ್ಯಕ್ತಿಯ ನಿಜವಾದ ಅಗತ್ಯತೆಯನ್ನು ತಿಳಿದಿದ್ದಾನೆ.
ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ.


ಜನರು ಚಕಿತರಾಗುತ್ತಾರೆ. ಆದರೆ ಯೇಸು ಹೇಳುವದನ್ನು ಕೇಳ ಬೇಕೆಂಬ ಕುತೂಹಲದಿಂದ ಬಂದಿದ್ದ ಪರಿಸಾಯರು ಕೋಪಗೊಳ್ಳುತ್ತಾರೆ.
ಪಾಪಗಳನ್ನು ಕ್ಷಮಿಸುವವನಂತೆ ವರ್ತಿಸುವ ಇವನಾರು?
ಇವನು ದೇವರಂತೆ ವರ್ತಿಸಲು ಎಷ್ಟು ಧೈರ್ಯ!
ಪರಿಸಾಯರು ಯೆಹೂದ್ಯರ ಒಂದು ಗುಂಪಾಗಿದ್ದು ದೇವರು ಮೋಶೆಗೆ ನೀಡಿದ ಧರ್ಮಶಾಸ್ತ್ರ ಮಾತ್ರವಲ್ಲದೆ ಸಬ್ಬತ್ತಿನಲ್ಲಿ ಒಬ್ಬನು ಇಷ್ಟೇದೂರ ನಡೆಯಬೇಕು ಎಂಬಂತಹ ಅನೇಕ ನಿಯಮಗಳನ್ನು ಮಾಡಿಕೊಂಡು ಅವುಗಳನ್ನು ಪಾಲಿಸುತ್ತಿದ್ದರು. ಯೇಸು ಅವರ ನಿಯಮಗಳಿಗೆ ವಿಧೇಯನಾಗುವದಕ್ಕಿಂತ ಜನರಿಗೆ ಸಹಾಯಮಾಡಲು ಹೆಚ್ಚು ಪ್ರಾಮುಖ್ಯತೆ ನೀಡುತ್ತಿದ್ದನಾದ್ದರಿಂದ ಪರಿಸಾಯರು ಅವನನ್ನು ವಿರೋಧಿಸುತ್ತಾರೆ.
ಪರಿಸಾಯರು ಯೋಚಿಸುವದೇನೆಂದು ಯೇಸು ಬಲ್ಲನು
ಯಾವದು ಸುಲಭ, ರೋಗಿಗೆ 'ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ' ಎನ್ನುವದೋ ಅಥವಾ 'ನಿನ್ನ ಹಾಸಿಗೆಗಳನ್ನು ಹೊತ್ತುಕೊಂಡು ನಡೆ' ಎಂದು ಹೇಳುವದೊ?
ನನಗೆ ಎರಡನ್ನೂ ಮಾಡಲು ದೈವೀಕ ಶಕ್ತಿ ಉಂಟೆಂದು ಎಲ್ಲರು ತಿಳಿಯ ಬೇಕೆಂದು 'ನಾನು ನಿನಗೆ ಎದ್ದು, ನಿನ್ನ ಹಾಸಿಗೆಯನ್ನು ತೆಗೆದುಕೊಂಡು ಮನೆಗೆ ಹೋಗು'. ಎಂದು ಹೇಳುತ್ತೇನೆ.


ನಿನ್ನ ಪಾಪಗಳು ಕ್ಷಮಿಸಲ್ಪಟ್ಟವೆ! ನಾನು ಗುಣವಾದೆ! ದೇವರಿಗೆ ಮಹಿಮೆಯಾಗಲಿ!


ಈ ರೀತಿ ನಾನು ಎಂದಿಗೂ ಕಂಡಿಲ್ಲ
ನಾನೂ ಸಹ ನೋಡಿಲ್ಲ. ಆದರೆ ಇವನು ತಾನು ಮೆಸ್ಸೀಯನೆಂದು ನಾವು ತಿಳಿಯುವಂತೆ ಮಾಡಲು ಪ್ರಯತ್ನಿಸಿದವನಾದರೆ ರೋಮನ್‌ರನ್ನು ಉರುಳಿಸುವಂತೆ ಏನನ್ನಾದರೂ ಮಾಡಬಾರದೇಕೆ?


ಯೇಸು ತಾಮ ಬೋಧಿಸುತ್ತಿದ್ದ ಮನೆಯಿಂದ ಹೊರಟು ಊರ ಬಾಗಿಲಿನ ಳಿಯಿಂದಸಾಗುತ್ತಿರುವಾಗ...
ಸುಂಕ ವಸೂಲಿಗಾರರಾದ ನೀವೆಲ್ಲಾ ಕಳ್ಳರು. ನಿಮಗೇ ಗೊತ್ತಲ್ಲಾ, ನಾನು ಅಷ್ಟೊಂದು ಸುಂಕವನ್ನು ಕೊಡಲಾರೆ.
ನೀನು ಕೊಟ್ಟರೆ ಒಳ್ಳೆಯದು! ನೆನಪಿರಲಿ, ನನಗೆ ಅಧಿಕಾರಲುಂಟು, ಇಡೀ ರೋಮ್ ಸಾಮ್ರಾಜ್ಯ ನನ್ನ ಹಿಂದೆ ಇದೆ.

ಒಬ್ಬ ವ್ಯಕ್ತಿಯ ಉತ್ತರ

ಮತ್ತಾಯ ೯:೯-೧೩, ೧೨:೯-೧೪ ರಿಂದ

ಇಡೀ ಕಿಪರ್ನೌಮಿನಲ್ಲಿಯೇ ಬೇರೆಯಿಹೂದ್ಯನು ಮತ್ತಾಯನಷ್ಟು ಜನರ ದ್ವೇಷಕ್ಕೆ ಕಾರಣನಾದವನು ಇಲ್ಲ. ಇವನು ರೋಮ ಪರವಾಗಿ ಸುಂಕ ವಸೂಲಿ ಮಾಡುತ್ತಿದ್ದನು. ಒಂದು ಆತನು ಮತ್ತು ಒಬ್ಬ ವ್ಯಾಪಾರಸ್ಥನು ಸಾಮಗ್ರಿಗಳ ಮೇಲಿನ ಸುಂಕದ ಕುರಿತು ವಾಗ್ವಾದ ಮಾಡುತ್ತಿರುವಾಗ ಯೇಸು ಆಮಾರ್ಗವಾಗಿ ಸಾಗಿದ್ದನು. ಯೇಸು ದ್ವೇಷಕ್ಕೊಳಗಾಗಿದ್ದ ಆ ಸುಂಕ ವಸೂಲಿಗಾರನ ಕಣ್ಣುಗಳಲ್ಲಿ ಕಣ್ಣಿಟ್ಟು ದೃಷ್ಟಿಸುತ್ತಾನೆ.



ಜನರೆಲ್ಲರಿಗೆ ಚಕಿತ ವುಂಟು ಮಾಡುವಹಾಗೆ ಮತ್ತಾಯ ತನ್ನ ವೃತ್ತಿಯನ್ನು ತೊರೆದು ಯೇಸುವನ್ನು ಹಿಂಬಾಲಿಸುತ್ತಾನೆ.







ಯೇಸು ತನ್ನ ಶಿಷ್ಯರಿಗಾಗಿ ಉತ್ತರಿಸುತ್ತಾನೆ.







ಸಬ್ಬತ್ತಿನ ದಿನದಲ್ಲಿ ಧರ್ಮ ಶಾಸ್ತ್ರದ ಪ್ರಕಾರ ವಾಸಿ ಮಾಡುವದು ಸರಿಯೇ?
ನಿಮ್ಮಲ್ಲಿ ಒಬ್ಬನ ಕುರಿಯು ಸಬ್ಬತ್ತಿನಲ್ಲಿ ಗುಂಡಿಯೊಳಗೆ ಬಿಳುವದಾದರೆ ಅದನ್ನು ನೀವು ಮೇಲೆತ್ತುವದಿಲ್ಲವೇ? ಮನುಷ್ಯನು ಕುರಿಗಿಂತಲೂ ಶ್ರೇಷ್ಠನಲ್ಲವೇ? ನಿಮ್ಮ ಪ್ರಶ್ನೆಗೆ ಉತ್ತರವೇನೆಂದರೆ...ಸಬ್ಬತ್ತಿನಲ್ಲಿ ಒಳ್ಳೆಯದನ್ನು ಮಾಡುವದು ಸರಿಯಾದದ್ದೇ/ ಆಗಿದೆ.
ನಂತರ, ಎಲ್ಲಾ ಪರಿಸಾಯರ ಮುಂದೆಯೇ ಯೇಸು ಆವ್ಯಕ್ತಿಗೆ ಕೈಯನ್ನು ಚಾಚುವಂತೆ ಹೇಳುತ್ತಾನೆ. ಮತ್ತು ಆತನು ಮುಂದೆ ಚಾಚಿದಾಗ....
ನನ್ನ, ಕೈ... ಇದು ತಿರಿಗಿ ಬಲಗೊಂಡಿದೆ! ದೇವರು ನನ್ನ ಪ್ರಾರ್ಥನೆಗಳಿಗೆ ಉತ್ತರಿಸಿದ್ದಾನೆ.
ಪರಿಸಾಯರು ತಾವು ಸೋತದ್ದಕ್ಕಾಗಿ ಕೋಪಗೊಂಡು ಸಭಾಮಂದಿರದಿಂದ
ಆ ಮನುಷ್ಯನು ನಾಶವಾಗಬೇಕು, ಬೇಗ ಆದಷ್ಟು ಉತ್ತಮ.
ನೀನು ಹೇಳಿದ್ದು ಸರಿ... ಆದರೆ ಅವನ ವಿರುದ್ಧ ಬಲವಾದ ದೂರು ಬೇಕು ಇಲ್ಲವಾದರೆ ಜನರು ನಮಗೆ ವಿರುದ್ಧ ಏಳುವರು.

**ಪರ್ವತದ ಮೇಲೆ ಪ್ರಸಂಗ**
ಲೂಕ ೬:೧೨-೧೬, ಮತ್ತಾಯ ೫:೬-೭, ೮:೫-೧೩, ೧೩:೪೫,೪೬,
ಮಾರ್ಕ ೪:೩೫-೩೬

ಪರಿಸಾಯರು ತನ್ನ ಪ್ರಾಣ ತೆಗೆಯಲು ಹೊಂಚು ಹಾಕುತ್ತಿದ್ದಾರೆಂದು ಯೇಸು ತಿಳಿದವನಾಗಿದ್ದಾನೆ, ಆದರೆ ದೇವರು ತಾನು ಮಾಡಬೇಕೆಂದು ಕಳುಹಿಸಿದ ಕಾರ್ಯವನ್ನು ಮಾಡದಂತೆ ಆತನು ಅದಕ್ಕೆ ಅವಕಾಶ ನೀಡುವದಿಲ್ಲ. ಆತನು ಹತ್ತಿರದ ಬೆಟ್ಟಕ್ಕೆ ಹೋಗಿ ರಾತ್ರಿಯಲ್ಲಾ ಪ್ರಾರ್ಥನೆಯಲ್ಲಿ ಕಳೆಯುತ್ತಾನೆ.




ಬೆಳಿಗ್ಗೆ ಆತನು ತನ್ನ ಶಿಷ್ಯರನ್ನು ಹತ್ತಿರಕ್ಕೆ ಕರೆದು ಆ ಗುಂಪಿನೊಳಗಿಂದ ಯಾವಾಗಲೂ ತನ್ನೊಂದಿಗೆ ಸಹಾಯಕರಾಗಿರಲು ೧೨ ಜನರನ್ನು ಹೆಸರಿಸುತ್ತಾನೆ. ಅವರಾರೆಂದರೆ ಸಿಮೋನ ಪೇತ್ರ, ಆಂದ್ರೆಯ, ಯಾಕೋಬ, ಯೋಹಾನ, ಫಿಲಿಪ್ಪ, ನತಾನಿಯೇಲನೆಂಬ ಬಾರ್ತಲೋಮಾಯ, ಮತ್ತಾಯ, ತೋಮ, ಅಲ್ಫಾಯುನ ಮಗನಾದ ಯಾಕೋಬ,ತದ್ದಾಯ, ಮತಾಭಿಮಾನಿ ಸಿಮೋನ, ಹಾಗು ಇಸ್ಕರಿ ಯೋತ ಯೂದ. ಇವರು ಹನ್ನೆರಡು ಅಪೋಸ್ತಲರೆಂಬ ಹೆಸರು ಹೊಂದಿದವರು.



ಅವರು ಬೆಟ್ಟದಿಂದ ಕೆಳಗೆ ಇಳಿದು ಬಂದಾಗ ಜನರ ದೊಡ್ಡ ಗುಂಪು ಯೇಸುವಿಗಾಗಿ ಕಾಯ್ದುಕೊಂಡಿದ್ದನ್ನು ಕಂಡರು.
ಆದುದರಿಂದ ಯೇಸು ಆ ಪರ್ವತ ಪ್ರದೇಶದಲ್ಲಿ ದೇವರ ರಾಜ್ಯದ ಸದಸ್ಯರು ಹೇಗಿರುವರೆಂಬುವದನ್ನು ವಿವರಿಸುವ ಒಂದು ಸಂದೇಶವನ್ನು ಬೋಧಿಸುತ್ತಾನೆ..

ಕರುಣೆಯುಳ್ಳವರು ಧನ್ಯರು ; ಅವರು ಕರುಣೆ ಹೊಂದುವರು. ನಿರ್ಮಲ ಚಿತ್ತರು ಧನ್ಯರು, ಅವರು ದೇವರನ್ನು ನೋಡುವರು, ಸಮಾಧಾನ ಪಡಿಸುವವರು ಧನ್ಯರು, ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು.
ನೀವು ಲೋಕಕ್ಕೆ ಬೆಳಕಾಗಿದ್ದೀರಿ... ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು.

ನಿಮ್ಮ ವೈರಿಗಳನ್ನು ಪ್ರೀತಿಸಿರಿ,ನಿಮ್ಮನ್ನು ಶಪಿಸುವವರನ್ನು ಆಶೀರ್ವದಿಸಿರಿ, ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ಹೀಗೆ ಮಾಡಿದರೆ, ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ.
ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ.
ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುತ್ತಾನೆ.
ಆದುದರಿಂದ ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತಾರೋ ಅದನ್ನೇ ನೀವು ಅವರಿಗೆ ಮಾಡಿರಿ.
ಇದೇ ಧರ್ಮ ಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ.
ಸುವಾರ್ತೆ ೫,೬,೭ ಇದೀ ಸಂದೇಶವು ಮತ್ತಾಯನ ಅಧ್ಯಾಯಗಳಲ್ಲಿ ದೊರೆಯುತ್ತದೆ.




ಪ್ರಸಂಗದ ನಂತರ ಯೇಸು ತನ್ನ ಶಿಷ್ಯರನ್ನು ತಿರಿಗಿ ಕಪೆರ್ನೌಮಿಗೆ ಕರೆದೊಯ್ಯುತ್ತಾನೆ. ಅವರು ಪಟ್ಟಣದೊಳಗೆ ಪ್ರವೇಶಿಸುತ್ತಿದ್ದಂತೆ ರೋಮನ್ ಸೈನ್ಯದ ಅದಿಕಾರಿಯೊಬ್ಬನು ಅವರನ್ನು ತಡೆಯುತ್ತಾನೆ.
ಯೇಸುವೇ, ನನ್ನ ಸೇವಕನು ಅಸ್ವಸ್ಥನಾಗಿದ್ದಾನೆ. ದಯವಿಟ್ಟು ನೀನು ಅವನನ್ನು ವಾಸಿಮಾಡುವಿಯಾ?
ನಾನು ನಿನ್ನೊಂದಿಗೆ ಬರುವೆನು.
ನೀನು ನನ್ನ ಮನೆಗೆ ಬರುವಷ್ಟು ನಾನು ಯೋಗ್ಯನಲ್ಲ... ಆದರೆ ನೀನು ಒಂದು ಮಾತು ಹೇಳಿದರೆ, ನನ್ನ ಸೇವಕನು ಗುಣವಾಗುವನೆಂದು ಬಲ್ಲೆನು.
ಇಸ್ರಾಯೇಲರಲ್ಲಿ ಎಲ್ಲಿಯೂ ಇಂತಹ ನಂಬಿಕೆಯುಳ್ಳವನನ್ನು ನಾನು ಕಾಣಲಿಲ್ಲ. ನಿನ್ನ ಸೇವಕನ ಬಳಿಗೆ ಹಿಂದಿರುಗು. ನಿನ್ನ ನಂಬಿಕೆಯಂತೆಯೇ ಆಗುವದು.
ಅಧಿಕಾರಿಯು ಅವಸರವಾಗಿ ಮನೆಗೆ ಬರುತ್ತಾನೆ.
ಒಡೆಯನೇ! ನೋಡು! ನಾನು ಗುಣವಾದೆ, ಕೆಲವು ನಿಮಿಷಗಳ ಹಿಂದೆ ತಕ್ಷಣವೇ ನಾನು ಗುಣಹೊಂದಿದೆ.
ನಿನಗೆ ಆಶ್ಚರ್ಯವಾಗಿಲ್ಲವೇ?
ಇಲ್ಲ ಚಿಚಿ ಯಾಕೆಂದರೆ ಯೇಸು ನಿನ್ನನ್ನು ಗುಣಮಾಡುವನೆಂದು ನಂಬಿದೆನು.


ಪರಿಸಾಯರು ಈಗಲೂ ಯೇಸುವಿನ ವಿರುದ್ಧ ಹೊಂಚು ಹಾಕುತ್ತಿದ್ದರೂ ಆತನು ಕಪೆರ್ನೌಮಿನಲ್ಲಿ ಬೋಧಿಸುವದನ್ನು ಮುಂದುವರೆಸುತ್ತಾನೆ. ಒಂದು ದಿನ ಆವನ ಬೋಧನೆಯನ್ನು ಕೇಳಲು ಬಂದ ಜನರ ಗುಂಪು ಬಹಳ ದೊಡ್ಡದ್ದಾಗಿದ್ದರಿಂದ ಆತನು ದೋಣಿಯಲ್ಲಿ ಕುಳಿತು ದಡದಿಂದ ತಳ್ಳಿ ಜನರಿಗೆ ಬೋಧಿಸ ಬೇಕಾಯಿತು.


ಒಬ್ಬ ವ್ಯಾಪಾರಿಯು ಒಮ್ಮೆ ಒಂದು ವಿರಳ ಹಾಗು ಸುಂದರವಾದ ಮುತ್ತನ್ನು ನೋಡುತ್ತಾನೆ. ಬೇರೆ ಎಲ್ಲಾ-ದಕ್ಕಿಂತಲೂ ಅವನು ಅದನ್ನು ಇಚ್ಛಿಸಿದನು, ಆದ್ದರಿಂದ ತನಗಿರುವದನ್ನೆಲ್ಲಾ ಮಾರಿ ಅದನ್ನು ಕೊಂಡು ಕೊಂಡನು. ದೇವರ ರಾಜ್ಯವು ಆಮುತ್ತಿನಂತಿದೆ.... ನೀವು ಅದನ್ನು ಹೊಂದುವದು ಯೋಗ್ಯವಾಗಿದೆ.


ಸಾಯಂಕಾಲವಾದಾಗ ಯೇಸು ತನ್ನ ಶಿಷ್ಯರಿಗೆ ನದಿಯ ಆಚೆದಡಕ್ಕೆ ಹೋಗಲು ಹೇಳುತ್ತಾನೆ.
ಆಕಸ್ಮೀಕ ಬಿರುಗಾಳಿಯು ಬೀಸುವಂತ ರಾತ್ರಿಯಂತೆ ಇದಾಗಿದೆ.

## ಸಮುದ್ರದ ಮೂಲಕ ಮೂರ್ಖವ್ಯಕ್ತಿ

ಮಾರ್ಕ ೪:೩೭-೪೧, ೫:೧-೨೪, ೩೫-೪೩







ಶಿಷ್ಯರು ಭಯಗೊಂಡವರಾಗಿ ದೋಣಿಯ ತಳಭಾಗಕ್ಕೆ ಓಡುತ್ತಾರೆ.
ಒಡೆಯನೇ, ನಾವು ಮುಳುಗುತ್ತೇವೇನೊ ಎಂದು ನಿನಗೆ ಚಿಂತೆಯಿಲ್ಲವೊ?
ಯೇಸು ಮೇಲೆ ಎದ್ದು ಗಾಳಿಗೆ ಎದುರಾಗಿ ನಿಲ್ಲುತ್ತಾನೆ.
ಶಾಂತವಾಗು, ನೊರೆಯಬೇಡ
ತಕ್ಷಣವೇ, ಬಿರುಗಾಳಿಯು ಶಾಂತವಾಗುತ್ತದೆ ಹಾಗು ಅಲೆಗಳು ಇಲ್ಲವಾಗುತ್ತದೆ.
ಬಿರುಗಾಳಿ ಹಾಗು ಸಮುದ್ರಗಳು ಇವನಿಗೆ ವಿಧೇಯವಾಗುತ್ತವಲ್ಲ, ಇವನು ಯಾರು?
ಮುಂಜಾನೆಯಲ್ಲಿ ದೋಣಿಯ ದಡವನ್ನು ತಲುಪುತ್ತದೆ, ಮತ್ತು ಯೇಸು ಶಿಷ್ಯರೊಂದಿಗೆ ದಡದಲ್ಲಿ ನಡೆದು ಹೋಗುತ್ತಿರುವಾಗ ದೆವ್ವ ಹಿಡಿದಿದ್ದ ಒಬ್ಬ ಮನುಷ್ಯನು ಯೇಸುವನ್ನು ಸಂಧಿಸಲು ಓಡಿ ಬರುತ್ತಾನೆ
ಹುಷಾರಾಗಿರು!...ಅವನ ಸರಪಣಿಗಳು ಕಳಚಿವೆ.







ಕೆಲ ಗಳಿಗೆಯ ನಂತರ ಯೇಸು ಮತ್ತು ಆತನ ಶಿಷ್ಯರು ಕಪೆರ್ನೌಮಿಗೆ ಹಿಂದಿರುಗುತ್ತಾರೆ. ತಿರಿಗೊಮ್ಮೆ ಆತನ ಬೋಧನೆ ಕೇಳಲು ಜನರ ಗುಂಪು ಸೇರಿ ಬರುತ್ತದೆ. ಆದರೆ ಯೇಸು ಬೋಧಿಸಲು ಪ್ರಾರಂಭಿಸುತ್ತಿದ್ದಂತೆ ಸಭಾ ಮಂದಿರದ ಮುಖ್ಯ ಅಧಿಕಾರಿಯಾದ ಯಾಯಿರನು ಜನರ ಗುಂಪಿನಿಂದ ನೂಕಿಕೊಂಡು ಬಂದು ಯೇಸುವಿನ ಪಾದಗಳಿಗೆ ಬೀಳುತ್ತಾನೆ.







ಹಾಸ್ಯಮಾಡುವ ಜನರಗುಂಪು
ಮಾರ್ಕ ೫:೩೮-೪೩, ಮತ್ತಾ ೯:೩೫-೧೧:೧, ೧೪:೧-೧೨,
ಯೋಹಾನ ೬:೧-೧೦
ಯೇಸು ಮತ್ತು ಆತನ ಶಿಷ್ಯರು ಯಾಯಿರನ ಮನೆಯನ್ನು ತಲುಪಿದಾಗ ಅವನ ಮಗಳು ಸತ್ತದ್ದಕ್ಕಾಗಿ ಗೋಳಾಡುತ್ತಿರುವ ಜನರ ಗುಂಪನ್ನು ಕಾಣುತ್ತಾರೆ.
ಯಾಕೆ ಅಳುತ್ತಿರುವಿರಿ? ಬಾಲಕಿ ನಿದ್ರಿಸುತ್ತಿದ್ದಾಳಷ್ಟೇ
ನಿದ್ರೆಯಲ್ಲಿದ್ದಾಳಾ? ಈ ಕುಟುಂಬಕ್ಕೆ ಸುಳ್ಳು ನಿರೀಕ್ಷೆ ಹುಟ್ಟಿಸಲು ನಿನಗೆ ಎಷ್ಟು ಧೈರ್ಯ? ಅವಳು ಸತ್ತಿದ್ದಾಳೆ, ಅದು ಎಲ್ಲರಿಗೂ ಗೊತ್ತು.


ಮೌನವಾಗಿ ಯೇಸು ಬಾಲಕಿಯ ಹೆತ್ತವರನ್ನು ಕೋಣೆಯೊಳಗೆ ಕರೆದೊಯ್ಯುತ್ತಾನೆ. ಅಲ್ಲಿ ಆತನು ಬಾಲಕಿಯ ಕೈಯನ್ನು ಹಿಡಿದುಕೊಂಡು ' ಎದ್ದೇಳು ' ಎಂದು ಹೇಳುತ್ತಾನೆ. ತಕ್ಷಣವೇ ಅವಳು ಮೇಲಕ್ಕೆದ್ದು ಆಶ್ಚರ್ಯದಿಂದ ಯೇಸುವನ್ನು ನೋಡುತ್ತಾಳೆ.
ಅವಳಿಗೆ ತಿನ್ನಲು ಕೊಡಿರಿ; ಆದರೆ ಈ ಕೋಣೆಯಲ್ಲಿ ನಡೆದಿದ್ದನ್ನು ಯಾರಿಗೂ ಹೇಳಬೇಡಿರಿ
ಆದರೆ ಯಾಯಿರನು ಒಬ್ಬ ಪ್ರಾಮುಖ್ಯ ವ್ಯಕ್ತಿ. ಆತನ ಮಗಳ ಕುರಿತ ವಾರ್ತೆಯು ಬೇಗನೆ ಹಬ್ಬುತ್ತದೆ. ಮತ್ತು ಯೇಸು ಬೋಧನೆ ಹಾಗು ವಾಸಿ ಮಾಡುತ್ತಾ ಗಲಿಲಾಯದಲೆಲ್ಲಾ ಸಂಚರಿಸುವಾಗ ಆತನ ಪ್ರಸಿದ್ಧಿ ಹೆಚ್ಚಾಗುತ್ತದೆ. ಪರಿಸಾಯರು ಕೋಪದಿಂದ. ನೋಡುತ್ತಾರೆ. ಯೇಸುವಿನ ವಿರುದ್ಧವಾಗಿ ಆವರಿಗೆ ಇನ್ನೂ ಯಾವ ಬಲವಾದ ಕಾರಣ ಯೇಸುವನ್ನು ಹಿಂಬಾಲಿಸುವ ಜನಸಮೂಹವನ್ನು ಕೆರಳಿಸಲು ಧೈರ್ಯಗೊಳ್ಳಲಿಲ್ಲ.
ಆದರೆ ಯೇಸು ಇನ್ನೂ ತನ್ನ ಸಂದೇಶವನ್ನು ಕೇಳಿರದ ಜನರ ಬಗ್ಗೆ ಚಿಂತೆ ಹೊಂದಿದ್ದನು. ಅವನು ತನ್ನ ಶಿಷ್ಯರನ್ನು ಪಕ್ಕಕ್ಕೆ ಕರೆಯುತ್ತಾನೆ.
ಜನರು ಕುರುಬನಿಲ್ಲದ ಕುರಿಗಳಂತಿದ್ದಾರೆ. ನೀವು ಇಬ್ಬಿಬ್ಬರಾಗಿ ಹೋಗಿ ನನ್ನ ಹಾಗೆ ಬೋಧನೆ ಮಾಡಿ ರೋಗಿಗಳನ್ನು ವಾಸಿಮಾಡಿರಿ. ಏನು ಹೇಳಬೇಕೆಂಬುದರ ಬಗ್ಗೆ ಚಿಂತಿಸಬೇಡಿರಿ. ದೇವರ ಆತ್ಮನು ನಿಮ್ಮ ಮೂಲಕ ಮಾತನಾಡುವನು.
ಶಿಷ್ಯರು ಗಲಿಲಾಯದಲೆಲ್ಲಾ ಬೋಧಿಸುತ್ತಾರೆ. ಅವರು ಹಿಂದಿರುಗಿದಾಗ ವಿಶ್ರಾಂತಿಗಾಗಿಯೂ, ಭವಿಷ್ಯತ್ತಿನ ಯೋಜನೆಗಳನ್ನು ಕುರಿತು ಮಾತನಾಡುವ ದಕ್ಕಾಗಿ ಏಕಾಂತ ಸ್ಥಳಕ್ಕೆ ಕರೆದೊಯ್ಯುತ್ತಾನೆ. ಅವರು ಹೊರಡಬೇಕೆನ್ನುವಾಗ ಸ್ನಾನಿಕನಾದ ಯೋಹಾನನ ಶಿಷ್ಯನೊಬ್ಬನು ಆಘಾತಕಾರಿ ವಾರ್ತೆಯನ್ನು ತರುತ್ತಾನೆ.
ಹೆರೋದ ಅರಸನು ಯೋಹಾನನ ಶಿರಚ್ಛೇದ ಮಾಡಿದ್ದಾನೆ.
ಹೆರೋದನು ದುಷ್ಟಮನುಷ್ಯ. ಆದರೆ ಇದು ಅವನ ಅತ್ಯಂತ ದೊಡ್ಡಪಾಪ.



ಯೋಹಾನನಿಗಿಂತ ಶ್ರೇಷ್ಠ ಪ್ರವಾದಿಯು ಇರಲಿಲ್ಲ. ಆತನು ದೇವರ ಚಿತ್ತವನ್ನು ಮಾಡಲು ತನ್ನ ಜೀವನ ಕಳೆದನು.
ದುಃಖಗೊಂಡವರಾಗಿ ಯೇಸು ಹಾಗು ಆತನ ಶಿಷ್ಯರು ನದಿಯನ್ನು ದಾಟುತ್ತಾರೆ, ಮತ್ತು ಏಕಾಂತದಲ್ಲಿರಬೇಕೆಂದು ಒಂದು ಪರ್ವತ ಪ್ರದೇಶಕ್ಕೆ ಹೋಗುತ್ತಾರೆ. ಆದರೆ ಜನರ ದೊಡ್ಡ ಸಮೂಹ ಅವರನ್ನು ಹಿಂಬಾಲಿಸುತ್ತದೆ. ಯೇಸು, ಅಲ್ಲಿಯೇ ಉಳಿದು ಬೋಧನೆಯನ್ನು ಮಾಡಿ ರೋಗಿಗಳನ್ನು ಸ್ವಸ್ಥಮಾಡುತ್ತಾನೆ. ಮದ್ಯಾಹ್ನದ ಸಮಯದಲ್ಲಿ......
ಫಿಲಿಪ್ಪ... ನಾವು ಈ ಜನರಿಗೆ ಆಹಾರವನ್ನು ಎಲ್ಲಿ ಕೊಂಡುಕೊಳ್ಳಬಹುದು.
ಅವರೆಲ್ಲರಿಗಾಗಿಯೋ? ಅವರು ೫,೦೦೦ ಗಂಡಸರು ಅಲ್ಲದೆ ಹೆಂಗಸರು, ಮಕ್ಕಳು ಇದ್ದಾರೆ, ಅದ್ಹೇಗೆ ಸಾಧ್ಯ?
ಈ ಬಾಲಕನ ಹತ್ತಿರ ಐದು ರೊಟ್ಟಿ ಎರಡು ಮೀನುಗಳಿದ್ದಾವೆ... ಆದರೆ ಇಷ್ಟೊಂದು ಜನರಿಗೆ ಅದರಿಂದ ಪ್ರಯೋಜನವೇನು?
ಜನರಿಗೆ ಕುಳಿತುಕೊಳ್ಳಲು ಹೇಳಿ ಆ ಆಹಾರ ನನಗೆ ಕೊಡು.

ಮೋಲೋಕದ ಸಿಂಹಾಸನ

ಯೋಹಾನ ೬:೧೦-೧೪, ಮತ್ತಾಯ ೧೪:೨೨-೩೧












ಆದರೆ ದೇವರು ಯೇಸುವನ್ನು ರಕ್ಷಕನಾಗಿರಲು ಕಳಿಸಿದ್ದಾನೆ.. ಸೈನ್ಯಗಳನ್ನು ದಂಡಿಸಿ ಸಿಂಹಾಸನಗಳನ್ನು ಗೆದ್ದುಕೊಳ್ಳಲು ಅಲ್ಲ, ಆದರೆ ಜನರನ್ನು ದೇವರ ರಾಜ್ಯಕ್ಕೆ ಸೇರಿಸಲು ಕಳುಹಿಸಿದ್ದಾನೆ. ಜನರು ತನ್ನನ್ನು ಅರಸನನ್ನಾಗಿ ಮಾಡಲು ಆಶೆ ಹೊಂದಿದ್ದಾರೆಂದು ಯೇಸು ತಿಳಿದಾಗ ಶೀಘ್ರವೇ ತನ್ನ ಶಿಷ್ಯರನ್ನು ಕರೆಯುತ್ತಾನೆ.







ಬೇಗನೆ ಬಿರುಗಾಳಿಯು ಬಡಿಯುತ್ತದೆ.
ಭೂಮಿಯಿಂದ ಎಷ್ಟು ದೂರವಾಗಿದ್ದೇವೆ?
ನಾವು ಕೇವಲ ಅರ್ಧ ದಾರಿಯಲ್ಲಿದ್ದೇವೆ.
ತಕ್ಷಣವೇ ಸಮುದ್ರದ ಮೇಲೆ ನಡೆದು ಬರುತ್ತಿರುವ ಒಬ್ಬ ವ್ಯಕ್ತಿಯನ್ನು ಕಾಣುತ್ತಾರೆ. 'ಭೂತ' ಎಂದು ಭಯ ಗೊಂಡು ಕಿರುಚುತ್ತಾರೆ. ಅಲೆಗಳ ಹಿಂದಿನಿಂದ 'ನಾನು, ಭಯಪಡ ಬೇಡಿರಿ' ಎಂಬ ಶಾಂತ ಸ್ವರವು ಕೇಳಿಸುತ್ತದೆ.
ಒಡೆಯನೇ, ನೀನೆ ಆಗಿರುವದಾದರೆ ನಿನ್ನ ಹತ್ತಿರ ಬರಲು ಅಪ್ಪಣೆ ಕೊಡು
ಬಾ'!
ತಕ್ಷಣವೇ ಪೇತ್ರನು ದೋಣಿಯಿಂದ ಜಿಗಿದು ಯೇಸು ನಿನೆಡೆಗೆ ನಡೆಯಲು ಪ್ರಾರಂಭಿಸುತ್ತಾನೆ. ಆದರೆ ಅವನು ಬಿರುಗಾಳಿಯ ಬಲವನ್ನು ನೋಡುತ್ತಿದ್ದಂತೆ ತನ್ನ ನಂಬಿಕೆಯನ್ನು ಕಳೆದು ಕೊಂಡು ಮುಳುಗಲು ಪ್ರಾರಂಭಿಸುತ್ತಾನೆ.


ಸಮುದ್ರದ ಮೇಲೆ ಅದ್ಭುತ
ಮತ್ತಾ ೧೪:೨೦-೩೬, ಯೋಹಾನ ೬:೨೨-೬೧,
ಮಾರ್ಕ ೬:೧-೨೩, ಮತ್ತಾ ೧೬:೧೩-೨೬, ೧೬:೧-೨
ಬಲವಾದ ರಾತ್ರಿಯೊಂದರಲ್ಲಿ ಬಿರುಗಾಳಿಯು ಗಲಿಲಾಯ ಸಮುದ್ರದ ರೋಷದ ಅಲೆಗಳನ್ನು ಉದ್ರೇಕಿಸುತ್ತಿದೆ. ಯೇಸುವಿನ ಶಿಷ್ಯರು ಬಿರುಗಾಳಿಯ ವಿರುದ್ಧ ಹುಟ್ಟು ಹಾಕಲು ಪ್ರಯಾಸ ಪಡುತ್ತಿದ್ದಾರೆ... ಆಗ ತಕ್ಷಣವೇ ಒಂದು ವ್ಯಕ್ತಿಯಂತಿರುವ ಚಿತ್ರವು ಅವರೆಡೆಗೆ ಬರುವದನ್ನು ಕಾಣುತ್ತಾರೆ. ನೀರಿನ ಮೇಲಿನ ವ್ಯಕ್ತಿಯು ಯೇಸುವೇ ಎಂದು ತಿಳಿಯುವ ತನಕ ಅವರು ಭಯಗ್ರಸ್ಥರಾಗುತ್ತಾರೆ. ಪೇತ್ರನು ದೋಣಿಯಿಂದ ಎದ್ದು ಯೇಸುವಿನ ಬಳಿಗೆ ಸಾಗುತ್ತಾನೆ... ಆದರೆ ಬಲವಾದ ಅಲೆಗಳನ್ನು ನೋಡಿ ಆತನು ನಂಬಿಕೆಯನ್ನು ಕಳೆದುಕೊಳ್ಳುತ್ತಾನೆ.
ಓ ಪೇತ್ರನೆ, ಯಾಕೆ ಸಂಶಯಪಟ್ಟೆ?
ಕರ್ತನೇ, ರಕ್ಷಿಸು


ಯೇಸು ಪೇತ್ರನನ್ನು ಕಾಪಾಡುತ್ತಾನೆ ಹಾಗು ಅವರು ದಡವನ್ನು ತಲುಪುತ್ತಿದ್ದಂತೆ ಬಿರುಗಾಳಿಯು ಇಲ್ಲವಾಗಿ ಸಮುದ್ರ ಶಾಂತವಾಗುತ್ತದೆ.
ದೇವರಿಂದ ಬಂದವನು ಮಾತ್ರವೇ ಯೇಸು ಮಾಡಿದ್ದನ್ನು ಮಾಡಬಲ್ಲನು!


ಬೆಳಗಾದಾಗ ಶಿಷ್ಯರು, ದೋಣಿಯನ್ನು ದಡಕ್ಕೆ ತರುತ್ತಾರೆ. ಜನರು ಯೇಸುವನ್ನು, ನೋಡಿದಾಗ ರೋಗಿಗಳನ್ನು ಕುಂಟರನ್ನು ಆತನ ಬಳಿಗೆ ಕರೆತರುತ್ತಾರೆ. ಆತನು ತಾಳ್ಮೆಯಿಂದಲೂ ಮತ್ತು ಪ್ರೀತಿಯಿಂದಲೂ ಅವರೆಲ್ಲರನ್ನು ಗುಣಪಡಿಸುತ್ತಾನೆ.
ನಾನು ಆತನ ಬಟ್ಟೆಯನ್ನು ಮುಟ್ಟಿದರೆ ಸಾಕು ಗುಣವಾಗುವೆನೆಂದು ಬಲ್ಲೆನು


ಇದನ್ನು ನೋಡಿದ ಪರಿಸಾಯರು ಜನರ ಮುಂದೆ ಯೇಸುವನ್ನು ಟೀಕಿಸಲು ಮುಂದಾಗುತ್ತಾರೆ.
ನಂತರ ಆದಿನದಲ್ಲಿ ಯೇಸು ಕಪೆರ್ನೌಮಿನಲ್ಲಿನ ಸಭಾಮಂದಿರಕ್ಕೆ ಹೋಗುತ್ತಾನೆ. ಹಿಂದಿನ ದಿನ ಆತನು ಊಟ ಮಾಡಿಸಿದ ಜನರ ಗುಂಪು ಅಲ್ಲಿತ್ತು, ಅವರು ಮತ್ತೆ ಯೇಸುವನ್ನು ಆಹಾರ ಕೇಳುತ್ತಿದ್ದರು. ಯೇಸು ಅವರ ಆತ್ಮೀಕ ಅಗತ್ಯ ಬಗ್ಗೆ ಬೋಧನೆಯನ್ನು ಮಾಡಿದಾಗ ಅವರಲ್ಲಿ ಅನೇಕರು ನಿರಾಶೆಗೊಂಡು ಹಿಂತಿರುಗುತ್ತಾರೆ.
ನಿನ್ನ ಶಿಷ್ಯರು ಕೈತೊಳೆಯದೇ ಊಟ ಮಾಡುವದನ್ನು ನಾವು ನೋಡಿದ್ದೇವೆ, ಅವರು ನಮ್ಮ ನಿಯಮಗಳನ್ನು ಮುರಿದು ತಮ್ಮನ್ನು ಕೆಡಿಸಿ ಕೊಳ್ಳಲು ಏಕೆ ಬಿಡುತ್ತಿ?
ಮನುಷ್ಯನ ಬಾಯಿಂದ ಹೋಗುವಂತ ಯಾವದು ಆತನನ್ನು ಕೆಡಿಸಲಾರದು. ಆದರೆ ಆತನ ಬಾಯಿಂದ ಹೊರಡುವ ಕೆಟ್ಟ ಮಾತುಗಳು ಅವನನ್ನು ಹೊಲೆ ಮಾಡುತ್ತವೆ.


ಯೇಸು ತನ್ನ ಶಿಷ್ಯರನ್ನು ಸುಮ್ಮ ತಿನಿದ್ದರ ಕಾರಣದಿಂದ ವಿಸ್ಮಯಗೊಂಡು
ಪರಿಸಾಯರು ಯೇಸುವನ್ನು
ನಾಶಮಾಡಬೇಕೆಂದು ಹಿಂದಿಗಿಂತಲೂ ಹೆಚ್ಚು ದೃಢಮನಸ್ಸು ನೀನು ಪರಿಸಾಯರನ್ನು
ಮಾಡಿಕೊಂಡು ಹಿಂದಿರುಗುತ್ತಾರೆ.
ಕೋಪಗೊಳಿಸಿದ್ದಿಯೆಂದು ನಿನಗೆ ತಿಳಿಯದೋ?
ಪರಿಸಾಯರು ದೇವರ ಚಿತ್ತಕ್ಕೆ ಕುರುಡರಾಗಿದ್ದಾರೆ ಹಾಗು ಜನರನ್ನು ಅವರು ತಮ್ಮ ಹಾಗೆ ಕುರುಡುತನಕ್ಕೆ ನಡಿಸುತ್ತಿದ್ದಾರೆ.
ಹೆಚ್ಚು ಜನರು ಯೇಸುವನ್ನು ಲೌಕಿಕ ರಾಜನನ್ನಾಗಿ ಮಾತ್ರವೇ ಸ್ವೀಕರಿಸುತ್ತರಾದ್ದರಿಂದ ಆತನು ಗಲಿಲಾಯವನ್ನು ಬಿಟ್ಟು ಹೊರಡುತ್ತಾನೆ. ಆತನು ತನ್ನಶಿಷ್ಯರನ್ನು ಪವಿತ್ರ ರಾಜ್ಯಕ್ಕೆ ಕರೆದೊಯ್ಯುತ್ತಾನೆ. ಮತ್ತು ನಂತರ ಕೈಸರ್ಯ, ಫಿಲಿಪ್ಪಿ, ಸೀಮೆಗೆ ಕರೆದೊಯ್ದು ಅಲ್ಲಿ ಅವರಿಗೆ ಏಕಾಂತದಲ್ಲಿ ಬೋಧಿಸುತ್ತಾನೆ. ಅಲ್ಲಿ, ಒಂದು ದಿನ ಆತನು ಅವರಿಗೆ, ಜನರು ನನ್ನನ್ನು ಯಾರೆಂದು ಹೇಳುತ್ತಾರೆ? ಎಂದು ಕೇಳುತ್ತಾನೆ.
ಸ್ನಾನಿಕನಾದ ಯೋಹಾನ...ಎಲೀಯ
ಆದರೆ ನೀವು ನನ್ನನ್ನು ಯಾರೆಂದು ಹೇಳುತ್ತೀರಿ?
ನೀನು ಕ್ರಿಸ್ತನು, ಜೀವಸ್ವರೂಪನಾದ ದೇವರ ಮಗನು
ಪರಿಸಾಯರು ದೇವರ ಚಿತ್ತಕ್ಕೆ ಕುರುಡರಾಗಿದ್ದಾರೆ ಹಾಗು ಜನರನ್ನು ಅವರು ತಮ್ಮ ಹಾಗೆ ಕುರುಡುತನಕ್ಕೆ ನಡಿಸುತ್ತಿದ್ದಾರೆ.
ಪರಿಸಾಯರು ಮತ್ತು ಯಾಜಕರು ನಾನೇ ಮೆಸ್ಸಿಯನೆಂದು ನಂಬುವದಿಲ್ಲ. ಅವರು ನನ್ನನ್ನು ಕೊಲ್ಲಿಸುವರು. ಆದರೆ ಮೂರನೆಯ ದಿನದಲ್ಲಿ ನಾನು ತಿರಿಗಿ ಜೀವಿತನಾಗುವೆನು.
ಈಗ ಶಿಷ್ಯರು ನಿಜವಾಗಿಯೂ ಯೇಸುವು ವಾಗ್ದಾನ ಮಾಡಲ್ಪಟ್ಟ ಮೆಸ್ಸಿಯನೆಂದು ತಿಳಿದಿದ್ದರಿಂದ ಯೇಸು ಅವರಿಗೆ ತಾನು ಯೆರೂಸಲೇಮಿಗೆ ಹೋಗುವಾಗ ಏನು ನಡೆಯುವದೆಂದು ತಿಳಿಸುತ್ತಾನೆ.


ಕೊಲ್ಲುವದು? ಸಾಧ್ಯವಿಲ್ಲ!
ಪೇತ್ರನೇ, ನನಗಾಗಿ ದೇವರ ಚಿತ್ತವನ್ನು ನೀನು ಅರ್ಥಮಾಡಿಕೊಂಡಿಲ್ಲ. ನಾನು ನಿಮ್ಮೆಲ್ಲರನ್ನು ಎಚ್ಚರಿಸುವದೇನೆಂದರೆ ನೀವು ನನ್ನನ್ನು ಹಿಂಬಾಲಿಸಲಿಚ್ಛಿಸುವದಾದರೆ ನನ್ನ ಹಾಗೆ ಹಿಂಸೆಗೆ ಒಳಗಾಗಲು ಸಿದ್ಧವಾಗಿರಬೇಕು.
ಯೇಸು ಹೇಳಿದ್ದನ್ನು ಕೇಳಿದ ಮೇಲೆಯೂ ಯೇಸು ಮರಣಕ್ಕೊಳಪಡುವೆನೆಂದು ಅವರು ನಂಬಲಾಗಲಿಲ್ಲ. ಆತನು ಅನೇಕರಿಗೆ ಸಹಾಯ ಮಾಡಿದ್ದಾನೆ ಮತ್ತು ತನ್ನ ವಿಷಯದಲ್ಲೂ ಹಾಗೆ ಮಾಡುವನೆಂದು ಅವರು ವಿಶ್ವಾಸಿಸಿದರು. ಕೆಲವು ದಿನಗಳ ನಂತರ ಯೇಸು ಪೇತ್ರ. ಯಾಕೋಬ ಮತ್ತು ಯೋಹಾನರೊಂದಿಗೆ ಮಾತನಾಡುತ್ತಾನೆ.
ನನ್ನೊಂದಿಗೆ ಬೆಟ್ಟಕ್ಕೆ ಬನ್ನಿರಿ.
ಯಾಕೆ ಇರಬಹುದು...
ಬಹಳ ಸಮಯ ಬೆಟ್ಟವನ್ನು ಹತ್ತುತ್ತಾ ತುದಿಗೆ ಮುಟ್ಟಿದರು, ಆಗ ಯೇಸು ಪ್ರಾರ್ಥನೆಗಾಗಿ ಪಕ್ಕಕ್ಕೆ ಹೋಗುತ್ತಾನೆ. ಶಿಷ್ಯರು ವಿಶ್ರಮಿಸಲು ಕುಳಿತು ಕೊಳ್ಳುತ್ತಾರೆ. ಆದರೆ ಶೀಘ್ರವೇ ನಿದ್ರೆಗೊಳಗಾಗುತ್ತಾರೆ. ಅವರು ಎಚ್ಚರಗೊಂಡಾಗ ಒಂದು ವಿಚಿತ್ರ ಹಾಗು ಮಹಿಮೆಯುಳ್ಳ ಸಂಗತಿಯೊಂದನ್ನು ನೋಡುತ್ತಾರೆ...


ಬಾಲಕ- ಮತ್ತು ಆತನ ತಂದೆಯ ನಂಬಿಕೆ
ಮತ್ತಾಯ ೧೭:೩-೧೩, ಮಾರ್ಕ ೯:೨೨, ಲೂಕ ೯:೨೮-೪೫ ರಿಂದ
ಯೇಸುವಿನೊಂದಿಗೆ ಬೆಟ್ಟದಲ್ಲಿ ಒಂಟಿಗರಾಗಿ ಪೇತ್ರ, ಯಾಕೋಬ ಹಾಗು ಯೋಹಾನವರು ಯೇಸು ರೂಪಾಂತರ ಗೊಳ್ಳುವದನ್ನು ನೋಡುತ್ತಾರೆ. ಆತನ ಮುಖವು ಸೂರ್ಯನಂತೆ ಪ್ರಕಾಶಿಸುತ್ತಿತ್ತು. ಆತನ ಬಟ್ಟೆಗಳು ಬೆಳ್ಳಗೆ ಹೊಳೆಯುತ್ತಿದ್ದವು. ನಂತರ ಹಿಂದಿನ ಕಾಲದ ಇಬ್ಬರು ಮಹಾನ್ ವ್ಯಕ್ತಿಗಳಾದ ಮೋಶೆ ಮತ್ತು ಎಲೀಯ ಪ್ರತ್ಯಕ್ಷರಾಗಿ ಆತನೊಂದಿಗೆ ಮಾತನಾಡುತ್ತಾರೆ.
ಆದರೆ ಪೇತ್ರನು ಮಾತನಾಡುತ್ತಿದ್ದಂತೆ ಒಂದು ಪ್ರಕಾಶಮಾನವಾದ ಮೋಡವು ಬೆಟ್ಟದ ತುದಿಗೆ ಇಳಿದು ಬರುತ್ತದೆ.. ಮತ್ತು ಆ ಮೋಡದೊಳಗಿಂದ ದೇವರ ಸ್ವರವು ಹೊರಡುತ್ತದೆ.
ಇತನು ಪ್ರಿಯನಾಗಿರುವ ನನ್ನ ಮಗನು, ಇತನನ್ನು ನಾನು ಮೆಚ್ಚಿದ್ದೇನೆ.. ಆತನ ಮಾತನ್ನು ಕೇಳಿರಿ.


ಶಿಷ್ಯರು ಬಹಳ ಹೆದರಿದವರಾಗಿ ಬೋರಲು ಬೀಳುತ್ತಾರೆ, ಆದರೆ ಯೇಸು ಬೊಗ್ಗಿ ಅವರನ್ನು ಮುಟ್ಟುತ್ತಾನೆ.
ಭಯ ಪಡಬೇಡಿರಿ.
ಮರುದಿನ ಬೆಳಿಗೆ..ಬೆಟ್ಟದಿಂದ ಇಳಿಯುವ ಮಾರ್ಗದಲ್ಲಿ ಯೇಸು ಶಿಷ್ಯರಿಗೆ ತನ್ನ ಪುನರುಥ್ಥಾನದ ತನಕ ತಾನು ರೂಪಾಂತರಗೊಂಡದ್ದನ್ನು ಯಾರಿಗೂ ಹೇಳಬಾರದೆಂದು ಎಚ್ಚರಿಸುತ್ತಾನೆ. ತಾವು ಈಗ ತಾನೇ ನೋಡಿದ ವಿಷಯದ ಹೊರತಾಗಿಯೂ ಯೇಸು ಮರಣಿಸುವನೆಂದು ಶಿಷ್ಯರು ನಂಬಲಾಗಲಿಲ್ಲ...ಆದ್ದರಿಂದ ಯೇಸು ಮರಣದಿಂದ ಪುನರುತ್ತಾನ ಹೊಂದುವದರ ಬಗ್ಗೆ ಮಾತನಾಡುವೂಗ ಗಲಿಬಿಲಿಗೊಳಗಾಗುತ್ತಾರೆ. ಅವರು ತಗ್ಗಿನ ಪುದೇಶಕ್ಕೆ ಬಂದಾಗ ಇತರ ಶಿಷ್ಯರ ಸುತ್ತಲು ಬಹು ಜನರು ಸೇರಿರುವದು ಕಾಣಸುತ್ತದೆ.
ಯೇಸುವನ್ನು ನೋಡುತ್ತಿದ್ದಂತೆ ಜನರು ಅವನನ್ನು ಸುತ್ತು ವರೆಯುತ್ತಾರೆ.
ನನ್ನ ಮಗನು ಮೂರ್ಛೆರೋಗ ಹೊಂದಿದ್ದು. ಆಗಾಗ್ಗೆ ಬೆಂಕಿಯಲ್ಲಿ ಬೀಳುತ್ತಾನೆ. ಅವನನ್ನು ನಿಮ್ಮ ಶಿಷ್ಯರ ಬಳಿಗೆ ಕರೆತಂದೆ ಆದರೆ ಅವರಿಂದ ವಾಸಿಮಾಡಲಾಗಲಿಲ್ಲ.
ನಿನ್ನ ಮಗನನ್ನು ಇಲ್ಲಿ ಕರೆದುತಾ
ತಂದೆಯು ಹಾಗೆಯೇ ಮಾಡುತ್ತಾನೆ ಆದರೆ ಮಗನಿಗೆ ಮೂರ್ಛೆ ರೋಗ ಬಂದು ಯೇಸುವಿನ ಪಾದದ ಬಳಿಯಲ್ಲಿ ನೆಲಕ್ಕೆ ಬೀಳುತ್ತಾನೆ.
ನೀನು ದಯವಿಟ್ಟು ನಮಗೆ ಸಹಾಯ ಮಾಡು
ನಂಬುವವನಿಗೆ ಎಲ್ಲಾ ಕಾರ್ಯಗಳು ಸಾಧ್ಯವಾಗಿವೆ.
ನಾನು ನಂಬುತ್ತೇನೆ! ದಯವಿಟ್ಟು ನನ್ನ ನಂಬಿಕೆ ಹೆಚ್ಚಾಗಲು ಸಹಾಯ ಮಾಡು
ದುರಾತ್ಮವೇ!ಬಾಲಕನನ್ನು ಬಿಟ್ಟು ಹೊರಗೆ ಬಾ.







ಶಿಷ್ಯರು ಮಾತ್ರವೇ ಉಳಿದಿರುವಾಗ ಅವರು ಯೇಸುವಿನ ಹತ್ತಿರ ಬರುತ್ತಾರೆ




ಅವರು ಕಪೆರ್ನೌಮಿಗೆ ಹೋಗುವ ಮಾರ್ಗದಲ್ಲಿ ಶಿಷ್ಯರು ಬಹುಬೇಗನೆ ಯೇಸು ಕ್ರಿಸ್ತನು ಸ್ಥಾಪಿಸಲಿದ್ದ ರಾಜ್ಯದ ಕುರಿತಾಗಿ ತಮ್ಮಲ್ಲಿ ಮಾತಾಡಿಕೊಂಡರು. ಹೆಚ್ಚು ಕಡಿಮೆ ಅವರು ದೇವರ ರಾಜ್ಯದಲ್ಲಿ ಯಾರು ದೊಡ್ಡವರೆಂದು ವಾಗ್ವಾದ ಮಾಡಲು ಪ್ರಾರಂಭಿಸಿದರು.



ಳು ಎಪ್ಪತ್ತು ಸಾರಿ
ಮತ್ತಾಯ ೧೮:೧-೧೪,೨೧,೨೨, ಯೋಹಾನ
೭:೧೧-೫೨; ೮:೨೧-೫೯

ಪೆರ್ನೌಮಿಗೆ ಹೋಗುತ್ತಿರುವಾಗ ಯೇಸು ಸ್ಥಾಪಿಸುವನೆಂದು ಅವರು ನಿರೀಕ್ಷಿಸುತ್ತಿದ್ದ ರಾಜ್ಯದಲ್ಲಿ ಯಾರು ದೊಡ್ಡವರೆಂಬದರ ಬಗ್ಗೆ ಜಗಳವಾಡುತ್ತಾರೆ. ಅವರು ಪಟ್ಟಣವನ್ನು ತಲುಪಿದಾಗ ಅವರು ಯಾಕೆ ಜಗಳ ವಾಡಿದರೆಂದು ಕೇಳಿದಾಗ ಅದನ್ನು ಹೇಳಲು ಅವರು ನಾಚಿಕೆ ಪಟ್ಟರು. ಯೇಸು ಒಬ್ಬ ಚಿಕ್ಕ ಬಾಲಕವನ್ನು ಕರೆಯುತ್ತಾನೆ.




ನೀವು ಯಾರೊಂದಿಗಾದರೂ ಸಮಸ್ಯೆಹೊಂದಿದ್ದರೆ ಆತನೊಂದಿಗೆ ಒಮ್ಮೆ ಮಾತನಾಡಿರಿ. ಅವನು ಕೇಳುವದಾದರೆ ನೀವು ಒಬ್ಬ ಸ್ನೇಹಿತನನ್ನು ಗೆದ್ದುಕೊಳ್ಳುವಿರಿ.
ನನಗ ತಪ್ಪು ಮಾಡಿದವನನ್ನು ಎಷ್ಟು ಸಾರಿ ಕ್ಷಮಿಸಬೇಕು? ಏಳು ಸಾರಿಯೋ?
ಇಲ್ಲ, ಪೇತ್ರನೇ, ಏಳು ಎಪ್ಪತ್ತು ಸಾರಿ, ಅಥವಾ ದೇವರು ನಿನ್ನನ್ನು ಎಷ್ಟು ಸಾರಿ ಕ್ಷಮಿಸಬೇಕೆನ್ನುತ್ತಿ ಅಷ್ಟುಸಾರಿ.
ಕೆಪೆನೌ೯ಮಿನಿಂದ ದಕ್ಷಿಣಕ್ಕೆ ಯೂದಾಯದಲ್ಲಿ ಬೋಧಿಸಿ ಯೆರೂಸಲೇಮನ್ನು ತಲುಪುತ್ತಾನೆ, ಆ ವೇಳೆಯಲ್ಲಿ ಒಂದು ಮಹಾ ಧಾರ್ಮಿಕ ಹಬ್ಬವು ನಡೆಯುತ್ತಿರುತ್ತದೆ. ಆತನು ಬೋಧಿಸುವಾಗ ಜನರು ಆಶ್ಚರ್ಯ ಪಡುತ್ತಾರೆ.
ಯೇಸು ಮೆಸ್ಸಿಯನೋ?
ಇದುವರೆಗೂ ಯಾರೂ ಮಾಡಲಾರದ ಸಂಗತಿಗಳನ್ನು ಆತನು ಮಾಡುವದನ್ನು ನೋಡಿದ್ದೇನೆ.


ಮಹಾಯಾಜಕರು ಹಾಗು ಪರಿಸಾಯರು ಜನರು ಮಾತಾಡುವದನ್ನು ಕೇಳಿ ಅವರು ಯೇಸವಿನ ವಿರುದ್ಧ ಜನರ ಗುಂಪನ್ನು ಸೇರಿಸುತ್ತಾರೆ.
ನಾವು ಅವನನ್ನು ಮುಗಿಸದಿದ್ದರೆ ಜನರು ಅವನನ್ನು ಮೆಸ್ಸಿಯನೆಂದು ಸ್ವೀಕರಿಸಿಕೊಳ್ಳುವರು.
ನಾ ಅವನನ್ನು ತಡೆಯುವೆ. ಕಾವಲುಗಾರರನ್ನು ಕರೆಯಿರಿ.
ಯೇಸುವನ್ನು ಬಂಧಿಸಿರಿ. ಆದರೆ ಯಾವ ಸಮಸ್ಯೆಯುಂಟಾಗದಂತೆ ಮಾಡಿರಿ.
ಹಬ್ಬದ ಕೊನೆಯ ದಿನದಲ್ಲಿ ಅಧಿಕಾರಿಗಳು ಯಾಜಕ ಹಾಗು ಪರಿಸಾಯರ ಬಳಿಗೆ ಹಿಂತಿರುಗುತ್ತಾರೆ.
ಯೇಸು ಎಲ್ಲಿದ್ದಾನೆ?
ಅವನ ಹಾಗೆ ಮಾತಾಡುವವನನ್ನು ಇದುವರೆಗೂ ನಾವು ಕೇಳಿಲ್ಲ. ಅವನನ್ನು ಬಂದಿಸಲು ಆಗಲಿಲ್ಲ.
ಯಾಜಕರು ಹಾಗು ಪರಿಸಾಯರು ಬಹಳ ಕೋಪಗೊಂಡರು ಆದರೆ ಪಟ್ಟಣದೆಲೆಲ್ಲಾ ಹಬ್ಬಕ್ಕೆ ಬಂದ ಜನರು ತುಂಬಿಕೊಂಡಿದ್ದರಿಂದ ಅವರು ಒತ್ತಾಯ ಮಾಡಲು ಭಯಪಟ್ಟರು. ಆದರೆ ಮರುದಿನ...
ಯೇಸು ಬೋಧಿಸಲು ಆಲಯಕ್ಕೆ ಹಿಂತಿರುಗುತ್ತಾನೆ. ಸಂದೇಶದ ವಿಷಯದಲ್ಲಿ ಆತನು ಯಾಜಕರು ಹಾಗು ಪರಿಸಾಯರ ಪಾಪಗಳನ್ನು ಎತ್ತಿ ತೋರಿಸಿದ್ದು ಮಾತ್ರವಲ್ಲ ಆದರೆ ಮಹಾ ಮೂಲ ಪಿತೃವಾದ ಅಬ್ರಹಾಮನಿಗಿಂತ ಮುಂಚೆಯೇ ತಾನು ದೇವರೊಂದಿಗೆ ಇದ್ದನೆಂದು ಪ್ರಕಟಗೊಳಿಸುತ್ತಾನೆ.
ದೇವರೊಂದಿಗಿದ್ದೇನೆಂದು ಹೇಳಲು ಅವನಿಗೆ ಎಷ್ಟು ಧೈರ್ಯ.
ಅವನಿಗೆ ಕಲ್ಲೆಸೆಯಿರಿ! ಕಲ್ಲೆಸೆಯಿರಿ!

ಯೆರೂಸಲೇಮಿನ ಒಬ್ಬ ಬಿಕ್ಷುಕನು ದೇವಕುಮಾರನನ್ನು ಸಂದಿಸುತ್ತಾನೆ.

ಯೋಹಾನ ೯:೧-೧೦, ಲೂಕ ೧೦:೨೪







ನಾನು ಕುರುಡನಾಗಿದ್ದೇನು, ಯೇಸು ನನಗೆ ದೃಷ್ಟಿಕೊಟ್ಟನು.
ಅವನು ಸಬ್ಬತ್ತಿನಲ್ಲಿ ಗುಣ ಮಾಡಲ್ಪಟ್ಟನೆಂಬದಕ್ಕೆ ನೆರೆಯವರು ಚಿಂತಿತಗೊಳ್ಳುತ್ತಾರೆ. ಅವರು ಒಮ್ಮೆಲೆ ಆತನನ್ನು ಸಬ್ಬತ್ತಿನಲ್ಲಿ ಏನು ಮಾಡಬೇಕೆಂಬ ನಿಯಮಗಳನ್ನು ತಿಳಿಸುವ ಪರಿಸಾಯರ ಬಳಿ ಕರೆದೊಯ್ಯುತ್ತಾರೆ.
ನೀನು ಮಾತನಾಡುವ ಯೇಸು! ಒಬ್ಬ ಪಾಪಿ...ಅವನು ಸಬ್ಬತ್ತಿನ ನಿಯಮಗಳನ್ನು ದಿಕ್ಕರಿಸುತ್ತಾನೆ.
ಅವನು ಪಾಪಿಯೋ ಏನೋ ನನಗೆ ತಿಳಿಯದು ಆದರೆ ನಾನು ಕುರುಡನಾಗಿದ್ದೆನು ಈಗ ಕಣ್ಣು ಕಾಣುತ್ತದೆ. ಅಷ್ಟು ಮಾತ್ರ ಬಲ್ಲೆನು.
ಆ ವ್ಯಕ್ತಿಯು ಯೇಸುವಿಗೆ ತಿರಿಗಿ ಬೀಳುವಂತೆ ಮಾಡಲು ಪರಿಸಾಯರು ಪ್ರಯತ್ನಿಸುತ್ತಾರೆ, ಆದರೆ ಸಾಧ್ಯವಾಗಲಿಲ್ಲ ಆದ್ದರಿಂದ ಅವರು ಅವನನ್ನು ಸಭಾಮಂದಿರದಿಂದ ಹೊರ ಹಾಕುತ್ತಾರೆ. ನಡೆದಿರುವದೆಲ್ಲಾ ಯೇಸುವಿಗೆ ತಿಳಿಯುತ್ತದೆ. ಮತ್ತು ಆ ವ್ಯಕ್ತಿಗಾಗಿ ಹುಡುಕಾಡುತ್ತಾನೆ. ಅವನು ಸಿಕ್ಕಾಗ ಅದೇ ವೇಳೆಯಲ್ಲಿ ಪರಿಸಾಯರು ಶೀಘ್ರವೇ ಅವನ ಸುತ್ತಲೂ ಸೇರುತ್ತಾರೆ.
ನೀನು ದೇವರ ಮಗನಲ್ಲಿ ವಿಶ್ವಾಸಿಸುತ್ತಿಯೋ?
ನಾನು ನಂಬುವದಕ್ಕೆ ಅವನಾರಿರಬಹುದು?
ನಿನ್ನೊಂದಿಗೆ ಮಾತಾಡುತ್ತಿರುವ ನಾನೇ,
ಕರ್ತನೇ, ನಾನು ನಂಬುತ್ತೇನೆ!


ನಾನೇ ಒಳ್ಳೇ ಕುರುಬನು, ಒಳ್ಳೆಕುರುಬನು ತನ್ನ ಕುರಿಗಳಿಗಾಗಿ ಪ್ರಾಣಕೊಡುತ್ತಾನೆ. ಯಾರೂ ನನ್ನ ಪ್ರಾಣವನ್ನು ತೆಗೆಯಲಾರರು ಆದರೆ ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ. ನಾನು ಅದನ್ನು ಕೊಡುವದಕ್ಕೂ ಮತ್ತು ತಿರಿಗಿ ಪಡೆಯುವದಕ್ಕೂ ನನಗೆ ಅಧಿಕಾರವುಂಟು. ನನ್ನ ತಂದೆಯಾದ ದೇವರಿಂದಲೇ ಆ ಅಧಿಕಾರವನ್ನು ಹೊಂದಿದ್ದೇನೆ.
ಇವನು ಹುಚ್ಚನು, ದುರಾತ್ಮನಿಂದ ತುಂಬಿದ್ದಾನೆ. ಅವನ ಮಾತನ್ನು ಕೇಳುವದೇಕೆ?
ಆದರೆ ದುರಾತ್ಮವೊಂದು ಕುರುಡನಿಗೆ ಕಣ್ಣು ಕೊಡಬಹುದೊ?
ಫರಿಸಾಯರು ಹಾಗು ಶಾಸ್ತ್ರಿಗಳ ತರ್ಕವು ಮುಂದುವರೆಯುತ್ತದೆ. ಯೇಸು ಸೈತಾನನ ಸಂಗಡ ಕಾರ್ಯ ಮಾಡುತ್ತಿದ್ದಾನೆಂದು ಕೆಲವರು ಯೋಚಿಸುತ್ತಾರೆ. ಇತರರು ಆತನು ಹಾಗಿಲ್ಲ ಎಂದು ಪ್ರಕಟಿಸಿದರೂ ಆತನೇ ದೇವರ ಮಗನೆಂದು ನಂಬಲು ನಿರಾಕರಿಸುತ್ತಾರೆ. ಕೆಲವು ದಿನಗಳು ಯೇಸು ಮತ್ತು ಆತನ ಶಿಷ್ಯರು ಯೆರೂಸಲೇಮನ್ನು ತೊರೆದು ಯೂದಾಯದಲ್ಲಿ ಸಂಚರಿಸಲು ಹೊರಡುತ್ತಾರೆ.
ಒಂದು ಪಟ್ಟಣದಲ್ಲಿ ಯೇಸು ಇನ್ನೂ ಬೋಧಿಸುತ್ತಿರುವಾಗ ಜನರ ಗುಂಪಿನಲ್ಲಿದ್ದ ಒಬ್ಬ ನ್ಯಾಯವಾದಿಯು ಯೇಸುವನ್ನು ಪರೀಕ್ಷಿಸಲು ಅವಕಾಶಕ್ಕಾಗಿ ಕಾಯುತ್ತಿದ್ದಾನೆ.
ಈ ಯುವ ಬೋಧಕನು ಒಂದು ಕಠಿಣ ಪ್ರಶ್ನೆಯನ್ನು ಹೇಗೆ ನಿಭಾಯಿಸುತ್ತಾನೆಂದು ನೋಡುತ್ತೇನೆ.


ಯೆರಿಕೊಗೆ ಹೊರಟದ್ದ ನಾಲ್ವರು ಪ್ರಯಾಣಿಕರು.
ಲೂಕ ೧೦:೨೫-೨೮
ಒಂದು ದಿನ ಯೇಸು ಬೋಧಿಸುತ್ತಿದ್ದಾಗ ನ್ಯಾಯವಾದಿಯೊಬ್ಬನು ಅವನನ್ನು ಪರೀಕ್ಷಿಸಲು ತೀರ್ಮಾನಿಸುತ್ತಾನೆ.
ಫರಿಸಾಯರು ಈಗಾಗಲೇ ಎಷ್ಟೋ ಕ್ಲಿಷ್ಟಕರ ನಿಯಮಗಳ ಮೂಲಕ ಉತ್ತರಿಸಿರುವಂಥ ಪ್ರಶ್ನೆಯನ್ನೇ ಆತನು ಯೇಸುವಿಗೆ ಕೇಳುತ್ತಾನೆ.
ನಿತ್ಯ ಜೀವವನ್ನು ಪಡೆಯಬೇಕಾದರೆ ನಾನು ಏನು ಮಾಡಲಿ?
ಯೇಸು ಪ್ರತ್ಯುತ್ತರ ನೀಡಿ ಪ್ರಶ್ನೆಯೊಂದನ್ನು ಕೇಳುತ್ತಾನೆ. ಆ ಪ್ರಶ್ನೆಯು ಫರಿಸಾಯರ ನಿಯಮಗಳನ್ನು ಉಲ್ಲಂಘಿಸಿ ನೇರವಾಗಿ ದೇವರ ಆಜ್ಞೆಗಳ ಕಡೆಗೆ ಸಾಗುವಂತೆ ಆ ಪ್ರಶ್ನೆಯು ಒತ್ತಾಯಿಸುತ್ತದೆ.
ನಿನಗೆ ದೇವರ ವಾಕ್ಯ ಚೆನ್ನಾಗಿ ತಿಳಿದದೆ... ಆತನ ಆಜ್ಞೆಗಳು ಏನು ಹೇಳುತ್ತವೆ?
ನಿನ್ನ ಪೂರ್ಣ ಹೃದಯದಿಂದ ದೇವರನ್ನು ಹಾಗು ನಿನ್ನಂತೆಯೇ ಪ್ರೀತಿಸಬೇಕು.


ನೀನು ಹೇಳಿದ್ದು ಸರಿ,... ಅದನ್ನು ಮಾಡು...ನೀನು ನಿತ್ಯಜೀವ ಹೊಂದುವಿ.
ಆದರ ನನ್ನ ನೆರೆಯವನು ಯಾರು?
ಯೇಸು ಒಂದು ಕಥೆಯ ಮೂಲಕ ಆವನ ಪ್ರಶ್ನೆಗೆ ಪ್ರತ್ಯುತ್ತರ ನೀಡುತ್ತಾನೆ, ಆ ಕಥೆಯ ಮೂಲಕ ನ್ಯಾಯವಾದಿಯು ತನ್ನಷ್ಟಕ್ಕೇ ಉತ್ತರ ಕಂಡುಕೊಳ್ಳಲು ಸಾಧ್ಯವಾಗುತ್ತದೆ.
ಒಬ್ಬ ವ್ಯಕ್ತಿಯು ಯೆರೂಸಲೇಮಿನಿಂದ ಯೆರೀಕೊಗೆ ಪ್ರಯಾಣಿಸುತ್ತಿದ್ದಾನೆ. ದಾರಿಯಲ್ಲಿ ದರೋಡೆಕೋರರು ಅವನನ್ನು ಆಕ್ರಮಿಸಿ, ದೋಚಿಕೊಂಡು ಅವನನ್ನು ಸಾಯುವತನಕ ಹೊಡೆಯುತ್ತಾರೆ.
ಆಕಸ್ಮಿಕವಾಗಿ ಒಬ್ಬ ಯಾಜಕನು ಆಮಾರ್ಗದಲ್ಲಿ ಬರುತ್ತಾನೆ..ಗಾಯಗೊಂಡಿರುವ ವ್ಯಕ್ತಿಯನ್ನು ನೋಡಿಯೂ ಹಾಗೆಯೇ ಹೊರಟು ಹೋಗುತ್ತಾನೆ.
ಸ್ವಲ್ಪ ಸಮಯದ ನಂತರ ಯಾಜಕರಿಗೆ ಸಹಾಯಕನಾದ ಲೇವಿಯೊಬ್ಬನು ಬರುತ್ತಾನೆ, ಆದರೆ ಅವನು ಸಹ ಶೀಘ್ರವಾಗಿ ಅವನನ್ನು ದಾಟಿಕೊಂಡು ಹೋಗುತ್ತಾನೆ.


ಆದರೆ ಸಮಾರ್ಯದವನೊಬ್ಬನು ಗಾಯಗೊಂಡ ವ್ಯಕ್ತಿಯನ್ನು ನೋಡಿದಾಗ ನಿಂತು ಕೊಳ್ಳುತ್ತಾನೆ. ಸಮಾರ್ಯರು ಯೆಹೂದ್ಯರ ಕಡು ವೈರಿಗಳಾಗಿದ್ದರೂ, ಅವನು ಆ ವ್ಯಕ್ತಿಯ ಗಾಯಗಳನ್ನು ಕಟ್ಟುತ್ತಾನೆ. ಒಂದು ಛತ್ರಕ್ಕೆ ಕರೆದು ಕೊಂಡು ಹೋಗಿ ಅವನ ಆರೈಕೆಗೆ ಹಣ ನೀಡುತ್ತಾನೆ.

ಒಳ್ಳೇ ಸಮಾರ್ಯದವನ ಕಥೆಯನ್ನು ಮುಗಿಸಿದ ಮೇಲೆ ಯೇಸು ' ಈ ಕಳ್ಳರ ಕೈಗೆ ಸಿಕ್ಕಿಕೊಂಡ ವ್ಯಕ್ತಿಗೆ ಈ ಮೂವರಲ್ಲಿ ಯಾರು ನೆರೆಯವರು?' ಎಂದು ಕೇಳುತ್ತಾನೆ.




ಯೇಸು ತನ್ನ ಪ್ರಶ್ನೆಗಳಿಗೆ ಉತ್ತರಿಸಿದ ಚತುರತೆಗೆ ಆಶ್ಚರ್ಯ ಪಡುತ್ತಾ ನ್ಯಾಯವಾದಿಯು ಹಿಂದಿರುಗಿ ಹೋಗುತ್ತಾನೆ.




ಯೇಸು ತನ್ನ ಬೋಧನೆ ಯಾತ್ರೆಯನ್ನು ಮುಂದು ವರೆಸುತ್ತಾನೆ. ಬೇಥಾನ್ಯದಲ್ಲಿ ತನ್ನ ಸ್ನೇಹಿತರನ್ನು ಸಂಧಿಸಲು ಉಳಿದ ಕೊಳ್ಳುತ್ತಾನೆ, ಅವರಾರೆಂದರೆ, ಮರಿಯಳು, ಮಾರ್ಥಳು, ಹಾಗು ಲಾಜರನು.


ಆದರೆ ಅವಳ ಸಹೋದರಿ, ಮಾರ್ಥಳು

**ಕರ್ತನ ಪ್ರಾರ್ಥನೆ**

**ಲೂಕ ೧೦:೪೦-೧೧:೨, ಮತ್ತಾ ೬:೯-೧೩, ಯೋಹಾನ ೧೦:೨೨-೪೦, ಲೂಕ ೧೫:೧-೧೯**

ಯೇಸು ತನ್ನ ಸ್ನೇಹಿತರಾದ ಮರಿಯಳು, ಮಾರ್ಥಳು ಹಾಗು ಲಾಜರನ ಮನೆಯನ್ನು ಸಂಧಿಸಿದಾಗ ಮರಿಯಳು ತನ್ನ ಕೆಲಸವನ್ನು ನಿಲ್ಲಿಸಿ ಯೇಸುವಿನ ಮಾತುಗಳನ್ನು ಆಲಿಸಲು ಕುಳಿತು ಕೊಳ್ಳುತ್ತಾಳೆ. ಆದರೆ ಮಾರ್ಥಳೆ ಶೀಘ್ರವೇ ಅಡುಗೆ ಮನೆಗೆ ಹೋಗಿ ಊಟವನ್ನು ಸಿದ್ಧಮಾಡಲು ತೊಡಗುತ್ತಾಳೆ. ಅವಳು ಕೆಲಸ ಮಾಡುತ್ತಾ ಕೋಪಗೊಳ್ಳುತ್ತಾಳೆ ಕಾರಣ ಮರಿಯಳು ಅವಳಿಗೆ ಸಹಾಯ ಮಾಡುವದಿಲ್ಲ ಎಂಬುದಕ್ಕಾಗಿ ಕೊನೆಗೂ ಅವಳು ಯೇಸುವಿಗೆ ದೂರು ನೀಡುತ್ತಾಳೆ.







ಯೋಸು ತನ್ನ ಪ್ರಯಾಣಗಳ ವೇಳೆಯಲ್ಲಿ ಆಗಾಗ ಪ್ರಾರ್ಥನೆಗಾಗಿ ತಡೆಯುತ್ತಿದ್ದನು. ಆತನ ಶಿಷ್ಯರು ಯೇಸುವಿನ ಜೀವಿತದಲ್ಲಿನ ಪ್ರಾರ್ಥನೆಯ ಬಲವನ್ನು ಕಾಣುತ್ತಿದ್ದರು. ಒಬ್ಬ ಶಿಷ್ಯನು ಆತನೊಂದಿಗೆ ಇದರ ಬಗ್ಗೆ ಮಾತನಾಡುತ್ತಾನೆ.
ನಮಗೆ ಪ್ರಾರ್ಥನೆ ಕಲಿಸು
ಯೇಸು ಉತ್ತರಿಸುತ್ತಾನೆ, ನೀವು ಪ್ರಾರ್ಥನೆ ಮಾಡುವಾಗ ಹೀಗೆ ಹೇಳಿರಿ.
ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂಧು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ, ಪರಲೋಕದಲ್ಲಿರುವ ಪ್ರಕಾರ ಭೂಲೋಕದಲ್ಲಿಯೂ ನಿನ್ನ ಚಿತ್ತವು ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ದಯಪಾಲಿಸು. ನಮಗೆ ತಪು ಮಾಡಿದವರನ್ನು ನಾವು ಕ್ಷಮಿಸುವಂತೆ ನಮ್ಮ ತಪ್ಪುಗಳನ್ನು ಕ್ಷಮಿಸು, ನಮ್ಮನ್ನು ಶೋಧನೆಗೆ ಸೇರಿಸದೇ ಕೇಡಿನಿಂದ ತಪ್ಪಿಸು, ಯಾಕೆಂದರೆ ರಾಜ್ಯವು ಬಲವು, ಮಹಿಮೆಯೂ ಸದಾಕಾಲವೂ ನಿನ್ನವೆ, ಆಮೆನ್.
ಒಂದು ಕ್ಷಣ ಯಾರು ಮಾತನಾಡುವದಿಲ್ಲ. ನಂತರ ಶಿಷ್ಯರು ಮೃದುವಾಗಿ ಆ ಸರಳ ಪ್ರಾರ್ಥನೆಗೆ 'ಆಮೆನ್'ಎನ್ನುತ್ತಾರೆ, ಮುಂದೆ ಅವರು ದೇವರಿಗೆ ಮಾಡುವ ಪ್ರಾರ್ಥನೆಗಳಿಗೆ ಅದು ಮಾದರಿಯಾಗುತ್ತದೆ. ಇದಾದನಂತರ ಯೇಸು ಮತ್ತು ಆತನ ಸಹಾಯಕರು ಯೂದಾಯದಲ್ಲೆಲ್ಲಾ ಬೋಧಿಸುತ್ತಾ, ಸ್ವಸ್ಥಮಾಡುತ್ತಾ ಮುಂದು ವರೆಯುತ್ತಾರೆ. ಯೇಸು ಧಾರ್ಮಿಕ ಹಬ್ಬಕ್ಕಾಗಿ ಯೆರೂಸಲೇಮಿಗೆ ಹಿಂದಿರುಗುವಷ್ಟರಲ್ಲಿ ಜನರು ಪಟ್ಟಣದಲ್ಲೆಲ್ಲಾ ತುಂಬಿಕೊಂಡು ಆತನ ಬಗ್ಗೆ ಮಾತನಾಡಿ ಕೊಳ್ಳುತ್ತಾ ಆಶ್ಚರ್ಯ ಪಡುತ್ತಿರುತ್ತಾರೆ.



ಯೇಸು ದೇವಾಲಯದಲ್ಲಿ ಸಲಮೋನನ ಆವರಣದಬಳಿಯಿಂದ ಸಾಗಿರುವಾಗ ಜನರು ಆತನನ್ನು ಸುತ್ತುವರೆಯುತ್ತಾರೆ.
ನೀನು ಎಷ್ಟರ ತನಕ ನಮ್ಮನ್ನು ಕಾಯಿಸುವಿ? ನೀನು ಮೆಸ್ಸಿಯನಾಗಿದ್ದರೆ ನಮಗೆ ಹೇಳು.
ನಾನು ನಿಮಗೆ ಹೇಳಿದೆ, ಆದರೆ ನೀವು ನಂಬಲಿಲ್ಲ. ನನ್ನ ತಂದೆಯ ಹೆಸರಿನಲ್ಲ ನಾನು ಮಾಡಿರುವ ಸಂಗತಿಗಳೇ ನಾನು ಯಾರೆಂದು ನಿಮಗೆ ತೋರ್ಪಡಿಸುವವು.
ಕೇಳಿದಿರಾ? ದೇವರನ್ನು ತನ್ನ ತಂದೆಯೆಂದು ಕರೆದನು!
ಅವನಿಗೆ ಕಲ್ಲೆಸೆಯಿರಿ
ಯೇಸು ತಿರಿಗಿಕೊಂಡು, ಮೌನವಾಗಿ ಹೊರಟು ಹೋಗುತ್ತಾನೆ ಮತ್ತು ಆಶ್ಚರ್ಯವೆಂದರೆ ಯಾರೊಬ್ಬರು ಅವನನ್ನು ತಡೆಯಲು ಧೈರ್ಯ ಮಾಡಲಿಲ್ಲ.
ಯೇಸು ಯೆರೂಸಲೇಮಿನಿಂದ ಪೆರಿಯಕ್ಕೆ ಹೋಗಿ ಬೋಧನೆ ಹಾಗು ರೋಗಿಗಳನ್ನು ಸ್ವಸ್ಥಮಾಡುವದರಲ್ಲಿ ತೊಡಗುತ್ತಾನೆ. ತಿರಿಗಿ ಪರಿಸಾಯರು ಅಲ್ಲಿ ಬಂದು ಇತನು ಪಾಪಿಗಳೊಂದಿಗೆ ಸೇರಿಕೊಳ್ಳುತ್ತಾನೆಂದು ದೂರುತ್ತಾರೆ. ಯೇಸು ಅವರಿಗೆ ಒಂದು ಕಥೆಯನ್ನು ಹೇಳುತ್ತಾನೆ.
ಒಬ್ಬ ವ್ಯಕ್ತಿಗೆ ಇಬ್ಬರು ಮಕ್ಕಳಿದ್ದರು ಒಂದು ದಿನ ಕಿರಿಯವನು ಅವನ ಬಳಿಗೆ ಬರುತ್ತಾನೆ.
ತಂದೆಯೇ, ನಾನು ನನ್ನ ಜೀವಿತವನ್ನು ನೋಡಿಕೊಳ್ಳುತ್ತೇನೆ. ದಯವಿಟ್ಟು ನನ್ನ ಪಾಲಿನ ಆಸ್ತಿಯನ್ನು ಕೊಟ್ಟು ಬಿಡು.
ನೀನು ನನ್ನೊಂದಿಗಿದ್ದು ಇಲ್ಲಿ ಕೆಲಸದಲ್ಲಿ ಸಹಾಯ ಮಾಡುತ್ತಿಯೆಂದು ನಿರೀಕ್ಷಿಸಿದೆನು. ಆದರೆ ನಿನಗ ಹಣ ಬೇಕಾದರೆ ನನ್ನದೇನು ಅಭ್ಯಂತರವಿಲ್ಲ.
ಯೌವನಸ್ಥನು ಬೇರೊಂದು ದೇಶಕ್ಕೆ ಹೋಗುತ್ತಾನೆ... ಅಲ್ಲಿ ಕೆಟ್ಟ ಸ್ನೇಹಿತರೊಂದಿಗೆ ಸೇರಿಕೊಂಡು ತಿಂದು ಕುಡಿದು ಹಣವನ್ನು ಹಾಳು ಮಾಡುತ್ತಾನೆ. ಕೊನೆಗೆ ಅವನ ಹಣವೆಲ್ಲಾ ಮುಗಿದು ಹೋಗುತ್ತದೆ.. ಅವನ ಹೊಟ್ಟೆ ಪಾಡಿಗೆ ಹಂದಿಗಳನ್ನು ಕಾಯುವ ಕೆಲಸ ಮಾತ್ರವೇ ದೊರೆಯಿತು.

## ತಪ್ಪಿ ಹೋದ ಮಗನ ಹಿಂದಿರುಗುವಿಕೆ-




ನನ್ನ ಮಗನಿಗೆ ಅತಿಉತ್ತಮ ಬಟ್ಟೆಗಳನ್ನು ತನ್ನಿರಿ, ಹಬ್ಬವನ್ನು ಆಚರಿಸೋಣ, ನನ್ನ ಮಗನು ಕಳೆದು ಹೋಗಿದ್ದನು, ಈಗ ಸಿಕ್ಕನು.
ದೂರದ ಹೊಲದಲ್ಲಿ ಹಿರಿಯ ಮಗನು ಕತ್ತಲಾಗುವದರೊಳಗೆ ತನ್ನ ಕೆಲಸವನ್ನು ಮುಗಿಸಲು ಶ್ರಮವಹಿಸಿ ದುಡಿಯುತ್ತಾನೆ.
ನನ್ನ ಸಹೋದರನು ಇಲ್ಲಿದ್ದು ಸಹಾಯ ಮಾಡುತ್ತಿದ್ದರೆ ನನಗೆ ಇಷ್ಟೊಂದು ಕಷ್ಟ ಇರುತ್ತಿರಲಿಲ್ಲ.
ದಿವಸದ ಕೆಲಸ ಮುಗಿದಾಗ ಆತನು ಮನೆಗೆ ಹೋಗುತ್ತಾನೆ. ಆದರೆ ಅವನು ಮನೆಗೆ ಹತ್ತಿರವಾಗುತ್ತಿದ್ದಂತೆ ಸಂಗೀತವು ಕೇಳಿಸುತ್ತದೆ.
ಏನು ನಡೆಯುತ್ತಿದೆ?
ನಿನ್ನ ತಮ್ಮನು ತಿರಿಗಿ ಬಂದಿದ್ದಾನೆ, ಅದಕ್ಕೆ ನಿನ್ನ ತಂದೆ ಅವನಿಗಾಗಿ ಔತಣ ಏರ್ಪಡಿಸಿದ್ದಾನೆ.
ಹಿರಿಯ ಮಗನು ಕೋಪಗೊಂಡು ಮನೆಯೊಳಗೆ ಹೋಗಲು ನಿರಾಕರಿಸುತ್ತಾನೆ. ಅಷ್ಟರಲ್ಲಿ ಆತನ ತಂದೆಯು ಹೊರಬರುತ್ತಾನೆ.
ನಾನು ನಿನಗೆ ಸಹಾಯಕನಾಗಿದ್ದರೂ ಒಮ್ಮೆ ಸಹ ನನಗೆ ಔತಣವನ್ನು ನೀಡಿಲ್ಲ, ಆದರೆ ನನ್ನ ತಮ್ಮನು...
ನನ್ನದೆಲ್ಲಾ ನಿನ್ನದೆ, ಮಗು. ಆದರೆ ನಿನ್ನ ತಮ್ಮನು ತಿರಿಗಿ ಬಂದದ್ದಕ್ಕೆ ನಾವು ಸಂತೋಷಿಸುವದು ಸರಿಯೇ, ಆತನು ಸತ್ತವನಾಗಿದ್ದನು ಈಗ ತಿರಿಗಿ ಜೀವಂತನಾಗಿದ್ದಾನೆ.


ಯೇಸು ಕಥೆಯನ್ನು ಮುಗಿಸಿದಾಗ ಜನರು
ಶ್ಚರ್ಯದಿಂದ ಒಬ್ಬರನ್ನೊಬ್ಬರು
ನೋಡಿಕೊಳ್ಳುತ್ತಾರೆ.
ಅಂದರೆ ಕಥೆಯಲ್ಲಿನ ತಂದೆಯು ದೇವರಂತೆ ಎಂದು ಆತನ ಅರ್ಥವೇ?
ಹೌದು, ನನಗನಿಸುತ್ತದ, ಪಾಪಿಗಳಾದ ನಾವು ದೇವರ ಬಳಿ ಹಿಂದಿರುಗುವದಾದರೆ ಆತನು ನಮ್ಮನ್ನು ಕ್ಷಮಿಸುತ್ತಾನೆ.
ಫರಿಸಾಯರು ಜನರ ಪ್ರತಿಕ್ರಿಯೆಗಳನ್ನು ಕಂಡು ಕೋಪದಿಂದ ಹೊರಟು ಹೋಗುತ್ತಾರೆ. ಯೇಸು ಬೋಧನೆಯನ್ನು ಮುಂದುವರೆಸುತ್ತಾರೆ. ಆದರೆ ಬಹು ಬೇಗನೆ ತಡೆಯುಂಟಾಗತ್ತದೆ.
ಯೇಸುವೇ, ಮರಿಯಳು ಮತ್ತು ಮಾರ್ಥಳುತನ್ನ ಸಹೋದರ ಲಾಜರನು ರೋಗದಲ್ಲಿದ್ದಾನೆಂದು ತಿಳಿಸಲು ನನ್ನನು ಕಳುಹಿಸಿದ್ದಾರೆ. ನೀನು ಬೇಥಾನ್ಯಕ್ಕೆ ಬರಬೇಕೆಂದು ಇಚ್ಛಿಸುತ್ತಾರೆ.
ಬೇಥಾನ್ಯ? ಅದು ಯೆರೂಸಲೇಮಿನಲ್ಲಿನ ಆತನ ವೈರಿಗಳಿಗೆ ಬಹಳ ಹತ್ತಿರ. ಅವರು ಅವನನ್ನು ಸಾಯಿಸುವರು!

## ಸಮಾಧಿಯಿಂದ ಕರೆಯಲ್ಪಟ್ಟನು

ಯೋಹಾನ ೧೧:೩೮-೪೪, ಲೂಕ ೧೮:೧೫-೨೩, ೧೯:೧-೩ ರಿಂದ

ಯೇಸು ಮತ್ತು ಆತನ ಶಿಷ್ಯರು ಬೇಥಾನ್ಯಕ್ಕೆ ತಲುಪುವದರೊಳಗೆ ಮರಿಯಳು ಹಾಗು ಮಾರ್ಥಳ ಸಹೋದರನಾದ ಲಾಜರನು ಸತ್ತು ನಾಲ್ಕು ದಿನಗಳಾಗಿದಿದವು. ಯೇಸು ಸಮಾದಿಯ ಗವಿ ಬಳಿ ಹೋಗಿ ಕಲ್ಲನ್ನು ಉರುಳಿಸಲು ಹೇಳುತ್ತಾನೆ. ಅವನು ದೇವರನ್ನು ಪ್ರಾರ್ಥಿಸಿ ಗಟ್ಟಿಯಾದ ಸ್ವರದಲ್ಲಿ ಹೀಗೆ ಕರೆಯುತ್ತಾನೆ...




ಲಾಜರನು ಕಂಡು ಬಂದಾಗ ಜನರ ಗುಂಪಿಗೆ ಅತ್ಯಾಶ್ಚರ್ಯವಾಗುತ್ತದೆ.
ಲಾಜರ!
ಓ, ಯೇಸುವೇ, ಏನಗೆ ಕೃತಜ್ಞತೆಗಳು.


ಒಬ್ಬನು ಸತ್ತವರಿಂದ ಎಬ್ಬಿಸಲ್ಪಟ್ಟನೆ! ಜನರಿಗೆ ತಾವು ಕಂಡದ್ದನ್ನು ನಂಬಲಾಗಲಿಲ್ಲ. ಅವರಲ್ಲಿ ಅನೇಕರು ' ಮೆಸ್ಸಿಯನೇ, ದೇವರ ಮಗನೇ' ಎಂದು ಕೂಗುತ್ತಾ ಯೇಸುವಿನಲ್ಲಿ ನಂಬಿಕೆಯಿಟ್ಟರು. ಆದರೆ ಇತರರು ಯೇಸು ಮಾಡಿರುವಂತದ್ದನ್ನು ಪರಿಸಾಯರಿಗೆ ತಿಳಿಸಲು ಯೆರೂಸಲೇಮಿಗೆ ಹೋದರು.


ಪರಿಸಾಯರು ಮತ್ತು ಪ್ರಧಾನ ಯಾಜಕರು ಕೋಪದಿಂದ ಕೂಡಿದವರಾಗಿ ಒಂದು ತುರ್ತು ಸಭೆಯನ್ನು ಕರೆಯುತಾರೆ.
ಈ ಸುದ್ದಿಯು ಹರಡುವದಾದರೆ ಜನರು ಯೇಸುವನ್ನು ರಾಜನಾಗಿ ಮಾಡಲು ಪ್ರಯತ್ನಿಸುತ್ತಾರೆ.
ಮತ್ತು ಬಂಡಾಯವೇಳುವದಾದರೆ ರೋಮನ್ನರು ನಮ್ಮನ್ನು ಆರೋಪಿಸುತ್ತಾರೆ. ನಾವು ಸ್ಥಾನಗಳನ್ನು ಕಳೆದು ಕೊಳ್ಳುತ್ತೇವೆ ಹಾಗು ರಾಷ್ಟ್ರ ನಾಶವಾಗುತ್ತದೆ.


ನಿಮಗೆ ತಿಳಿಯದೋ? ರಾಷ್ಟ್ರವನ್ನೆಲ್ಲಾ ತೊಂದರೆಗೊಳಪಡಿಸುವದಕ್ಕಿಂತ ಯೇಸುವನ್ನು ಕೊಲ್ಲುವದು ಉತ್ತಮ.
ಕಾಯಫನು ಜಾಣಾಕ್ಷ, ಯೇಸುವನ್ನು ಕೊಲ್ಲಲು ಕಾರಣ ಅವನಿಗೆ ದೊರೆತಿದೆ...ಅದಕ್ಕೆ ಮಾರ್ಗವನ್ನೂ ಕಂಡುಕೊಳ್ಳುತ್ತಾನೆ.
ಯೇಸು ತನ್ನ ವಿರುದ್ಧ ಮಾಡಲಾದ ಈ ಕುತಂತ್ರದ ಬಗ್ಗೆ ತಿಳಿದಾಗ ತನ್ನ ವೈರಿಗಳನ್ನು ಮುಖಾಮುಖಿಯಾಗಿ ನೋಡುವ ಕಾಲ ಬರುವ ತನಕ ಕಾಯ್ದುಕೊಳ್ಳಲು ಒಂದು ಮೌನವಾದ ಸ್ಥಳಕ್ಕೆ ಹೋಗುತ್ತಾನೆ. ಪಸ್ಕ ಹಬ್ಬದ ಸಮಯವು ಹತ್ತಿರವಾಗುತ್ತಿದ್ದಂತೆ ಪಿಲಿಪ್ಪಿಯದ ಎಲ್ಲಾ ಕಡೆಯಿಂದ ಜನರು ಯೆರೂಸಲೇಮಿಗೆ ಪ್ರಯಾಣಿಸುತ್ತಾರೆ... ಯೇಸು ಸಹ ಅವರಲ್ಲಿ ಸೇರುತ್ತಾನೆ.
ಮಾರ್ಗ ಮದ್ಯದಲ್ಲಿ ಜನರು ಯೇಸುವನ್ನು ನೋಡಲೂ ಆತನ ಬೋಧನೆಗಳನ್ನು ಕೇಳಲೂ ಬಯಸುತ್ತಾರೆ.
ಇಲ್ಲ... ಇಲ್ಲ... ನಿಮ್ಮ ಮಕ್ಕಳನ್ನು ಆಚೆ ಒಯ್ಯಿರಿ ಯೇಸುವಿಗೆ ಸಮಯವಿಲ್ಲ.
ಆದರೆ ಯೇಸು ನನ್ನ ಚಿಕ್ಕ ಮಗವನ್ನು ಆಶೀರ್ವದಿಸ ಬೇಕೆಂದು ಇಚ್ಛಿಸುತ್ತಾನೆ.
ಚಿಕ್ಕ ಮಕ್ಕಳನ್ನು ನನ್ನ ಹತ್ತಿರ ಬರಲು ಬಿಡಿ ಯಾಕೆಂದರೆ ದೇವರ ರಾಜ್ಯವು ಅವರಂತಹ ಪ್ರೀತಿ, ವಿಶ್ವಾಸ ಇರುವಂತವರದೇ.


ಸ್ವಲ್ಪದೂರ ಸಾಗಿದ ಮೇಲೆ ಒಬ್ಬ ಯೌವನಸ್ಥನು ಯೇಸುವನ್ನು ತಡೆಯುತ್ತಾನೆ.
ಬೋಧಕನೇ, ನಾನು ನಿತ್ಯಜೀವ ಪಡೆಯಲು ಏನು ಮಾಡ ಬೇಕು?
ದೇವರ ಆಜ್ಞೆಗಳನ್ನು ಪಾಲಿಸು
ಆದರೆ ಚಿಕ್ಕಂದಿನಿಂದ ನಾನು ಆ ಆಜ್ಞೆಗಳನ್ನು ಪಾಲಿಸಿದ್ದೇನೆ.
ನೀನು ಇನ್ನು ಒಂದನ್ನು ಮಾಡಬೇಕಿದೆ....ನಿನಗಿರುವದನ್ನೆಲ್ಲಾ ಮಾರಿ, ಹಣವನ್ನು ಬಡವರಿಗೆ ಕೊಟ್ಟು ನನ್ನನ್ನು ಹಿಂಬಾಲಿಸು.
ಆದರೆ ಯೌವನಸ್ಥನು ತನ್ನ ಐಶ್ವರ್ಯವನ್ನು ಪ್ರೀತಿಸಿ ನಿಧಾನವಾಗಿ ಯೇಸುವಿಗೆ ಬೆನ್ನನ್ನು ತಿರುಗಿಸಿ ಹೊರಟು ಹೋಗುತ್ತಾನೆ.
ಪ್ರಯಾಣಿಕರು ಯೆರೂಸಲೇಮಿನೆಡೆಗೆ ಮುಂದುವರೆಯುತ್ತಾರೆ. ಅವರು ಯೆರಿಕೊವನ್ನು ತಲುಪುವಷ್ಟರಲ್ಲಿ ಯೇಸುವಿನ ಸುತ್ತಲೂ ಸಂತೋಷ ಹಾಗು ಉತ್ಸಾಹವುಳ್ಳಂಥ ದೊಡ್ಡ ಜನಸಮೂಹವು ಇರುತ್ತದೆ.
ದಯವಿಟ್ಟು...ನನಗೆ ದಾರಿ ಬಿಡಿರಿ.
ಏ....ಜಕ್ಕಾಯ, ಕುತಂತ್ರಿ ಕಳ್ಳ ಸುಂಕ ವಸೂಲಿಗಾರನೇ, ಯೇಸುವನ್ನು ನೋಡುವ ಆಸೆಯೇ!
ನಾನು ಯೇಸುವನ್ನು ನೋಡಬೇಕು...ನೋಡಿಯೇ ನೋಡುತ್ತೇನೆ.

## ಮರದ ಮೇಲೆ ಮನುಷ್ಯ

ಲೂಕ ೧೯:೪-೧೦, ಯೋಹಾನ ೧೨:೧-೮, ಲೂಕ ೧೯:೨೯-೩೮

ಸುಂಕ ವಸೂಲಿಗಾರನಾದ ಜಕ್ಕಾಯನು ಕುಳ್ಳ ನಾಗಿದ್ದರಿಂದ ಜನರ ಮೇಲಿಂದ ನೋಡಲಾಗಲಿಲ್ಲ. ಆಗ ಅವನು ಜನರ ಗುಂಪಿಗಿಂತ ಮುಂಚೆ ಓಡಿ ಹೋಗಿ ಒಂದು ಮರವನ್ನು ಏರಿ ಕಾಯುತ್ತಾನೆ. ಯೇಸು ಅವನನ್ನು ನೋಡಿ ನಿಂತು ಕೊಳ್ಳುತ್ತಾನೆ.



ಯೇಸು ತನ್ನೊಂದಿಗೆ ಮಾತನಾಡುತ್ತಾನೆಂಬುದಕ್ಕೆ ಜಕ್ಕಾಯ
ಚಕಿತನಾಗುತ್ತಾನೆ, ಆದರೆ ತಕ್ಷಣವೇ, ಕೆಳಗೆ ಇಳಿದು
ಯೇಸುವಿಗೆ ಮನೆತೋರಿಸಲು ಮುಂದೆ ನಡೆಯುತ್ತಾನೆ.




ಜಕ್ಕಾಯನಿಗೂ ಆಶ್ಚರ್ಯವಾಗುತ್ತದೆ, ಆದರೆ ಶೀಘ್ರವೇ
ತಾನು ಯೇಸುವಿನ ಸನ್ನಿದಿಯಲ್ಲಿ ಇರುವದರಿಂದ ಮಾಡಿದ
ಎಲ್ಲಾ ತಪ್ಪುಗಳ ವಿಷಯಗಳಲ್ಲಿ ನಾಚಿಕೆಯುಂಟಾಗುತ್ತದೆ.
ಅವನು ಕ್ಷಮೆ ಹೊಂದಿ ಹೊಸದಾಗಿ ಜೀವನ ಸಾಗಿಸಲು
ಬಯಸುತಾನೆ.




ಜನರ ಗುಂಪು ಯೆರೀಕೊವಿನಿಂದ ಪಸ್ಕ ಹಬ್ಬಕ್ಕಾಗಿ ಯೆರೂಸಲೇಮಿಗ ಪ್ರಯಾಣವನ್ನು ಸಾಗಿಸುತ್ತಾರೆ. ಹಬ್ಬಕ್ಕೆ ಇನ್ನು ಆರು ದಿನಗಳಿರುತ್ತವೆ. ಆದ್ದರಿಂದ ಯೇಸು ಬೇಥಾನ್ಯದಲ್ಲಿರುವ ಮರಿಯ, ಮಾರ್ಥ ಹಾಗು ಲಾಜರರೆಂಬ ತನ್ನ ಸ್ನೇಹಿತರನ್ನು ಸಂಧಿಸಲು ಉಳಿದು ಕೊಳ್ಳುತ್ತಾನೆ. ಕುಷ್ಠರೋಗಿಯಾದ ಸಿಮೋನನ ಮನೆಯಲ್ಲಿ ಬೋಜನದ ವೇಳೆ ಮರಿಯಳು ಯೇಸುವಿನ ಬಳಿ ಮೊಣಕಾಲೂರಿ ಬೆಲೆಯುಳ್ಳ ಸುಗಂದ ತೈಲದಿಂದ ಆತನ ಪಾದಗಳನ್ನು ತೊಳೆದು ತನ್ನ ತಲೆಕೂದಲಿನಿಂದ ಒರೆಸುತ್ತಾಳೆ.

ಶಿಷ್ಯರಲ್ಲಿ ಖಜಾಂಚಿಯಾಗಿದ್ದ ಇಸ್ಕರೀಯೊತ ಯೂದನು
ಇದು ಹಣವನ್ನು ವ್ಯರ್ಥ ಮಾಡಿದಂತೆ ಎಂದು
ಯೋಚಿಸಿ ಕೋಪಗೊಳ್ಳುತ್ತಾನೆ.







ಈ ವಿಷಯದಲ್ಲಿ ನಿರಾಶನಾದ ಯೂದನಿಗೆ ಕೋಪವುಂಟಾಯಿತು ಮತ್ತು ಅವನಿಗೆ ಒಂದು ಕೆಟ್ಟ ಯೋಚನೆ ಹೊಳೆಯುತ್ತದೆ.
ಸರಿಯಾದ ಸಮಯ ನೋಡಿ ನಾನು ಯಾಜಕರು ಮತ್ತು ಫರಿಸಾಯರ ಹತ್ತಿರ ಹೋಗುವೆ.... ನನ್ನ ಮಾತನ್ನು ಕೇಳಲು ಅವರೆಲ್ಲಾ ಸಂತೋಷಿಸುವರು.
ಮರುದಿನ ಯೇಸು ಮತ್ತು ಆತನ ಶಿಷ್ಯರು ಪಸ್ಕ ಹಬ್ಬದ ಸಿದ್ಧತೆಗಾಗಿ ಯೆರೂಸಲೇಮಿಗೆ ಹೊರಟಿದ್ದ ಜನ ಸಮೂಹವನ್ನು ಸೇರಿಕೊಳ್ಳುತ್ತಾರೆ. ಮಾರ್ಗ ಮಧ್ಯದಲ್ಲಿ.
ಆ ಹಳ್ಳಿಗೆ ಹೋಗಿರಿ, ಊರನ್ನು ಪ್ರವೇಶಿಸುತ್ತಿದ್ದಂತೆ ನಿಮಗೆ ಒಂದು ಕತ್ತೆ ಕಾಣಿಸುವದು, ಅದನ್ನು ನನ್ನ ಬಳಿ ತೆಗೆದು- ಕೊಂಡು ಬನ್ನಿರಿ,ಮತ್ತು ಯಾರಾದರೂ ನಿಮ್ಮನ್ನು ಪ್ರಶ್ನಿಸಿದರೆ ಅದು ನನಗೆ ಬೇಕು ಮತ್ತು ಹಿಂದಿರುಗಿಸುವೆನೆಂದು ಹೇಳಿರಿ.
ಗೊಂದಲಕ್ಕೊಳಗಾದ ಇಬ್ಬರು ಶಿಷ್ಯರು ಹಳ್ಳಿಗೆ ಹೋಗುತ್ತಾರೆ. ಅಲ್ಲಿ ಒಂದು ಕತ್ತೆಯನ್ನು ಕಾಣುತ್ತಾರೆ. ಅವರು ಅದರ ಹಗ್ಗವನ್ನು ಬಿಚ್ಚುತ್ತಿರುವಾಗ...
ಏನದು, ನನ್ನ ಪ್ರಾಣಿಯನ್ನು ಒಯ್ಯುತ್ತಿದ್ದೀರೋ?
ಯೇಸು ಇದು ನನಗೆ ಬೇಕೆಂದು ಹೇಳಲು ಹೇಳಿದ್ದಾನೆ.
ಯೇಸುವಿನ ಹೆಸರು ಹೇಳಿದಾಗ ಆ ವ್ಯಕ್ತಿಯು ಸಂತೋಷವಾಗಿ ತನ್ನ ಕತ್ತೆ ಮರಿಯನ್ನು ಕೊಡುತ್ತಾನೆ..
ಯೇಸುವಿಗೆ ನನ್ನ ಕತ್ತೆ ಏಕೆ ಬೇಕೆಂದು ತೋಚದು. ಅದರ ಮೇಲೆ ಯಾರೂ ಸವಾರಿ ಮಾಡಿಲ್ಲ... ಅಲ್ಲದೆ ಯಾರಿಗೂಸಹ ಅದೇನೂ ಅಷ್ಟು ಶ್ರೇಷ್ಠಪ್ರಾಣಿಯಲ್ಲ, ಅದರಲ್ಲೂ ಯೇಸುವಿನಂತ ಪ್ರಾಮುಖ್ಯ ವ್ಯಕ್ತಿಗೆ ಈ ಪ್ರಾಣಿ ಬೇಕೆ.

## ಜಯೋತ್ಸಾಹದ ಪ್ರವೇಶ

೨. ಲೂಕ ೧೯:೨೭-೨೮, ಮತ್ತಾ ೨೧:೧೦-೧೭



ಇದು ವಾರದ ಮೊದಲನೆಯ ದಿನ. ಯೆರೂಸಲೇಮಿನ ರಸ್ತೆಯು ಯೆಹೂದ್ಯರ ಪಸ್ಕ ಹಬ್ಬದ ಆಚರಣೆಗಾಗಿ ಹೊರಟಿದ್ದ ಜನರಿಂದ ತುಂಬಿತ್ತು. ಯೇಸುವಿನ ಮನವಿಯ ಮೇರೆಗೆ ಆತನ ಶಿಷ್ಯರು ಅವನಿಗೆ ಭಾರ ಹೊರುವ ದೀನ ಪ್ರಾಣಿಯನ್ನು ತಂದುಕೊಡುತ್ತಾರೆ...ಆತನು ಅದರ ಮೇಲೆ ಹತ್ತಿ ಯಾತ್ರಿಕರ ಸಮೂಹವನ್ನು ಸೇರಿಕೊಳ್ಳುತ್ತಾನೆ. ಅವರು ಖರ್ಜೂರದ ಗರಿಗಳನ್ನು ಬೀಸುತ್ತಾ ತಮ್ಮ ಬಟ್ಟೆಗಳನ್ನು ದಾರಿಯಲ್ಲಿ ಹಾಸುತ್ತಾ ಆತನಿಗೆ ಮಾರ್ಗ ಮಾಡುತ್ತಾರೆ. ಅವರು ಯೇಸುವನ್ನು ಜಯೋತ್ಸಾಹದಿಂದ ಕರೆದುಕೊಂಡು ಹೋಗುತ್ತಿದ್ದಂತೆ 'ಹೊಸನ್ನಾ, ಕರ್ತನ ಹೆಸರಿನಲ್ಲಿ ಬರುವ, ಅರಸನು ಧನ್ಯನು' ಎಂದು ಕೂಗುವ ಸ್ತುತಿಯ ಶಬ್ದವು ಇಡೀ ಪಟ್ಟಣ, ಬೀದಿಗಳಲ್ಲಿ ತುಂಬಿರುತ್ತದೆ.


ತನ್ನ ದೀರ್ಘ ಇತಿಹಾಸದಲ್ಲಿ ತನ್ನ ದ್ವಾರಗಳನ್ನು ಪ್ರವೇಶಿಸುವ ಅನೇಕ ಸಂಚಲನೆಗಳನ್ನು ಯೆರೊಸಲೇಮ ನೋಡಿದೆ. ಕುದುರೆಯ ಮೇಲೆ ಕುಳಿತು ರಾಜರು ಹಾಗು ವಿಜಯಿಯು ತನ್ನ ಆಯುಧ ಧರಿಸಿದ ಸೈನ್ಯದೊಂದಿಗೆ ಬರುವದನ್ನು ಕಂಡಿದೆ.ಆದರೆ ಈ ರೀತಿಯಾಗಿ ಎಂದೂ ನೋಡಿರಲಲ್ಲಿ.
ಇವನು ಯಾರು?
ನಜರೇತಿನ ಪ್ರವಾದಿಯಾದ ಯೇಸು!
ಆದರೆ ಯೇಸು ಬರುತ್ತಿರುವನೆಂಬ ವಾರ್ತೆಯು ಈಗಾಗಲೇ ಪಟ್ಟಣದಲೆಲ್ಲಾ ಹರಡಿದೆ. ಆತನು ದೇವಾಲಯವನ್ನು ತಲುಪಿದಾಗ ಕುರುಡರು, ಕುಂಟರು, ರೋಗಿಗಳು ಅಲ್ಲಿ ಕಾಯುತ್ತಿರುತ್ತಾರೆ.
ನನ್ನ ಮಗುವೇ, 'ಎದ್ದು ನಡೆ
ದಾವಿದ ಕುಮಾರನಿಗೆ ಹೊಸನ್ನಾ!


ಮಕ್ಕಳು ಸ್ತುತಿಸುವದನ್ನು ಕಂಡು ಯಾಜಕರಿಗೂ
ಪರಿಸಾಯರಿಗೂ ಕೋಪ ವುಂಟಾಗುತ್ತದೆ.
ಅವರು ಏನು ಅನ್ನುತ್ತಿದ್ದಾರೆಂದು ನಿಮಗೆ ಕೇಳಿಸುತ್ತದೊ?
ಹೌದು, ದೇವರು ಮಕ್ಕಳ ಬಾಯಿಂದ ಪರಿಪೂರ್ಣ ಸ್ತುತಿಯನ್ನು ಹೊರಡಿಸುತ್ತಾನೆಂದು ನೀವು ಕೀರ್ತನೆಗಳಲ್ಲಿ ಓದಲಿಲ್ಲವೊ?


ಆ ಸಂಜೆ ಯೇಸು ತಿರಿಗಿ ಬೇಥಾನ್ಯಕ್ಕೆ ಹೋಗುತ್ತಾನೆ, ಆದರೆ
ಸೋಮವಾರ ಆತನು ಯೆರೂಸಲೇಮಿನ ದೇವಾಲಯಕ್ಕೆ
ಹಿಂದಿರುಗುವಾಗ...
ದೇವರಿಗೆ ಯಜ್ಞವರ್ಪಿಸಲು ನಾನು ದೂರದಿಂದ ಬಂದಿದ್ದೇನೆ. ಆದರೆ ಪಾರಿವಾಳಗಳಿಗೆ ಅಷ್ಟೊಂದು ಹೆಚ್ಚು ಬೆಲೆಯನ್ನು ಕೊಡಲಾಗದು.
ಇನ್ನೊಬ್ಬರು ಕೊಳ್ಳುತ್ತಾರೆ....ಹೋಗು ಆಚೆ.


ನೀತಿಯ ಕೋಪದಲ್ಲಿ ಯೇಸು ವ್ಯಾಪಾರಸ್ಥರನ್ನು ದೇವಾಲಯದಿಂದ ಹೊರಡಿಸುತ್ತಾನೆ.
ನನ್ನ ಆಲಯವು ಪ್ರಾರ್ಥನಾಲಯ ಅನ್ನಿಸಿಕೊಳ್ಳವದು' ಎಂದು ಶಾಸ್ತ್ರಗಳಲ್ಲಿ ಬರೆದಿದೆಯಲ್ಲವೆ? ಆದರೆ ನೀವು ಅದನ್ನು ಕಳ್ಳರ ಗವಿಯನ್ನಾಗಿ ಮಾಡಿದ್ದೀರಿ.




ಯೇಸು ಬೋಧಿಸಲು ಪ್ರಾರಂಭಿಸಿದಾಗ ಜನರು ಗುಂಪು ಗುಂಪಾಗಿ ಆತನ ಮಾತನ್ನು ಕೇಳಲು ದೇವಾಲಯದಲ್ಲಿ ಕೂಡಿ ಬರುತ್ತಾರೆ. ಆದರೆ ಮುಚ್ಚಿದ ಬಾಗಿಲಿನ ಹಿಂದೆ ಯಾಜಕರು ಹಾಗು ಪರಿಸಾಯರು ತಮ್ಮ ತಂತ್ರವನ್ನು ರೂಪಿಸುತ್ತಾರೆ. ಮಂಗಳವಾರದ ಹೊತ್ತಿಗೆ ಅವರು ಸಿದ್ಧರಾಗಿದ್ದಾರೆ.



## ಶ್ರೇಷ್ಠ ಆಜ್ಞೆ

ಲೂಕ ೨೦:೨೬, ಮಾರ್ಕ ೧೨:೨೮-೩೪, ೩೮-೪೪, ೧೩; ಮತ್ತಾಯ ೨೬:೧೪-೧೬

ಯೇಸು ದೇವಾಲಯದ ಆವರಣದಲ್ಲಿ ಬೋಧಿಸುತ್ತಿದ್ದಾನೆ ಹಾಗು ಅವನನ್ನು ತೊಂದರೆಗೆ ಸಿಕ್ಕಿಸಬೇಕೆಂಬ ಪ್ರಯತ್ನದಲ್ಲಿ ಪರಿಸಾಯರು 'ಕೈಸರನಿಗೆ ಸುಂಕ ಕೊಡುವದು ಸರಿಯೋ? ಎಂದು ಪ್ರಶ್ನಿಸುತ್ತಾರೆ. ಇದು ಒಂದು ಕುತಂತ್ರ ಪ್ರಶ್ನೆಯೆಂದು ಯೇಸುವಿಗೆ ತಿಳಿದಿದೆ. ಅವನು 'ಹೌದು' ಎಂದು ಹೇಳಿದರೆ ಜನರು ಅವನಿಗೆ ವಿರುದ್ಧವಾಗುತ್ತಾರೆ. ಅವನು 'ಸರಿಯಲ್ಲ' ಎಂದು ಉತ್ತರಿಸಿದರೆ ರಾಜದ್ರೋಹಕ್ಕಾಗಿ ರೋಮಾಯರು ಅವನನ್ನು ಬಂಧಿಸುವರು. ಯೇಸು ಅವರಿಗೆ ಒಂದು ನಾಣ್ಯವನ್ನು ಕೊಡಿರಿ ಎಂದು ಕೇಳುತ್ತಾನೆ.



ಯೇಸು ಮೌನವಾಗಿ ನಾಣ್ಯವನ್ನು ಹಿಂದಿರುಗಿಸುತ್ತಾನೆ.




ಪರಿಸಾಯರು ತಿರಿಗಿ ತಾವು ಸೋತೆವೆಂದು ಕೋಪಗೊಳ್ಳುತ್ತಾರೆ. ಆದರೆ ಅವರ ಕುತಂತ್ರದ ಪ್ರಶ್ನೆಯನ್ನು ನಿಭಾಯಿಸಿದ ಯೇಸುವಿನ ಚತುರತೆಯ ಬಗ್ಗೆ ಚಕಿತರಾಗುತ್ತಾರೆ. ಅದೇ ದಿನದಲ್ಲಿ ಅವರಲ್ಲೊಬ್ಬನು ಇನ್ನೊಂದು ಕಠಿಣ ಪ್ರಶ್ನೆಯನ್ನು ಕೇಳುತ್ತಾನೆ.







ಜನರು ನೋಡಲೆಂದು ಒಳ್ಳೇ ಕಾರ್ಯಗಳನ್ನು ಮಾಡುವವರ ವಿಷಯದಲ್ಲಿ ಯೇಸು ಎಚ್ಚರಿಸುತ್ತಾನೆ. ಅವನು ಮಾತನಾಡುವದನ್ನು ಮುಗಿಸಿದ ಮೇಲೆ ಒಬ್ಬ ಗರ್ವಿಷ್ಠ ಮನುಷ್ಯನು, ದೇವಾಲಯದ ಕಾಣಿಕೆ ಪೆಟ್ಟಿಗೆಯಲ್ಲಿ ಬಹಳಷ್ಟು ಹಣ ಹಾಕುವದನ್ನು ನೋಡುತ್ತಾನೆ.
ಅವನ ನಂತರ ಒಬ್ಬ ವಿಧವೆಯ ದೀನತೆಯಿಂದ ಎರಡು ಚಿಕ್ಕ ನಾಣ್ಯಗಳನ್ನು ಹಾಕುತ್ತಾಳೆ.
ವಿಧವೆಯು ಎಲ್ಲರಿಗಿಂತ ಹೆಚ್ಚನ್ನು ಕೊಟ್ಟಿದ್ದಾಳೆ...ಕಾರಣ ತನ್ನ ಬದುಕನ್ನೆಲ್ಲಾ ಅವಳು ದೇವರಿಗೆ ನೀಡಿದ್ದಾಳೆ.
ಈ ಮಾತುಗಳನ್ನು ಹೇಳಿ ಯೇಸು ದೇವಾಲಯದಿಂದ ಹೊರಡುತ್ತಾನೆ...ಅದು ಆತನ ಕೊನೆಯ ಬೇಟಿಯಾಗಿದೆ. ಯೆರುಸಲೇಮಿನ ಹೊರಗೆ ಎಣ್ಣೆ ಮರಗಳ ಗುಡ್ಡದ ಇಳಿಜಾರಿನಲ್ಲಿ ಶಿಷ್ಯರು ಯೇಸುವಿಗೆ ಭವಿಷ್ಯತ್ತಿನ ಬಗ್ಗೆ ಕೇಳುತ್ತಾರೆ. ಯೇಸು ಅವರಿಗೆ ತನ್ನ ಸುವಾರ್ತೆಯು ಲೋಕದಲ್ಲೆಲ್ಲಾ ಸಾರಲ್ಪಡುವದು... ಮತ್ತು ಅನಂತರ ಆತನು ಲೋಕಕ್ಕೆ ನ್ಯಾಯ ತೀರಿಸಲು ತಿರಿಗಿ ಬರುವನು ಎಂದು ವಿವರಿಸುತ್ತಾನೆ.


ಯೇಸು ಮತ್ತು ಆತನ ಶಿಷ್ಯರು ಬೇಥಾನ್ಯಕ್ಕೆ ಹಿಂದಿರುಗುತ್ತಾರೆ. ಆರಾತ್ರಿಯ ನಂತರ ಮರಿಯಳು ಬೆಲೆಯುಳ್ಳ ತೈಲವನ್ನು ಯೇಸುವಿನ ಪಾದಗಳಿಗೆ ಹಚ್ಚಿದ ವೇಳೆ ತನ್ನ ಮನಸ್ಸಿನಲ್ಲಿ ಬಂದ ಆಲೋಚನೆಯನ್ನು ನೆರವೇರಿಸಲು ಯುದನು ಯೆರೂಸಲೇಮಿಗೆ ಹೊರಡುತ್ತಾನೆ.
ನಾನು ಪ್ರಧಾನ ಯಾಜಕನನ್ನು ನೋಡಬೇಕು.
ಇಸ್ಕರಿಯೋತ ಯೂದ? ಯಾಕೆ, ಅವನು ಯೇಸುವಿನ ಶಿಷ್ಯರಲ್ಲೊಬ್ಬನು. ಅವನನ್ನು ಒಳಗೆ ಬಿಡು
ಇಸ್ಕರಿಯೋತ ಯೂದನೆಂಬವನು। ನಿಮ್ಮನ್ನು ತುರ್ತು ವಿಷಯಕ್ಕಾಗಿ ನೋಡಬೇಕೆಂದು ಹೇಳುತ್ತಾನೆ.
ನೀವು ಯೇಸುವನ್ನು ಮುಗಿಸಲು ಎಷ್ಟಾಗಿ ಬಯಸುತ್ತೀರೆಂದು ಬಲ್ಲೆನು. ಅವನನ್ನು ಕಾಯುವ ಜನರಿಂದ ದೂರವಿರುವಾಗ ಹಿಡಿದು ಕೊಟ್ಟರೆ ನನಗೆ ಏನು ಕೊಡುತ್ತೀರಿ.
ಮೂವತ್ತು ಬೆಳ್ಳಿನಾಣ್ಯ ಕೊಡುವೆ.

## ಗುಪ್ತವಾಗಿ ಒಂದು ಮೇಲಂತಸ್ತಿನ ಕೋಣೆಯಲ್ಲಿ

ಲೂಕ ೨೨:೭-೧೩, ಯೋಹಾನ ೧೩:೧-೨೦, ೨೭-೩೦, ಮತ್ತಾಯ ೨೬:೨೧-೨೫




ಆ ವ್ಯಕ್ತಿಯು ಶೀಘ್ರವಾಗಿ ಅವರನ್ನು ಮೇಲಂತಸ್ತಿನ ದೊಡ್ಡ ಕೋಣೆಗೆ ಕರೆದೊಯ್ಯುತ್ತಾನೆ.
ಯೇಸುವನ್ನು ಮನೆಯಲ್ಲಿ ಪಸ್ಕ ಹಬ್ಬ ಆಚರಿಸಲು ಬಿಡುವದು ನನ್ನ ಭಾಗ್ಯ
ಪೇತ್ರ ಹಾಗು ಯೋಹಾನರು [illegible]ಕ್ಕಾಗಿ ಸಿದ್ಧ ಮಾಡುತ್ತಾರೆ, ಆಸಂಜೆಯಲ್ಲಿ ಯೇಸು ಮೇಲಂತಸ್ತಿನ ಕೋಣೆಯಲ್ಲಿ ತನ್ನ ಹನ್ನೆರಡು ಮಂದಿ ಶಿಷ್ಯರೊಟ್ಟಿಗೆ ಸೇರುತ್ತಾನೆ. ಅವರು ಕುಳಿತ ಮೇಲೆ ಯೇಸು ಸೇವಕನಂತೆ ಮೊಣಕಾಲೂರಿ ಶಿಷ್ಯರ ಪಾದಗಳನ್ನು ತೊಳೆಯಲು ಸಿದ್ಧನಾಗುತ್ತಾನೆ.
ಪೇತ್ರನೇ, ನಾನು ನಿನ್ನನ್ನು ತೊಳೆಯದಿದ್ದರೆ ನಿನಗೆ ನನ್ನ ರಾಜ್ಯದಲ್ಲಿ ಪಾಲಿಲ್ಲ.
ಬೇಡ, ಕರ್ತನೇ, ನೀನು ನನ್ನ ಪಾದ ತೊಳೆಯುವಷ್ಟು ಒಳ್ಳೇಯನು ನಾನಲ್ಲ.


ಯೇಸು ತನ್ನ ಎಲ್ಲಾ ಶಿಷ್ಯರ ಪಾದಗಳನ್ನು ತೊಳೆದ ಮೇಲೆ ತಿರಿಗಿ, ಮೇಜಿನ ಬಳಿ ಕುಳಿತು ಕೊಳ್ಳುತ್ತಾನೆ.
ನಿಮ್ಮ ಕರ್ತನೂ, ಒಡೆಯನೂ ಆಗಿರುವ ನಾನು ನಿಮ್ಮ ಪಾದಗಳನ್ನು ತೊಳೆದಿರುವಾಗ ನೀವು ಸಹ ಒಬ್ಬರಿಗೊಬ್ಬರು ಸೇವೆ ಮಾಡಬೇಕು. ಆಳು ಒಡೆಯನಿಗಿಂತ ದೊಡ್ಡವನೇನಲ್ಲ
ಕೆಲನಿಮಿಷಗಳ ನಂತರ ಯೇಸು ಒಂದು ಚಕಿತ ಗೊಳಿಸುವ ಮಾತನ್ನು ಹೇಳುತ್ತಾನೆ
ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುತ್ತಾನೆ.
ನನಗೆ ದ್ರೋಹವೇ? ಕರ್ತನೇ, ನಾನೋ?
ನನ್ನೊಂದಿಗೆ ಊಟ ಮಾಡುತ್ತಿರುವವನೇ ಎಂದು ಯೇಸು ಪ್ರತ್ಯುತ್ತರ ನೀಡುತ್ತಾನೆ. ಯೂದನು ಮುಂದಕ್ಕೆ ಬಾಗುತ್ತಾನೆ.
ಅದು ನಾನೋ?
ನೀನೆ ಹೇಳಿದ್ದಿ, ಯೂದನೇ, ನೀನು ಮಾಡುವದನ್ನು ಬೇಗನೆ ಮಾಡು.
ಒಮ್ಮೆಲೇ ದ್ರೋಹಿಯು ಮೇಜಿನಿಂದ ಮೇಲೆದ್ದು ಅವಸರವಾಗಿ ಹೊರಡುತ್ತಾನೆ. ಆದರೆ ಇತರ ಶಿಷ್ಯರಿಗೆ ಯಾಕೆ ಎಂದು ಅರ್ಥವಾಗಲಿಲ್ಲ...


ಕರ್ತನ ಭೋಜನ
ಲೂಕ ೨೨:೧೭-೨೦, ಯೋಹಾನ ೧೩:೩೩-೩೮, ೧೪, ಮತ್ತಾ ೨೬:೨೦, ೨೬-೨೯
ದ್ರೋಹಿಯಾದ ಯೂದ ಹೋದ ಮೇಲೆ ಯೇಸು ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರ ಮಾಡಿ ಮುರಿದು ' ಇದು ನನ್ನ ದೇಹ ' ಎಂದು ಹೇಳುತ್ತಾ ಶಿಷ್ಯರಿಗೆ ಕೊಡುತ್ತಾನೆ. ಅವರು ಅದನ್ನು ತಿಂದ ಮೇಲೆ ಅವರಿಗೆ ಬಟ್ಟಲನ್ನು ನೀಡುತ್ತಾನೆ.
ಇದನ್ನು ಕುಡಿಯಿರಿ, ಇದು ನಾನು ನಿಮ್ಮ ಪಾಪಗಳಿಗಾಗಿ ಸುರಿಸಲಿರುವ ನನ್ನ ರಕ್ತ. ನಾನು ಹೋದ ಮೇಲೆ ನನ್ನ ನೆನಪಿಗಾಗಿ ಇದನ್ನು ಮಾಡಿರಿ.
ಹೀಗೆ ಯೇಸು ದೇವರು ಮತ್ತು ಮನುಷ್ಯರ ನಡುವೆ ಒಂದು ಹೊಸ ಒಡಂಬಡಿಕೆಯನ್ನು ಮಾಡುತ್ತಾನೆ. ನಾವು ಯೇಸುವಿನ ಹೆಸರಿನಲ್ಲಿ ರೊಟ್ಟಿ ಮತ್ತು ದ್ರಾಕ್ಷಾ ರಸವನ್ನು ಸೇವಿಸುವಾಗ ದೇವರು ತನ್ನ ಮಗನಾದ ಯೇಸುವಿನ ಮೂಲಕ ನಮ್ಮನ್ನು ಪಾಪದ ದಾಸತ್ವದಿಂದ ಬಿಡಿಸಿದ್ದಾನೆಂದು ಜ್ಞಾಪಕಕ್ಕೆ ಬರುತ್ತದೆ.




ಯೇಸು ತಮ್ಮನ್ನು ಅಗಲುತ್ತಾನೆಂಬ ಯೋಚನೆಯಿಂದ ಶಿಷ್ಯರು ಭಯಗೊಂಡಿದ್ದಾರೆ.




ಹೆದರದಿರಿ, ದೇವರನ್ನು ನಂಬಿರಿ, ನನ್ನನ್ನು ನಂಬಿರಿ. ನೀವು ನನ್ನನ್ನು ಪ್ರೀತಿಸುವದಾದರೆ ನನ್ನ ಆಜ್ಞೆಗಳನ್ನು ಪಾಲಿಸಿರಿ. ಮತ್ತು ನಿಮ್ಮನ್ನು ಆದರಿಸಲು ಪವಿತ್ರಾತ್ಮನನ್ನು ಕಳುಹಿಸುವಂತೆ ನನ್ನ ತಂದೆಯನ್ನು ಕೇಳಿಕೊಳ್ಳುವೆನು. ಆತನು ಸದಾ ನಿಮ್ಮೊಂದಿಗಿರುವನು. ಹೋಗೋಣ ಬನ್ನಿರಿ, ಸಮಯವಾಯಿತು...




ಮೌನವಾಗಿ ಅವರು ಮೇಲಂತಸ್ತಿನ ಕೋಣೆಯಿಂದ ಹೊರಡುತ್ತಾರೆ. ಅವರು ಚಂದ್ರನ ಬೆಳಕಿನಿಂದ ತುಂಬಿದ ಬೀದಿಗಳಲ್ಲಿ ನಡೆಯುತ್ತಾ ಪೂರ್ವ ಬಾಗಿಲಿನಿಂದ ಹಾಯ್ದು ತಗ್ಗಿನ ಪ್ರದೇಶದ ಆಚೆ ಇರುವ ಎಣ್ಣೆ ಮರಗಳ ಗುಡ್ಡದಲ್ಲಿನ ಗೇತ್ಸೆಮನೆ ತೋಟಕ್ಕೆ ಹೋಗುತ್ತಾರೆ.
ಪ್ರವೇಶದ್ವಾರದ ಬಳಿ ಯೇಸು ತನ್ನ ಆಪ್ತ ಶಿಷ್ಯರಾದ ಪೇತ್ರ, ಯಾಕೋಬ ಮತ್ತು ಯೋಹಾನರನ್ನು ತೋಟದೊಳಗೆ ಕರೆದು ಕೊಂಡು ಹೋಗುತ್ತಾ ಉಳಿದ ಎಂಟು ಶಿಷ್ಯರಿಗೆ ಹೊರಗೆ ಕಾಯ್ದುಕೊಳ್ಳುವಂತೆ ಹೇಳುತ್ತಾನೆ.
ಇದು ನನಗೆ ದುಃಖಕರ ರಾತ್ರಿ...ನಾನು ಪ್ರಾರ್ಥಿಸಲು ಹೋಗುತ್ತೇನೆ, ನೀವು ಎಚ್ಚರವಾಗಿದ್ದು ಕಾಯ್ದುಕೊಳ್ಳಿರಿ.
ನನ್ನ ತಂದೆಯೇ, ನಿನ್ನ ಚಿತ್ತವಿದ್ದರೆ ಈ ನೋವನ್ನು ನನ್ನಿಂದ ದೂರಮಾಡು, ಹೇಗೂ ನನ್ನ ಚಿತ್ತದಂತಾಗದೇ ನಿನ್ನ ಚಿತ್ತದಂತೆಯೇ ಆಗಲಿ.
ಯೇಸು ತನ್ನ ಶಿಷ್ಯರ ಬಳಿಗೆ ಹಿಂದಿರುಗಿದಾಗ ಅವರು ನಿದ್ರಿಸುತ್ತಿರುತ್ತಾರೆ. ಮತ್ತೆ ಎರಡು ಸಾರಿ ಅವನು ಪ್ರಾರ್ಥಿಸಲು ಹೋಗುತ್ತಾನೆ. ಪ್ರತಿಸಾರಿಯು ಅವನು ನಿದ್ರಿಸುವದನ್ನು ಕಾಣುತ್ತಾನೆ. ಅವರನ್ನು ಮೂರನೆಯ ಸಾರಿ ಎಬ್ಬಿಸಿದ ಮೇಲೆ...
ಎದ್ದೇಳಿರಿ...ನನ್ನನ್ನು ಹಿಡಿದು ಕೊಡುವವನು ಹತ್ತಿರವಾಗಿದ್ದಾನೆ.


ಯೇಸು ಮಾತನಾಡುತ್ತಿರುವಾಗ ಯೂದನು ಒಂದು
ಗುಂಪನ್ನು ಕರೆದು ಕೊಂಡು ತೋಟದೊಳಗೆ ಬರುತ್ತಾನೆ.
ಅವನ ಒಪ್ಪಂದದ ಪ್ರಕಾರ ತಾನು ಯಾರನ್ನು
ಮುದ್ದಿಸುತ್ತೇನೋ ಅವನೇ ಯೇಸು ಎಂದು
ಸೂಚಿಸುತ್ತಾನೆ.
ವಂದನೆಗಳು,, ಗುರುವೇ!
ಸಿಪಾಯಿಗಳು ಯೇಸುವನ್ನು ಹಿಡುಕೊಂಡಾಗ ಪೇತ್ರನು ತನ್ನ
ಕತ್ತಿಯನ್ನು ಹಿರಿದು ರೋಷದಿಂದ ಒಬ್ಬ ಸಿಪಾಯಿಯ
ಕಿವಿಯನ್ನು ಕತ್ತರಿಸುತ್ತಾನೆ.
ಪೇತ್ರನೇ, ಕತ್ತಿಯನ್ನು ಒಳಗಿಡು. ನನ್ನನ್ನು
ಕಾಪಾಡಲು ದೇವದೂತರ ದಂಡನ್ನು
ಕಳುಹಿಸುವಂತೆ ದೇವರನ್ನು ನಾನು
ಬೇಡಲು ಸಾಧ್ಯವಿಲ್ಲ ವೆಂದು
ಯೋಚಿಸುತ್ತೀಯಾ?
ಯೇಸು ಮೌನವಾಗಿ ಆ ವ್ಯಕ್ತಿಯ ಕಿವಿಯನ್ನು ವಾಸಿಮಾಡುತ್ತಾನೆ.
ಯೇಸು ತನ್ನನ್ನು ಕಾಪಾಡಿಕೊಳ್ಳಲು ಯಾವದೇ
ಪ್ರಯತ್ನ ಮಾಡದಿರುವದನ್ನು ಶಿಷ್ಯರು ನೋಡಿದಾಗ ಅವರು ತಮ್ಮ
ಜೀವದಾಸೆಯಿಂದ ಓಡಿ ಹೋಗುತ್ತಾರೆ.
ಅಧಿಕಾರಿಯೊಬ್ಬನು ಆಜ್ಞೆ ನೀಡಿದಾಗ ಸಿಪಾಯಿಗಳು ಯೇಸುವನ್ನು
ಬಂಧಿಸಿ ತಿರಿಗಿ ಯೆರೂಸಲೇಮಿಗೆ
ಕರೆದೊಯ್ಯುತ್ತಾರೆ. ಆ ಪಟ್ಟಣದಲ್ಲಿ ಕೆಲವು ದಿನಗಳ ಹಿಂದೆಯಷ್ಟೇ
ಆತನು ಬಹು ಜಯೋತ್ಸಾಹದಿಂದ ಸವಾರಿ
ಮಾಡಿದ್ದನು.

## ವಿಚಾರಿಸಲ್ಪಟ್ಟನು - ಮತ್ತು ನಿರಾಕರಿಸಲ್ಪಟ್ಟನು

ಮತ್ತಾಯ ೨೬:೫೭-೭೫, ಯೋಹಾನ ೧೮:೨೮-೩೮, ಲೂಕ ೨೨:೬-೧೨








ಯೇಸು ಆ ಅವಮಾನಗಳನ್ನು ಅನುಭವಿಸುತ್ತಿರುವಾಗ...ಅವನನ್ನು ಗುಪ್ತವಾಗಿ ಹಿಂಬಾಲಿಸಿ ಪಟ್ಟಣಕ್ಕೆ ಬಂದಿದ್ದ ಪೇತ್ರನು ಅರಮನೆಯ ಆವರಣದಲ್ಲಿ ಬೆಂಕಿಯನ್ನು ಕಾಯಿಸಿಕೊಳ್ಳುತ್ತಿದ್ದಾನೆ. ಅವನು ಮಾತಾಡುತ್ತಿರುವಾಗ ಒಬ್ಬ ಸೇವಕಿಯು ಅವನನ್ನು ನೋಡುತ್ತಾಳೆ.
ನಜರೇತಿನ ಯೇಸುವಿನ ಜೊತೆಯವರಲ್ಲಿ ಸೇರಿದವನು.
ನಾನೋ? ನೀನು ಏನು ಹೇಳುತ್ತಿಯೆಂದು ಅರಿಯೆನು.
ಇನ್ನು ಯಾರಾದರೂ ಪ್ರಶ್ನಿಸುತ್ತಾರೇನೋ ಎಂದು ಹೆದರಿ ಪೇತ್ರನು ಹೊರಗೆ ಹೋಗುತ್ತಾನೆ, ಆದರೆ ಅಲ್ಲಿ...
ಇವನು ಯೇಸುವಿನ ಜೊತೆ ಇದ್ದನು.
ಯೇಸು? ನಾನು ಅವನನ್ನು ಅರಿಯೆನು
ಸುಮಾರು ಒಂದು ತಾಸಿನ ನಂತರ ಕೆಲವು ಪುರುಷರು ಪೇತ್ರನ ಹತ್ತಿರ ಬರುತ್ತಾರೆ.
ಸಿಪಾಯಿಗಳು ಯೇಸುವನ್ನು ಬಂಧಿಸಿದಾಗ ನಿನ್ನನ್ನು ತೋಟದಲ್ಲಿ ನೋಡಲಿಲ್ಲವೆ?
ಯೇಸುವಿನಂತೆ ನೀನೂ ಗಲಿಲಾಯದವನೆಂದು ನೀನು ಮಾತನಾಡುವ ರೀತಿಯಲ್ಲಿಯೇ ನಾನು ಹೇಳಬಲ್ಲೆ.

ಮೂರನೆಯ ಸಾರಿ ಯೇಸುವನ್ನು ಅರಿಯೆನೆಂದು ಪೇತ್ರನು ಹೇಳುತ್ತಾನೆ. ಆಗ ಕೋಳಿಯು ಕೂಗುತ್ತದೆ! ಚಕಿತನಾದ ಪೇತ್ರನು ತಲೆಯನ್ನು ಎತ್ತಿ ಆವರಣದ ಹೊರಗೆ ಕರೆದೊಯ್ಯಲ್ಪಡುತ್ತಿದ್ದ ಯೇಸುವಿನ ಕಣ್ಣುಗಳನ್ನು ನೇರವಾಗಿ ದೃಷ್ಟಿಸುತ್ತಾನೆ. ಶುಕ್ರವಾರದ ಮುಂಜಾನೆಯ ವೇಳೆಯಲ್ಲಿ ಯೆಹೂದ್ಯ ಉಚ್ಚ ನ್ಯಾಯಾಲಯದ ಸದಸ್ಯರು ಯೇಸುವಿಗೆ



ಪೇತ್ರನು ನಾಚಿಕೆಯಿಂದ ಬಹಳವಾಗಿ ಗೋಳಾಡುತ್ತಾ ಹೊರಗೆ ಓಡುತ್ತಾನೆ.




ಮರಣದಂಡನೆ ನೀಡಲಾಗದೆ ಆತನನ್ನು ರೋಮ ರಾಜ್ಯಪಾಲನಾದ ಪಿಲಾತನ ಬಳಿಗೆ ಕರೆದೊಯ್ಯುತ್ತಾರೆ. ಅವರು ಚಾಣಾಕ್ಷದಿಂದ ಅವನ ಮೇಲೆ ಆರೋಪ ಹೊರಿಸುತ್ತಾರೆ, ಯೆಹೂದ್ಯಧರ್ಮಶಾಸ್ತ್ರವನ್ನು ಮುರಿದನೆಂಬದಾಗಿ ಅಲ್ಲ. ಆದರೆ ರೋಮವಿರುದ್ಧ ದ್ರೋಹ ಮಾಡಿದ್ದಾನೆಂದು ಆರೋಪಿಸುತ್ತಾರೆ. ಪಿಲಾತನು ಯೇಸುವನ್ನು ಏಕಾಂತವಾಗಿ ಪ್ರಶ್ನಿಸಿ ನಂತರ ಹೊರಗಡೆ ನೆರೆದಿದ್ದ ಯಾಜಕರು ಹಾಗು ಜನರಿಗೆ ಆತನನ್ನು ಹಿಂದಿರುಗಿಸುತ್ತಾನೆ.






ಪಿಲಾತನು ಗೊಂದಲಕ್ಕೊಳಗಾದನು. ಯೇಸು ದ್ರೋಹಿಯೆಂಬದನ್ನು ಅವನಿಗೆ ನಂಬಲಾಗಲಿಲ್ಲ. ಪಿಲಾತನು ತನ್ನಲ್ಲೇ 'ನಾನು ಇವನನ್ನು ಬಿಟ್ಟು ಬಿಟ್ಟರೆ ಯೆಹೂದ್ಯರು ಸಮಸ್ಯೆ ಮಾಡುವರು. ರೋಮ ಚಕ್ರಾಧಿಪತಿಯು ನನ್ನನ್ನು ಹೊಣೆ ಮಾಡುತ್ತಾರೆ ' ಎಂದು ತರ್ಕಿಸಿಕೊಳ್ಳುತ್ತಾನೆ. ಕೊನೆಗೂ ತನ್ನ ಮನಸಾಕ್ಷಿಯನ್ನು ಹಗುರವಾಗಿಸಿ ತನ್ನನ್ನು ಕಾಪಾಡಿ ಕೊಳ್ಳಲು ಒಂದು ಮಾರ್ಗವನ್ನು ಯೋಚಿಸುತ್ತಾನೆ.




ಮರಣ ದಂಡನೆ.
ಯೋಹಾನ ೧೮:೨೮-೧೯:೧೬, ಮತ್ತಾಯ ೨೭:೩-೧೦
ಯೆಹೂದ್ಯ ನಾಯಕರು ರೋಮ ವಿರುದ್ಧ ರಾಜದ್ರೋಹ ಮಾಡಿದ ಆರೋಪವನ್ನು ಯೇಸುವಿನ ಮೇಲೆ ಹೊರಿಸಿದ್ದಾರೆ. ರೋಮದ ರಾಜ್ಯಪಾಲನಾದ ಪಿಲಾತನು ಯೇಸು ಅಪರಾಧಿಯೆಂದು ಕಾಣಲಿಲ್ಲ. ಆದರೆ ಯೆಹೂದ್ಯರು ಸಮಸ್ಯೆಯನ್ನು ಉಂಟು ಮಾಡಿ ರೋಮ್ ಚಕ್ರವರ್ತಿಯವರೆಗೂ ವಿಷಯ ಮುಟ್ಟಬಹುದೇನೋ ಎಂದು ಯೆಹೂದ್ಯರಿಗೆ ಕೋಪವನ್ನು ಉಂಟು ಮಾಡಲು ಹೆದರಿದನು. ಯೆರೂಸಲೇಮಿನಲ್ಲಿ ಪಸ್ಕ ಹಬ್ಬಕ್ಕೆ ಬಂದಿದ್ದ ಜನಸಮೂಹವನ್ನು ದೃಷ್ಟಿಸುತ್ತಿದ್ದಂತೆ ಅವನಿಗೊಂದು ಉಪಾಯ ಹೊಳೆಯುತ್ತದೆ. ಯೇಸು ಸಾಯಬೇಕೋ ಎಂಬುದನ್ನು ಜನರೇ ತೀರ್ಮಾನಿಸಲಿ. ಆದರೆ ಯಾಜಕರು ಜನರ ಗುಂಪನ್ನು ಯೇಸುವಿಗೆ ವಿರುದ್ಧ ಎಬ್ಬಿಸುತ್ತಿದ್ದಾರೆಂದು ಅವನಿಗೆ ತಿಳಿದಿರಲಿಲ್ಲ.
ಪಸ್ಕ ಹಬ್ಬದ ವೇಳೆ ಒಬ್ಬ ಕೈದಿಯನ್ನು ಬಿಡುಗಡೆಗೊಳಿಸುವ ಪದ್ಧತಿ ನಿಮ್ಮಲ್ಲಿ ಉಂಟಲ್ಲಾ. ನಾನು ಕ್ರಿಸ್ತನೆನಿಸಿಕೊಳ್ಳುವ ಯೇಸುವನ್ನು ಬಿಡುಗಡೆ ಮಾಡಲೋ ಅಥವಾ ಕೊಲೆಗಾರನಾದ ಬರಬ್ಬನನ್ನೋ?
ನಮಗೆ ಬರಬ್ಬನನ್ನು ಬಿಡಿರಿ


ಪಿಲಾತನು ವಿಸ್ಮಯಗೊಳ್ಳತ್ತಾನೆ. ಅವನು ಯೇಸುವನ್ನು ಕಾಪಾಡಲು ಇನ್ನೊಂದು ಪ್ರಯತ್ನಮಾಡುತ್ತಾನೆ.
ಅವನನ್ನುದಂಡಿಸಿರಿ
ಬಂಧಿಯು ದಂಡಿಸಲ್ಪಟ್ಟರೆ ಜನರಿಗೆ ತೃಪ್ತಿಯಾಗಬಹುದೇನೊ
ಹೀಗೆ ಯೇಸುವನ್ನು ಕೊರಡೆಗಳಿಂದ ಹೊಡೆಯುತ್ತಾರೆ. ನಂತರ ಸಿಪಾಯಿಗಳು ಮುಳ್ಳಿನ ಕಿರೀಟವನ್ನು ಮಾಡಿ ಅವನ ತಲೆಯ ಮೇಲಿಡುತ್ತಾರೆ.
ಯೆಹೂದ್ಯರ ಅರಸನೇ, ನಮಸ್ಕಾರ
ಕ್ರೂರವಾಗಿ ಹೊಡೆಯಲ್ಪಟ್ಟ ಯೇಸುವನ್ನು ನೋಡಿದಾಗ ಜನರಲ್ಲಿ ಕರುಣೆ ಹುಟ್ಟುತ್ತದೆಂಬ ನಿರೀಕ್ಷೆಯಲ್ಲಿ ಪಿಲಾತನು ಯೇಸುವನ್ನು ಜನರ ಸಮೂಹ ಮುಂದೆ ಕರೆತರುತ್ತಾನೆ.
ಇಗೋ, ಇವನನ್ನು ನೋಡಿರಿ.
ಅವನನ್ನು ಶಿಲುಬೆಗೇರಿಸಿ
ಶಿಲುಬೆಗೆ ಹಾಕಿರಿ




ಇದು ಪಿಲಾತನ ಸೇಡು, ಯೆಹೂದ್ಯ ನಾಯಕರು ತಾವು ಮರಣಕ್ಕೆ ಒಪ್ಪಿಸಿಕೊಟ್ಟ ಯೇಸುವಿನ ಶಿಲುಬೆಯ ಮೇಲೆ ಈ ಪದಗಳನ್ನು ನೋಡಿ ಕೋಪದಿಂದ ಕುದಿಯುವರೆಂದು ಅವನಿಗೆ ಗೊತ್ತದೆ.




ನಾನು ಪಾಪಮಾಡಿದ್ದೇನೆ...ನಾನು ನಿರಾಪರಾಧಿಯನ್ನು ಹಿಡಿದು ಕೊಟ್ಟಿದ್ದೇನೆ.
ಅದರಿಂದ ನಮಗೆ ಏನಾಗಬೇಕು?
ತೆಗೆದುಕೊಳ್ಳಿರಿ....ನಿಮ್ಮ ಹಣ ನನಗೆ ಬೇಕಾಗಿಲ್ಲ.
ಹೊರಲಾರದ ಅಪರಾಧ ಭಾವದಿಂದ ಯೂದನು ಹೋಗಿ ಊರ್ಲು ಹಾಕಿಕೊಳ್ಳುತ್ತಾನೆ.
ಆದರೆ ಹಣ ಹಿಂದಿರುಗಿಕೊಟ್ಟದ್ದು ತಾನು ಹಿಡಿದುಕೊಟ್ಟವನನ್ನು ರಕ್ಷಿಸಲಾರದು. ಯೇಸು ಈಗ ರೋಮ ಸೈನಿಕರ ಕೈಗಳಲ್ಲಿದ್ದಾನೆ...ಅವರು ಅವನ ಮೇಲೆ ಭಾರವಾದ ಶಿಲುಬೆಯನ್ನು ಹೊರಿಸಿ ಬೀದಿಗಳಲ್ಲಿ ನಡೆಸಿಕೊಂಡು ಕಲ್ವಾರಿ ಗುಡ್ಡಕ್ಕೆ ಕರೆದೊಯ್ಯುತ್ತಾರೆ.

ರಾಜನು ಶಿಲುಬೆಗೆ ಹಾಕಲ್ಪಟ್ಟನು.

ಲೂಕ ೨೩:೨೬-೪೩, ಯೋಹಾನ ೧೯:೨೫-೨೭

ಪ್ಯಾಲೆಸ್ತೀನಿನ ಎಲ್ಲಾ ಭಾಗಗಳಿಂದ ಪಸ್ಕ ಹಬ್ಬದ ಆಚರಣೆಗಾಗಿ ಬಂದಿದ್ದ ಸಂತೋಷ, ಉತ್ಸಾಹ ಭರಿತ ಜನರ ಗುಂಪು ಯೆರೂಸಲೇಮಿನಲ್ಲಿ ನೆರೆಯುತ್ತಿದ್ದಾರೆ. ಆದರೆ ಶುಕ್ರವಾರ ಬೆಳಿಗ್ಗೆ ಆಘಾತಕಾರಿ ವಾರ್ತೆಯು ತಣ್ಣನೆಯ ಗಾಳಿಯಂತೆ ಪಟ್ಟಣದಲೆಲ್ಲಾ ಹರಡುತ್ತದೆ. ನಜರೇತಿನ ಯೇಸು ರಾಜ ದ್ರೋಹಕ್ಕಾಗಿ ಶಿಲುಬೆಗೇರಿಸಲ್ಪಡುತ್ತಾನೆ ಕಲ್ವಾರಿ ಗುಡ್ಡಕ್ಕೆ ಸಾಗುವ ಬೀದಿಗಳು ಬಹು ಬೇಗನೆ ಅನೇಕ ರೀತಿಯ ಜನರು ಹಾಗು ಯೇಸುವಿನ ಮರಣ ಬಯಸುವ ಯಾಜಕರು ಮತ್ತು ಪರಿಸಾಯರಿಂದ ತುಂಬಿ ಹೋಯಿತು, ಪಾಪಗಳನ್ನು ಕ್ಷಮಿಸಿ ರೋಗಿಗಳನ್ನು ವಾಸಿಮಾಡಿದ ವ್ಯಕ್ತಿಗಾಗಿ ಸ್ತ್ರೀಯರು ಗೋಳಾಡುತ್ತಿದ್ದಾರೆ, ಹಾಗು ದಂಡನೆಗೆ ಒಳಗಾದ ವ್ಯಕ್ತಿಯು ಶಿಲುಬೆ ಹೊರುವದನ್ನು ಮಾತ್ರವೇ ಕುತೂಹಲದಿಂದ ವಿಕ್ಷೀಸುತ್ತಿದ್ದಾರೆ.



ಮಾರ್ಗ ಮಧ್ಯದಲ್ಲಿ ಯೇಸು ಭಾರದ ಶಿಲುಬೆಯ ಕೆಳಗೆ ಬೀಳುತ್ತಾನೆ. ಹೊಲಸು ಸಂಚಲನೆಯನ್ನು ಮುಂದುವರೆಸಲು ರೋಮ ಅಧಿಕಾರಿಯು ಪಕ್ಕದಲ್ಲಿ ನಿಂತಿದ್ದ ಕುರೇನ್ಯದ ಸಿಮೋನನನ್ನು ಹಿಡಿಯುತ್ತಾರೆ.




ಯೇಸು ಮತ್ತು ಆತನೊಟ್ಟಿಗೆ ಇಬ್ಬರು ಕಳ್ಳರು ಒಂಬತ್ತು ಘಂಟೆಗೆ ಶಿಲುಬೆಗೆ ಹಾಕಲ್ಪಡುತ್ತಾರೆ. ದೇವ ಕುಮಾರನನ್ನು ಶಿಲುಬೆಗೆ ಮೊಳೆಗಳಿಂದ ಹೊಡೆಯುತ್ತಾರೆ. ಆವನ ತಲೆಯ ಮೇಲ್ಭಾಗದಲ್ಲಿ 'ನಜರೇತಿನ ಯೇಸು, ಯೆಹೂದ್ಯರ ಅರಸನು' ಎಂಬ ಬರಹವನ್ನು ಅಂಟಿಸುತ್ತಾರೆ.




ಆದರೆ ರೋಮ ಸೈನಿಕರಿಗಾದರೋ ಆತನು ಕಾನೂನಿನ ಪ್ರಕಾರ ಮರಣ ದಂಡನೆಗೊಳಾಗದ ಇನ್ನೊಬ್ಬ ಅಪರಾಧಿಯಂತಷ್ಟೇ.
ಇದು ಉತ್ತಮವಾಗಿದೆ, ಹರಿಯುವದು ಬೇಡ, ಚೀಟು ಹಾಕಿಕೊಳ್ಳೋಣ,
ಈ ಬಟ್ಟೆಯು ಚೆನ್ನಾಗಿಯೇ ಇದೆ, ಇದನ್ನು ಹೇಗೆ ಹಂಚಿಕೊಳ್ಳೋಣ?
ಯೇಸುವಿನ ಸ್ನೇಹಿತರು ವಿಕ್ಷಿಸುತ್ತಾ ನಿಂತಿರುವಾಗ ಕುತೂಹಲದ ಜನಸಮೂಹ ಹೊರಡುತ್ತಾರೆ. ಆತನ ಮರಣದ ಬಗ್ಗೆ ಕುತಂತ್ರ ಮಾಡಿದವರು ಅವನನ್ನು ಪರಿಹಾಸ್ಯ ಮಾಡುತ್ತಾರೆ.
ನೀನು ಇಸ್ರಾಯೇಲರ ರಾಜನಾಗಿದ್ದರೆ ಶಿಲುಬೆಯಿಂದ ಇಳಿದು ಬಾ. ಆಗ ನಿನ್ನನ್ನು ನಂಬುತ್ತೇವೆ.
ನೀನು ಕ್ರಿಸ್ತನಾಗಿದ್ದರೆ ನಿನ್ನನ್ನು, ನಮ್ಮನ್ನು ರಕ್ಷಿಸು.




ಈಗ ಮದ್ಯಾಹ್ನವಾಗಿದೆ. ವಿಚಿತ್ರವಾಗಿ ಮೂರು ತಾಸುಗಳ ವರೆಗೂ ಭೂಮಿಯ ಮೇಲೆಲ್ಲಾ ಕತ್ತಲಾಗುತ್ತದೆ. ಆಗ ಯೇಸು ಗಟ್ಟಿಯಾಗಿ ದೇವರನ್ನು ಕೂಗುತ್ತಾನೆ.




ಮುದ್ರೆ ಹಾಕಲ್ಪಟ್ಟ ಸಮಾಧಿ.
ಮಾರ್ಕ ೧೫:೩೮,೩೯, ಲೂಕ ೨೩:೪೮-೧೯,
ಯೋಹಾನ ೧೯:೩೮-೪೨ ಮತ್ತಾಯ ೨೭:೬೨-೬೬.
ಶುಕ್ರವಾರ ಬೆಳಿಗ್ಗೆ ಸುಮಾರು ೯ ಘಂಟೆಯ ಹೊತ್ತಿಗೆ ನಜರೇತಿನ ಯೇಸು ಯೆರೂಸಲೇಮ ಗೋಡೆಗಳ ಹೊರಗಡೆ ಶಿಲುಬೆಗೇರಿಸಲ್ಪಟ್ಟಿದ್ದಾನೆ. ಮದ್ಯಾಹ್ನ ಮೂ ತಾಸುಗಳ ತನಕ ಭೂಮಿಯ ಮೇಲೆಲ್ಲಾ ಕತ್ತಲೆಯು ಆವರಿಸುತ್ತದೆ. ಆಗ, ತಕ್ಷಣವೇ ದೊಡ್ಡ ಭೂಕಂಪವುಂಟಾಗುತ್ತದೆ. ಮತ್ತು ಯೆರೂಸಲೇಮಿನಲ್ಲಿ....
ದೇವಾಲಯದ! ಅತಿಪರಿಶುದ್ಧ ಸ್ಥಳದ ಮುಂದಿನ ಪರದೆಯು ಇಬ್ಭಾಗವಾಗುತ್ತದೆ! ಅದರ ಅರ್ಥವೇನು?
ಉತ್ತರವೇನೆಂದರೆ: ಕಲ್ವಾರಿ ಗುಡ್ಡದ ಮೇಲೆ ದೇವಕುಮಾರನಾದ ಯೇಸು ಲೋಕದ ಪಾಪಪ್ರಾಯಶ್ಚಿತ್ತಕ್ಕಾಗಿ ತನ್ನ ಪ್ರಾಣ ನೀಡಿದ್ದಾನೆ. ದೇವಾಲಯದಲ್ಲಿನ ಪರದೆಯು ಇನ್ನೆಂದಿಗೂ ಮಾನವನನ್ನು ದೇವರ ಪ್ರಸನ್ನತೆಯಿಂದ ಬೇರ್ಪಡಿಸಲಾರದು, ಯಾಕೆಂದರೆ ಮಗನಾದ ಯೇಸು ತಂದೆಯಾದ ದೇವರ ಬಳಿಗೆ ಹೋಗುವ ಮಾರ್ಗವನ್ನು ತೆರೆದಿದ್ದಾನೆ.


ಊರು ಹೊರಗಡೆ ಯೇಸುವಿನ ಶಿಲುಬೆಗೇರಿಸುವಿಕೆಯನ್ನು ಮಾರ್ಗದರ್ಶಿಸಿದ ರೋಮ ಅಧಿಕಾರಿಯ ನಡೆದ ಸಂಗತಿಗಳನ್ನು ನೋಡಿ ಭಯಗೊಳ್ಳುತ್ತಾನೆ. ಆತನು ಭಯಭಕ್ತಿಯಿಂದ ತನ್ನ ವೈರಿಗಳನ್ನು ಕ್ಷಮಿಸಿದ ಯೇಸುವನ್ನು ತಲೆಯೆತ್ತಿ ನೋಡುತ್ತಾನೆ.
ಇವನು ನಿಜವಾಗಿಯೂ ದೇವರ ಮಗನೇ ಹೌದು!
ಜನರು ಸಹ ದಂಡನೆಯ ಕಾರ್ಯದಿಂದ ಕದಲಲ್ಪಟ್ಟು ಪಟ್ಟಣಕ್ಕೆ ತಿರಿಗಿ ಹೋಗುತ್ತಾ..
ನಮ್ಮನ್ನು ರೋಮಾಯರಿಂದ ಬಿಡಿಸುವವನು ಇವನೇ ಎಂದು ನಿರೀಕ್ಷಿಸಿದ್ದೇನು.
ಯೆರೂಸಲೇಮಿನಲ್ಲಿ ಯೆಹೂದ್ಯ ನ್ಯಾಯ ಸಭೆಯ ಸದಸ್ಯನು ಹಾಗು ಯೇಸುವಿನ ರಹಸ್ಯ ಹಿಂಬಾಲಕನು ಆದ ಅರಿಮತ್ತಾಯದ ಯೋಸೇಫನು ಧೈರ್ಯದಿಂದ ಪಿಲಾತನ ಹತ್ತಿರ ಹೋಗುತ್ತಾನೆ.
ನಾವು ಸಬ್ಬತ್ತಿಗೆ ಮುಂಚೆಯೇ ಹೂಣಿಡುವದಕ್ಕಾಗಿ ಯೇಸುವಿನ ದೇಹವನ್ನು ತೆಗೆದು ಕೊಳ್ಳ ಬಹುದೋ?
ಖಂಡಿತವಾಗಿ...ನನ್ನ ಜವಾಬ್ದಾರಿಯುತ ಅಧಿಕಾರಿಗಳಿಗೆ ಅಪ್ಪಣೆ ಕೊಡುತ್ತೇನೆ.


ಯೋಸೇಫನು ಭಯಭಕ್ತಿಯಿಂದ ಯೇಸುವಿನ ದೇಹವನ್ನು ಶಿಲುಬೆಯಿಂದ ಇಳಿಸಿಕೊಳ್ಳುತ್ತಾನೆ. ನಂತರ ಅವನು ತನ್ನ ಸ್ನೇಹಿತನಾದ ನಿಕೊದೇಮನೊಂದಿಗೆ ಸೇರಿ ಬಿಳೀ ನಾರುಮಡಿಯಿಂದ ದೇಹವನ್ನು ಸುತ್ತಿ ಯೋಸೇಫನ ತೋಟದಲ್ಲಿದ್ದ ಸಮಾಧಿಯಲ್ಲಿ ಇಡುತ್ತಾನೆ.


ಮರುದಿನ ಬೆಳಿಗ್ಗೆ ಯಾಜಕರು ಹಾಗು ಪರಿಸಾಯರು ಸಹ ಪಿಲಾತನ ಹತ್ತಿರ ಹೋಗುತ್ತಾರೆ.
ಯೇಸು ತಾನು ಮೂರನೆಯ ದಿನದಲ್ಲಿ ತಿರಿಗಿ ಎದ್ದು ಬರುವೆನೆಂದು ಹೇಳಿದ್ದು ನಮಗೆ ನೆನಪಿದೆ. ಆತನ ಶಿಷ್ಯರು ದೇಹವನ್ನು ಕದ್ದು ಯೇಸು ಜೀವಂತವಾಗಿ ಎದ್ದಿದ್ದಾನೆಂದು ವದಂತಿ ಹಬ್ಬಿಸದ ಹಾಗೆ ಸಿಪಾಯಿಗಳನ್ನು ಕಾವಲಿಗೆ ಕಳುಹಿಸು.
ನಿಮಗೆ ಬೇಕಾದ ಸಿಪಾಯಿಗಳನ್ನು ಆರಿಸಿಕೊಂಡು ಮೂರನೆಯ ದಿನದ ತನಕ ಕಾವಲಿರಿಸಿರಿ


ಹೀಗೆ ಸಮಾದಿಗೆ ಮುದ್ರೆ ಹಾಕಲಾಯಿತು ಮತ್ತು ರೋಮ ಸಿಪಾಯಿಗಳನ್ನು ಕಾವಲಿಗೆ ಇಡಲಾಯಿತು.
ದೇವಕುಮಾರನೆಂದುಕೊಂಡ ನೋಡಲ್ಲಿ..ತನ್ನನ್ನು ಇವನ ಕಥೆ ಮುಗಿಯಿತು.

ಕರ್ತನು ಎದ್ದಿದ್ದಾನೆ.
ಮಾರ್ಕ ೧೬:೧-೬, ಯೋಹಾನ ೨೦:೨-೧೮,
ಮತ್ತಾಯ ೨೮:೧೧-೧೫, ಲೂಕ ೨೪:೧೩-೩೨






ಕ್ಷಣದಲ್ಲಿ ಮರಿಯಳ ವಾರ್ತೆಯನ್ನು ಕೇಳಿ ಆಘಾತಗೊಂಡ ಪೇತ್ರ ಯೋಹಾನರು ಆಕೆಗಿಂತ ಮುಂಚೆ ಓಡಿಹೋಗುತ್ತಾರೆ. ಅವರು ಸಮಾಧಿಯನ್ನು ತಲುಪಿದಾಗ..




ಮರಿಯಳು ತೋಟವನ್ನು ತಲುಪುವದರೊಳಗೆ ಇತರರು ಹೊರಟು ಹೋಗಿದ್ದಾರೆ. ಆಕೆಯು ನೋವಿನಲ್ಲಿ ತನ್ನನ್ನು ಪ್ರಶ್ನಿಸಿದವನನ್ನು ಅವಳು ಗುರುತಿಸುವದಿಲ್ಲಾ.




ಮೃದುವಾಗಿ ಯೇಸು 'ಮರಿಯಳೇ' ಎನ್ನುತ್ತಾನೆ. ಅವಳು ತಿರಿಗಿ ಜೀವಿತವಾದ ತನ್ನ ಕರ್ತನನ್ನು ನೋಡುತ್ತಾಳೆ.
ಪ್ರಭುವೇ
ತೋಟದಲ್ಲಿ ನಡೆದ ವಿಷಯದಲ್ಲಿ ಯೇಸುವಿನ ಸ್ನೇಹಿತರು ಮಾತ್ರವೇ ಆಶ್ಚರ್ಯಗೊಳ್ಳಲಿಲ್ಲ, ಯೆರೂಸಲೇಮಿನಲ್ಲಿ ರೋಮ ಸಿಪಾಯಿಗಳೂ ನಡೆದದ್ದನ್ನು ಯಾಜಕರು ಹಾಗು ಪರಿಸಾಯರಿಗೆ ತಿಳಿಸುತ್ತಾರೆ. ಆಗ ಅವರು ಸತ್ಯವು ಗೊತ್ತಾದರೆ ಏನಾಗುವದೆಂದು ಹೆದರಿ ತಕ್ಷಣವೇ ಕಾರ್ಯಶೀಲರಾಗುತ್ತಾರೆ.
ಇಗೋ, ಈ ಹಣ ತೆಗೆದುಕೊಳ್ಳಿರಿ. ಯೇಸುವಿನ ಶಿಷ್ಯರು ಆತನ ದೇಹವನ್ನು ಕದ್ದರೆಂದು ಜನರಿಗೆ ಹೇಳಿರಿ.
ಸಿಪಾಯಿಗಳು ಸುಳ್ಳನ್ನು ಹರಡಿಸುತ್ತಿರುವಾಗ ಎಮ್ಮಾಹುಗೆ ಹೋಗುವ ಮಾರ್ಗದಲ್ಲಿ ಯೇಸು ತನ್ನ ಶಿಷ್ಯರಲ್ಲಿ ಇಬ್ಬರ ಜೊತೆ ಸೇರುತ್ತಾನೆ. ಅವರು ಆತನೊಂದಿಗೆ ಮಾತನಾಡುತ್ತಾರೆ. ಆದರೆ ಅವನಾರೆಂದು ತಿಳಿಯುವದಿಲ
ಆ ಸಂಜೆ ಅವರು ಎಮ್ಮಾಹುವಿನಲ್ಲಿ ಭೋಜನ ಮಾಡುತ್ತಿರುವಾಗ ಯೇಸು ರೊಟ್ಟಿಗಾಗಿ ಸ್ತೋತ್ರಮಾಡಿ..ಅವರ ಕೈಗೆ ಕೊಟ್ಟಾಗ ತಕ್ಷಣವೇ ಅವರು ಅವನನ್ನು ಗುರುತಿಸುತ್ತಾರೆ.
ಮತ್ತು ಅಷ್ಟೇ ಶೀಘ್ರವಾಗಿ ಆತನು ಅವರಿಗೆ ಮರೆಯಾಗುತ್ತಾನೆ.


ಭದ್ರವಾದ ಬಾಗಿಲಿನ ಹಿಂದೆ
ಲೂಕ ೨೪:೩೩-೪೩, ಯೋಹಾನ ೨೦;೧೯-೨೧:೭. ಇದು ಭಾನುವಾರದ ಮದ್ಯರಾತ್ರಿ. ಯೆರೂಸಲೇಮಿನಲೆಲ್ಲಾ ಜನರು ರೋಮ ಸಿಪಾಯಿಗಳ ವಿಚಿತ್ರ ವರದಿಯ ವಿಷಯದಲ್ಲಿ ಮಾತನಾಡಿ ಕೊಳ್ಳುತ್ತಿದ್ದಾರೆ.
ಯೇಸು ಜೀವಿತನಾಗಿ ಎದ್ದನೆಂದು ನಾವು ನಂಬುವಂತೆ ಮಾಡಲು ಯೇಸುವಿನ ಶಿಷ್ಯರು ಆತನ ದೇಹವನ್ನು ಕದ್ದಿದ್ದಾರೆಂದು ಹೇಳುತ್ತಾರೆ.
ಸಮಾಧಿ ದೋಚಲ್ಪಡುವಾಗ ಆ ರೋಮಾಯದ ಧೀರ ಸಿಪಾಯಿಗಳು ಏನು ಮಾಡುತ್ತಿದ್ದರೆಂದು ಯೋಚಿಸುತ್ತೇನೆ. ಮತ್ತು ಶಿಷ್ಯರು ಏನು ಹೇಳುತ್ತಾರೆ?


ಆದರೆ ಯೇಸುವಿನ ಶಿಷ್ಯರಿಗೆ ಸಹ ಸಿಪಾಯಿಗಳ ವರದಿಯು ಕಿವಿಗೆ ಬಿತ್ತು. ಆದ್ದರಿಂದ ತಾವು ಬಂಧಿಸಲ್ಪಡುತ್ತೇವೆಂದು ಹೆದರಿ ಮೇಲಂತಸ್ತಿನ ಮನೆಯಲ್ಲಿ ಸೇರಿ ಬಾಗಿಲನ್ನು ಭದ್ರಪಡಿಸುತ್ತಾರೆ. ಅಲ್ಲಿ ತೋಮನು ಮಾತ್ರ ಇರಲಿಲ್ಲ. ಇಬ್ಬರು ಸ್ನೇಹಿತರು ಬಂದು ಅವರನ್ನು ಕಾಣುತ್ತಾರೆ.
ಯೇಸು ಜೀವಂತನಾಗಿದ್ದಾನೆ! ನಾವು ಎಮ್ಮಾಹುವಿಗೆ ಹೊರಟಾಗ ಒಬ್ಬ ಅಪರಿಚಿತನು ನಮ್ಮನ್ನು ಕೂಡಿಕೊಂಡನು. ನಮ್ಮೊಂದಿಗೆ ರಾತ್ರಿ ಊಟ ಮಾಡುವಂತೆ ಅವನಿಗೆ ಹೇಳಿದೆವು. ಅವನು ರೊಟ್ಟಿಯನ್ನು ದೇವ ಸ್ತೋತ್ರ ಮಾಡಿ ನಮಗೆ ಕೊಟ್ಟಾಗ ಆ ಅಪರಿಚಿತನು ಯೇಸುವೆಯೆಂದು ತಕ್ಷಣವೇ ತಿಳಿಯಿತು. ನಂತರ ಅವನು ಕಣ್ಮರೆಯಾದನು.


ಹೌದು, ಮಗ್ದಲದ ಮರಿಯಳು ಹಾಗು ಪೇತ್ರನು ಸಹ ಆತನನ್ನು ನೋಡಿದ್ದಾರೆ.
ಹೌದು, ಆತನಷ್ಟು ಅಲ್ಲಗಳೆದ ನನ್ನ ಹತ್ತಿರವೂ ಬಂದನು
ತಕ್ಷಣವೇ, ಯೇಸು ಆ ಕೋಣೆಯಲ್ಲಿ ಪ್ರತ್ಯಕ್ಷನಾಗುತ್ತಾನೆ, ಆದರೆ ಶಿಷ್ಯರು ಆತನನ್ನು ಭೂತವೆಂದು ತಿಳಿಯುತ್ತಾರೆ.
ಯಾಕ ಭಯ ಪಡುತ್ತೀರಿ? ನಾನೇ...ನನ್ನ ಕೈ ಹಾಗು ಪಾದಗಳನ್ನು ನೋಡಿರಿ.
ಕರ್ತನೇ, ನೀನೇಯೋ?
ನನಗೆ ಊಟ ಕೊಡಿರಿ, ಅದನ್ನು ತಿಂದು ನಾನು ನಿಜ ಎಂಬುದನ್ನು ತೋರಿಸುವೆನು.
ಸಾಧ್ಯವಾದಷ್ಟು ಬೇಗನೇ ಶಿಷ್ಯರು ತೋಮನನ್ನು ಹುಡುಕಲು ಓಡುತ್ತಾರೆ.
ಯೇಸು ಎದ್ದಿದ್ದಾನೆ! ನಾವು ನೋಡಿದ್ದೇವೆ
ಆತನ ಕೈಗಳಲ್ಲಿ ಮೊಳೆಯ ಗುರುತನ್ನು ನೋಡುವ ತನಕ ಆತನು ಯೇಸುವೆಂದು ನಾನೆಂಬುವದಿಲ್ಲ.


ಒಂದು ವಾರದ ನಂತರ ಶಿಷ್ಯರು ಪುನ: ಭದ್ರವಾದ
ಕೋಣೆಯಲ್ಲಿರುವಾಗ ತೋಮನೂ ಇದ್ದನು.
ತಿರಿಗೊಮ್ಮೆ ಯೇಸು ಅವರಿಗೆ ಕಾಣಿಸಿಕೊಳ್ಳುತ್ತಾನೆ.
ತೋಮನೇ, ನನ್ನ ಕೈ ಹಾಗು ಪಕ್ಕೆಯನ್ನು ಸ್ಪರ್ಶಿಸು.


ನನ್ನ ಕರ್ತನೇ, ನನ್ನ ದೇವರೇ!
ತೋಮನೇ, ನೀನು ನೋಡಿದ್ದರಿಂದ ನಂಬಿದಿ, ಆದರೆ ನೋಡದೆ ನಂಬುವವರು ಧನ್ಯರು.
ತಿರಿಗಿ ಯೇಸು ಅವರ ಕಣ್ಣಿಗೆ ಮರೆಯಾಗುತ್ತಾನೆ.


ಯೇಸು ತಮಗೆ ಕೊಟ್ಟ ಆಜ್ಞೆಗೆ ವಿಧೇಯರಾಗಿ ಶಿಷ್ಯರು
ಗಲಿಲಾಯದ ಉತ್ತರಕ್ಕೆ ಹೊರಡುತ್ತಾರೆ. ಒಂದು ಸಂಜೆ
ಅವರು ಮೀನು ಹಿಡಿಯಲು ಹೋಗುತ್ತಾರೆ. ಅವರು
ರಾತ್ರಿಯೆಲ್ಲಾ ಪ್ರಯಾಸಪಟ್ಟರೂ ಒಂದು ಮೀನು ಸಿಕ್ಕುವದಿಲ್ಲ.
ನಸುಕಿನ ಜಾವ ದಡದಲ್ಲಿ ಯಾರೋ ನಿಂತಿರುವದನ್ನು
ಕಾಣುತ್ತಾರೆ.
ನಿಮ್ಮ ಬಲೆಯನ್ನು ದೋಣಿಯ ಬಲಗಡೆ ಹಾಕಿರಿ.


ಅವರು ವಿಧೇಯರಾಗುತ್ತಾರೆ.
ಶೀಘ್ರವೇ ಅವರು
ಎಳೆಯಲಾರದಷ್ಟು ಮೀನುಗಳು
ಬಲೆಯಲ್ಲಿರುತ್ತವೆ.

ಅಂತಿಮ ಆಜ್ಞೆ


ಯೋಹಾನ ೨೧:೭-೧೮, ಮತ್ತಾಯ ೨೮:೧೬-೨೦, ಲೂಕ ೨೪:೪೪-೫೧. ರಾತ್ರಿಯೆಲ್ಲಾ ಶಿಷ್ಯರು ಗಲಿಲಾಯ ಸಮುದ್ರದಲ್ಲಿ ಮೀನು ಹಿಡಿದರೂ ಏನೂ ಸಿಕ್ಕುವದಿಲ್ಲ. ನಸುಕಿನ ಜಾವ ದಡದಲ್ಲಿ ನಿಂತಿದ್ದ ಒಬ್ಬನು ದೋಣಿಯ ಬಲಗಡೆಯಲ್ಲಿ ಬಲೆಹಾಕಲು ಹೇಳಿದಾಗ ಅವರು ವಿಧೇಯರಾಗುತ್ತಾರೆ. ತಕ್ಷಣವೇ ಬಲೆಯ ತುಂಬೆಲ್ಲಾ ಮೀನು ಸಿಕ್ಕು ಅವರಿಗೆ ಎಳೆಯಲಾಗುವದಿಲ್ಲಾ. ಯೋಹಾನನು ತಿರಿಗಿ ದಡದಲ್ಲಿದ್ದ ವ್ಯಕ್ತಿಯನ್ನು ಕಾಣುತ್ತಾನೆ.
ಪೇತ್ರ, ನೋಡು, ಆತನು ಕರ್ತನು!


ಪೇತ್ರನು ಯೇಸುವನ್ನು ತಲುಪಬೇಕೆಂಬ ಕಾತುರದಿಂದ ನೀರಿನಲ್ಲಿ ಜಿಗಿದು ಈಜುತ್ತಾ ದಡ ಸೇರುತ್ತಾನೆ. ಇತರರು ದೋಣಿಯನ್ನು ದಡಕ್ಕೆ ತಂದು ಲಂಗರು ಹಾಕುತ್ತಾರೆ. ಬಲೆಯು ಎಳೆಯಲ್ಪಟ್ಟ ಮೇಲೆ ಯೇಸು ಹಸಿದಿರುವ ತನ್ನ ಶಿಷ್ಯರನ್ನು ಕರೆಯುತ್ತಾನೆ.
ಬಂದು ತಿನ್ನಿರಿ.




ಇನ್ನು ಎರಡು ಸಾರಿ ಯೇಸು ಪೇತ್ರನಿಗೆ ಅದೇ ಪ್ರಶ್ನೆಯನ್ನು ಕೇಳುತ್ತಾನೆ. ಪ್ರತಿಸಾರಿ ಪೇತ್ರನು ತನ್ನ ಭಕ್ತಿಯನ್ನು ಪ್ರಕಟಿಸುತ್ತಾನೆ. ಆಗ ಯೇಸು ಅವನಿಗೆ ದೊಡ್ಡ ಜವಾಬ್ದಾರಿಯನ್ನು ಕೊಡುತ್ತಾನೆ.




ಕೆಲವು ದಿನಗಳ ನಂತರ ಯೇಸು ತನ್ನ ಐನೂರು ಜನ ಹಿಂಬಾಲಕರಿಗೆ ಕಾಣಿಸಿಕೊಳ್ಳುತ್ತಾನೆ. ಆತನ ಆಜ್ಞೆಯ ಮೇರೆಗೆ ಅವರು ಗಲಿಲಾಯ ಸಮುದ್ರದ ಬಳಿ ಒಂದು ಗುಡ್ಡದಲ್ಲಿ ಸೇರಿಬಂದಿದ್ದಾರೆ. ಆತನು ಅವರಿಗೆ ಒಂದು ಮಹಾ ಅಪ್ಪಣೆಯನ್ನು ಕೊಡುತ್ತಾನೆ.



ಇದಾದ ನಂತರ ಹನ್ನೊಂದು ಶಿಷ್ಯರು ಯೆರೂಸಲೇಮಿಗೆ ಹಿಂದಿರುಗುತ್ತಾರೆ. ಅಲ್ಲಿ ಯೇಸು ಅವರಿಗೆ ತನ್ನ ಮರಣ ಹಾಗು ಪುನರುಥ್ಥಾನದ ಮೂಲಕ ಲೋಕದ ರಕ್ಷಕನಾಗಿರಬೇಕೆಂಬ ದೇವರ ಉದ್ದೇಶವನ್ನು ಹೇಗೆ ನೆರವೇರಿಸಿದನೆಂದು ವಿವರಿಸುತ್ತಾನೆ. ಕಾರ್ಯವನ್ನು ಮುಂದುವರೆಸಿಕೊಂಡು ಹೋಗಲು ಆಜ್ಞಾಪಿಸುತ್ತಾನೆ. ಆದರೆ ದೇವರಿಂದ ಪವಿತ್ರಾತ್ಮನ ಬಲವು ನಿಮ್ಮ ಮೇಲೆ ಬರುವ ತನಕ ಯೆರೂಸಲೇಮಿನಲ್ಲಿ ಕಾಯ್ದುಕೊಳ್ಳಿರಿ ಎಂದು ತಿಳಿಸುತ್ತಾನೆ.

ತನ್ನ ಪುನರುಥ್ಥಾನವಾದ ನಾಲ್ವತ್ತನೆಯ ದಿನದಲ್ಲಿ ಯೇಸು ತನ್ನ ಶಿಷ್ಯರನ್ನು ಬೇಥಾನ್ಯದ ಹತ್ತಿರದ ಎಣ್ಣೆ ಮರಗಳ ಗುಡ್ಡದ ಬಳಿಗೆ ಕರೆದೊಯ್ಯುತ್ತಾನೆ. ಆತನು ಅವರನ್ನು ಆಶೀರ್ವದಿಸುತ್ತಿರುವಾಗಲೇ ಪರಲೋಕಕ್ಕೆ ಏರಿ ಹೋಗುತ್ತಾನೆ.



ನೀವು ಹೇಗೆ ದೇವರ ಅದ್ಭುತವಾದ ಕುಟುಂಬದಲ್ಲಿ ಪಾಲಗಾರರಾಗಬಹುದು.

ದೇವರು ಕುಟುಂಬಗಳನ್ನು ಪ್ರೀತಿಸುತ್ತಾನೆ. ದೇವರು ಈ ಪ್ರಪಂಚವನ್ನು ಸೃಷ್ಟಿಸಿದ ನಂತರ ಆತನು ಪ್ರಥಮ ಕುಟುಂಬವನ್ನು ನಿರ್ಮಿಸಿದನು, ಅಂದರೆ ಒಬ್ಬ ಪುರುಷ ಮತ್ತು ಸ್ತ್ರೀಯನ್ನು ಸೃಷ್ಟಿಸಿದನು. ಅವರ ಹೆಸರು ಆದಾಮ ಮತ್ತು ಹವ್ವ,. ಅವರ ಮನೆಯು ಅದ್ಭುತವಾದ ಜೀವವನ್ನು ಹೊಂದಿದ್ದ ಏದೇನ್ ತೋಟದಲ್ಲಿತ್ತು.




ದೇವರು ಒಳ್ಳೆಯವನೂ ಹಾಗು ಆದಾಮ ಮತ್ತು ಹವ್ವಳರಿಗೆ ಒಳ್ಳೆಯ ಸಂಗತಿಗಳೇ ಜರುಗಬೇಕೆಂದು ಬಯಸಿದನು. ದೇವರು ಅವರಿಗೆ ಏನು ಮಾಡಬೇಕು ಹಾಗು ಮಾಡ ಬಾರದೆಂಬದನ್ನು ತಿಳಿಸಿದನು. ಆದಾಮ ಮತ್ತು ಹವ್ವಳರಿಗ ದೇವರ ಮಾತಿಗೆ ವಿಧೇಯರಾಗುವ ಇಲ್ಲವೆ ಅವಿಧೇಯರಾಗುವದನ್ನು ಆರಿಸಿಕೊಳ್ಳುವ ಸ್ವಾತಂತ್ರವಿತ್ತು.




ಸೈತಾನನು ದೇವರನ್ನು ದ್ವೇಷಿಸಿದನು. ಸೈತಾನನು ಸರ್ಪದ ರೂಪದಲ್ಲಿ ಆದಾಮ ಹಾಗು ಹವ್ವಳರ ಮನೆಯಾದ ತೋಟಕ್ಕೆ ಬಂದನು. ಸೈತಾನನು ಅವ್ವಳಿಗೆ ದೇವರು ನಿಮಗೆ ಸುಳ್ಳನ್ನು ಹೇಳಿದ್ದಾನೆಂದು ಹೇಳಿದಾಗ ಮಧ್ಯದಲ್ಲಿರುವ ಮರದ ಹಣ್ಣಿನ ಬಗ್ಗೆ ಸೈತಾನನು ಹೇಳುತ್ತಿರುವದನ್ನು ಹವ್ವಳು ನಂಬಿದಳು. ತಾನು ಅದನ್ನು ರುಚಿನೋಡ ಬಾರದೆಂದು ಆದಾಮನಿಗೆ ಗೊತ್ತಿತ್ತು. ಆದರೆ ಆತನು ಅವಿಧೇಯನಾಗಲು ತೀರ್ಮಾನಿಸಿದನು,

ಆದಾಮ ಮತ್ತು ಹವ್ವಳರು ದೇವರಿಗೆ ಅವಿಧೇಯರಾದಾಗ ಬಯಂಕರವಾದ ಸಂಗತಿಯೊಂದು ನಡೆಯಿತು. ಅವರು ಬಯಗ್ರಸ್ಥರಾಗಿ ದೇವರಿಂದ ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸಿದರು. ದೇವರು ಅವರಿಗೆ ನೀವು ಪಾಪ ಮಾಡಿದ್ದರಿಂದ ಏದೇನ್ ತೋಟವನ್ನು ಬಿಟ್ಟು ಹೋಗಬೇಕೆಂದು ಹೇಳಿದನು. ಸಂತೋಷದ ಪ್ರಪಂಚವಾಗಿರುವದಕ್ಕೆ ಬದಲಾಗಿ ಭೂಮಿಯು ಒಂದು ದುಃಖದ ಸ್ಥಳವಾಯಿತು. ಪ್ರೀತಿಗೆ ಬದಲಾಗಿ ದ್ವೇಷ ಉಂಟಾಯಿತು ಹಾಗು ಜನರು ಒಬ್ಬರನ್ನೊಬ್ಬರು ಕೊಲ್ಲಲು ಸಹ ಪ್ರಾರಂಭಿಸಿದರು.







ಕಾಯಿನ ಮತ್ತು ಹೇಬೆಲರು ಆದಾಮ ಹವ್ವಳರ ಇಬ್ಬರು ಮಕ್ಕಳಾಗಿದ್ದರು. ದೇವರು ಅವರಿಗೆ-ನಿಮ್ಮ ಪಾಪಗಳು ಕ್ಷಮಿಸಲ್ಪಡಬೇಕಾದರೆ ಯಾವ ಕಳಂಕವೂ ಇರದ ಒಂದು ಪರಿಪೂರ್ಣ ಪ್ರಾಣಿಯನ್ನು ನನಗೆ ಯಜ್ಞವಾಗಿ ಅರ್ಪಿಸಬೇಕೆಂದು ಹೇಳಿದನು. ಕಾಯಿನನು ಉತ್ತಮವಾದ ಫಲಗಳನ್ನು ಬೆಳೆಯಿಸಿದನು ಮತ್ತು ಅದನ್ನು ದೇವರಿಗೆ ಅರ್ಪಿಸಿದನು, ಆದರೆ ದೇವರಿಗೆ ಮೆಚ್ಚಿಕೆಯಾಗಲಿಲ್ಲ ಯಾಕೆಂದರೆ ಕಾಯಿನನು ದೇವರ ಸೂಚನೆಗಳಿಗೆ ವಿಧೇಯ-ನಾಗಿರಲಿಲ್ಲ. ದೇವರು ತನ್ನ ತಮ್ಮನಾದ ಹೇಬೆಲನ ಯಜ್ಞವನ್ನು ಸ್ವೀಕರಿಸಿ ತನ್ನದನ್ನು ತಿರಸ್ಕರಿಸಿದ್ದಕ್ಕಾಗಿ ಕಾಯಿನನು ಅಸೂಯೆ, ದ್ವೇಷಗೊಂಡನು ಮತ್ತು ಹೀಗೆ ಬಹಳ ಕೋಪಗೊಂಡು ಹೇಬೆಲನನ್ನು ಕೊಂದು ಹಾಕಿದನು.

ಜನರು ಪಾಪದಲ್ಲಿ ಮುಂದುವರೆದರು ಕೊನೆಗೆ ಪ್ರಪಂಚವು ದೇವರಿಗೆ ಎಷ್ಟಾಗಿ ಅವಿಧೇಯವಾಯಿತೆಂದರೆ ದೇವರು ಒಬ್ಬ ಮನುಷ್ಯನ ಕುಟುಂಬವನ್ನು ಬಿಟ್ಟು ಪ್ರಪಂಚವನ್ನೆಲ್ಲಾ ನಾಶಮಾಡಲು ತೀರ್ಮಾನಿಸಿದನು. ಆ ವ್ಯಕ್ತಿಯು ನೋಹ. ಅವನು ದೇವರನ್ನು ಪ್ರೀತಿಸಿ ವಿಧೇಯನಾಗಲು ಪ್ರಯತ್ನಿಸಿದನು. ಆದ್ದರಿಂದ ದೇವರು ಆತನಿಗೆ ಒಂದು ದೊಡ್ಡ ನಾವೆಯನ್ನು ಕಟ್ಟಲು ಹೇಳಿದಾಗ ಆತನು ಹಾಗೆಯೇ ಮಾಡಿದನು. ಮತ್ತು ಜಲಪ್ರಳಯವು ಬಂದಾಗ ಅವನು ರಕ್ಷಿಸಲ್ಪಟ್ಟನು.



ನೂರಾರು ವರ್ಷಗಳವರೆಗೆ ದೇವರನ್ನು ಪ್ರೀತಿಸಿದ ಜನರು ತಮ್ಮ ಪಾಪಗಳ ಕ್ಷಮಾಪಣೆಗಾಗಿ ಪ್ರಾಣಿಯನ್ನು ಯಜ್ಞ ವರ್ಪಿಸುವದರ ಮೂಲಕ ದೇವರಿಗೆ ವಿಧೇಯರಾದರು ಲೋಕದ ಹೆಚ್ಚು ಜನರು ದೇವರಿಗೆ ವಿಧೇಯರಾಗಲಿಲ್ಲ ಅಲ್ಲದೆ ಅವರು ಲೋಹ, ಕಟ್ಟಿಗೆಗಳಿಂದ ತಾವೇ ನಿರ್ಮಿಸಿದ ದೇವರುಗಳನ್ನು ಪೂಜಿಸಿದರು.



ಅಬ್ರಹಾಮಯೆಂಬವನು ಹಾಗು ಆತನ ಹೆಂಡತಿ ಸಾರಳು ದೇವರನ್ನು ಸತ್ಯವಾಗಿ ಪ್ರೀತಿಸಿದರು. ಅವರಿಗೆ ಮಕ್ಕಳೇ ಇರಲಿಲ್ಲ. ಬಂಜೆತನವನ್ನು ಆದಿನಗಳಲ್ಲಿ ಬಹಳ ದೊಡ್ಡ ಸಮಸ್ಯೆಯನ್ನಾಗಿ ಕಾಣುತ್ತಿದ್ದರು. ದೇವರು ಅವರಿಗೆ - ನೀವು ವೃದ್ಧರಾಗಿದ್ದರೂ ಅವರಿಗೆ ಒಂದು ಮಗುವನ್ನು ಕೊಡುವೆನು ಮತ್ತು ಅವರ ಮಗನಾದ ಇಸಾಕನ ಮೂಲಕ ಒಂದು ಪ್ರಸಿದ್ಧ ಜನಾಂಗ ಉಂಟಾಗುವದೆಂದು ೯೦ ವರ್ಷಗಳಿಂತಲೂ ಮೇಲ್ಪಟ್ಟ ಅವರಿಗೆ ಹೇಳಿದನು.

ಅಬ್ರಹಾಮನು ಇಸಾಕನನ್ನು ಪ್ರೀತಿಸಿದನು ಆದರೆ ಒಂದು ದಿನ ದೇವರು, ಅಬ್ರಹಾಮನ ಜೀವಿತದಲ್ಲಿ ನನಗೆ ಪ್ರಥಮ ಸ್ಥಾನವಿದೆಯೊ ಎಂಬದನ್ನು ಪರೀಕ್ಷಿಸಲು ತೀರ್ಮಾನಿಸಿದನು. ದೇವರು ಅಬ್ರಹಾಮನಿಗೆ ತನ್ನ ಮಗನನ್ನು ಯಜ್ಞವೇದಿಯ ಮೇಲೆ ಅರ್ಪಿಸುವಂತೆ ಕೇಳಿದನು. ಅಬ್ರಹಾಮನು ದೇವಕಲ್ಲಿ ಬಹಳ ನಂಬಿಕೆಯನ್ನು ಹೊಂದಿದ್ದು ವಿಧೇಯನಾಗಲು ತೀರ್ಮಾನಿಸಿದನು. ಆದರೆ ದೇವರು ಆಗ ಅಬ್ರಹಾಮನನ್ನು ತಡೆದು ಮಗನಿಗೆ ಬದಲಾಗಿ ಪ್ರಾಣಿಯೊಂದನ್ನು ಅರ್ಪಿಸಲು ಕೇಳಿದನು. ೨೦೦೦ ವರ್ಷಗಳ ನಂತರ ದೇವರ ಏಕೈಕ ಮಗನಾದ ಯೇಸು ಅದೇ ಸ್ಥಳದಲ್ಲಿ ಶಿಲುಬೆಗೇರಿಸಲ್ಪಟ್ಟನು.








ಕಾನಾನಿನಲ್ಲಿ ಕ್ಷಾಮವು ಬಂದಿರುವಾಗ ಅಬ್ರಹಾಮನ ಮರಿಮೊಮ್ಮಕ್ಕಳು ಐಗುಪ್ತಕ್ಕೆ ಹೋದರು. ಅಲ್ಲಿ ಇಬ್ರಿಯರಾದ ಅವರು ೪೦೦ ವರ್ಷಗಳ ಕಾಲ ವಾಸಿಸಿದರು. ಐಗುಪ್ತ್ಯರು ಅವರಿಗೆ ವಿರುದ್ಧರಾಗಿ ಅವರನ್ನು ಗುಲಾಮರಾಗಿರುವದಕ್ಕೆ ಒತ್ತಾಯಿಸಿದಾಗ ಇಬ್ರಿಯರು ಸಹಾಯಕ್ಕಾಗಿ ದೇವರನ್ನು ಬೇಡಿ ಕೊಂಡರು. ದೇವರು ಅವರ ಕೂಗನ್ನು ಕೇಳಿ ಅವರನ್ನು ದಾಸತ್ವದಿಂದ ಬಿಡಿಸುವದಕ್ಕಾಗಿ ಮೋಶೆಯನ್ನು ಕಳುಹಿಸಿದನು. ಮೋಶೆಯು ಮಗುವಾಗಿರುವಾಗ ಮಕ್ಕಳ ಹತ್ಯಮಾಡುತ್ತಿದ್ದ ಪರೋಹನ ಕೈಯಿಂದ ತಪ್ಪಿಸಲು ತಾಯಿಯು ಅವನನ್ನು ಹುಲ್ಲಿನ ಬುಟ್ಟಿಯಲ್ಲಿ ಮುಚ್ಚಿ ನದಿಯಲ್ಲಿ ಬಿಟ್ಟಳು. ಐಗುಪ್ತ್ಯದ ರಾಣಿಯು ಆಮಗುವನ್ನು ನೋಡಿ ಕಾಪಾಡಿದಳು. ಅನೇಕ ವರ್ಷಗಳ ನಂತರ ದೇವರು ಉರಿಯುವ ಪೊದೆಯೊಳಗಿಂದ ಮೋಶೆಯನ್ನು ಕರೆದು ಪರೋಹನ ಬಳಿಗೆ ಕಳುಹಿಸಿದನು. ಅದರ ಪರಿಣಾಮವೇನೆಂದರೆ ಒಂದು ಕಾದಾಟ ಪ್ರಾರಂಭವಾಯಿತು, ಅದು ದೇವರು ಮತ್ತು ಪರೋಹನ ನಡುವೆಯಾಗಿತ್ತು.







ಅದರ ನಂತರ ಎಲ್ಲಾ ಕಾಲಕ್ಕೂ ಅತ್ಯಂತ ಪ್ರಸಿದ್ಧವಾದ ಘಟನೆಗಳು ನಡೆದವು. ದೇವರು ತನ್ನ ಜನರನ್ನು ಐಗಪ್ತ್ಯದಿಂದ ಬಿಡಿಸಿದ್ದರ ನೆನಪಿಗಾಗಿ ಪಸ್ಕ ಹಬ್ಬವು ಈಗಲೂ ಆಚರಿಸಲ್ಪಡುತ್ತಿದೆ. ಆದಿನದಲ್ಲಿ ಜನರಿಗೆ ಮೋಶೆಯು ಐಗುಪ್ತ್ಯದಲೆಲ್ಲಾ ಚೊಚ್ಚಲ ಗಂಡು ಮಕ್ಕಳು ಮರಣಿಸುವರೆಂದು ಹೇಳಿದನು. ಅಲ್ಲದೆ ತಮ್ಮ ಕುಟುಂಬಗಳನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬದನ್ನು ಅವರಿಗೆ ಹೇಳುತ್ತಾನೆ.
ಈ ಸಾರಿ ಫರೋಹನ ನಮ್ಮನ್ನು ಹೋಗ ಬಿಡುತ್ತೇನೆಂದು ಸುಳ್ಳು ಹೇಳಿದ್ದಾನೆ. ಈ ಸಾರಿ ಏನು ಮಾಡುವನು?
ಖಂಡಿತವಾಗಿ ಇದು ದಾಸತ್ವದಿಂದ ನಮಗೆ ಬಿಡುಗಡೆ ತರುತ್ತದೆ!
ನಮ್ಮ ಬಾಗಿಲು ಪಟ್ಟಿಗಳ ಮೇಲೆ ಕುರಿಮರಿಯ ರಕ್ತವನ್ನು ಹಚ್ಚುವದೇಕೆ?
ರಕ್ತದ ಗುರುತನ್ನು ನೋಡಿ ಸಂಹಾರದೂತನು ಕೇಡನ್ನು ಮಾಡುವದಿಲ್ಲ ಎಂದು ದೇವರು ಮೋಶೆಗೆ ಹೇಳಿದ್ದಾನೆ.
ಆ ಸಾಯಂಕಾಲ ಪ್ರತಿ ಇಬ್ರಿಯ ಕುಟುಂಬವು ಐಗುಪ್ತ್ಯದಿಂದ ಹೊರಡಲು ಸಿದ್ಧವಾಗುತ್ತದೆ. ಸಂಹಾರ ದೂತನು ಅವರ ಮನೆಗಳನ್ನು ದಾಟಿಕೊಂಡು ಹೋಗುತ್ತಿದ್ದದರಿಂದ ಅವರು ಪಸ್ಕ ಹಬ್ಬವೆಂಬ ಊಟವನ್ನು ತಿನ್ನುತ್ತಾರೆ.



ಮರುದಿನ ಬೆಳಿಗ್ಗೆ ಪರೋಹನ ಇಬ್ರಿಯರಿಗೆ ಹೊರಡಲು ಅನುಮತಿ
ನೀಡಿದನು. ಆಗ ನಂತರ ತಿರಿಗಿ ಅವನು
ತನ್ನ ಮನಸ್ಸನ್ನು ಬದಲಾಯಿಸಿ ಮೋಶೆ ಹಾಗು ಜನರನ್ನು ಬೆನ್ನಟ್ಟ ತನ್ನ
ಸೈನ್ಯವನ್ನು ಕಳುಹಿಸಿದನು. ಇಬ್ರಿಯರು
ಐಗುಪ್ತ್ಯದ ಸೈನ್ಯ ಹಾಗು ಕೆಂಪು ಸಮುದ್ರಗಳ ನಡುವೆ ಸಿಕ್ಕಿಕೊಂಡರು. ಆಗ
ಸಾವಿರಾರು ವರ್ಷಗಳ ವರೆಗೆ ದೇವರಿಗೆ
ಮಹಿಮೆಯನ್ನು ತರುವಂತಹ ವಿಸ್ಮಯಕಾರಿ ರೀತಿಯಲ್ಲಿ ಸಮುದ್ರವು
ಇಬ್ಭಾಗವಾಯಿತು ಹಾಗು ಇಬ್ರಿಯರು
ಒಣನೆಲದ ಮೇಲೆ ನಡೆದು ಹೋದರು.

ಈ ಘಟನೆಯ ವಿಮೋಚನೆ ಎಂದು ಪರಿಚಿತವಿದೆ. ಪಸ್ಕ ಹಬ್ಬ ಹಾಗು,
ವಿಮೋಚನೆಗಳು ದೇವರು ಹೇಗೆ ತನ್ನ
ಕುಟುಂಬವನ್ನು ಕಾಪಾಡುತ್ತಾನೆಂಬದಕ್ಕೆ ಉದಾಹರಣೆಯಾಗಿವೆ. ಅಲ್ಲದೆ
ಈ ಘಟನೆಗಳು ದೇವರು ಹೇಗೆ ಪ್ರತಿಯೊಬ್ಬ
ವ್ಯಕ್ತಿಗೆ ಪಾಪದ ದಾಸತ್ವದಿಂದ ತಪ್ಪಿಸಿಕೊಂಡು ತನ್ನ ಕುಟುಂಬದಲ್ಲಿ
ಪಾಲುಗಾರರಾಗಲು ಮಾರ್ಗವನ್ನು
ಮಾಡುತ್ತಾನೆ ಎಂಬುದರ ಸಂಕೇತಗಳಾಗಿವೆ:
೧೫೦೦ ವರ್ಷಗಳ ನಂತರ ಯೇಸು ಪ್ರತಿವರ್ಷ ಪಸ್ಕ ಹಬ್ಬವನ್ನು
ಆಚರಿಸಿದನು. ಮತ್ತು ಈ ಹಬ್ಬದಂದೇ ಆತನು
ತಾನು ಕೊಲ್ಲಲ್ಪಡುವದಕ್ಕೆ ಸ್ವಲ್ಪ ಮುಂಚೆ ತನ್ನ ಶಿಷ್ಯರೊಂದಿಗೆ ಆತನು
ಪ್ರಸಿದ್ಧ ಕರ್ತನ ಬೋಜನವನ್ನು ಏರ್ಪಡಿಸಿದನು.



ವಿಮೋಚನೆಯ ನಂತರ ದೇವರು ಮೋಶೆಯನ್ನು ಸಿನಾಯ್ ಬೆಟ್ಟದ ತುದಿಯಲ್ಲಿ ಕರೆದು ಆತನಿಗೆ ದಶಾಜ್ಞೆಗಳನ್ನು ಕೊಟ್ಟನು. ಜನರು ಹೇಗೆ ಜೀವಿಸ ಬೇಕೆಂಬದಕ್ಕೆ ಸೂಚನೆಗಳಾಗಿವೆ, ಹಾಗು ಜನರು ತಾವು ದೇವರ ಉನ್ನತ ಮಟ್ಟಕ್ಕೆ ತಕ್ಕ ಹಾಗೆ ಜೀವಿಸಲು ಸಾದ್ಯವಿಲ್ಲ ಎಂಬದನ್ನು ಅಳತೆ ಮಾಡುವ ಕೋಲಿನಂತೆ ಅವುಗಳಿರುತ್ತವೆ. ಪ್ರತಿಯೊಬ್ಬನೂ ಈ ಆಜ್ಞೆಗಳಲ್ಲಿ ಒಂದನ್ನಾದರೂ ಮುರಿದಿರುತ್ತಾನೆ. ಈ ಆಜ್ಞೆಗಳ ಮೀರುವದನ್ನು ದೇವರು ' ಪಾಪ ' ಎಂದು ಕರೆಯುತ್ತಾನೆ.





ದೇವರು ತನ್ನ ಜನರಿಗೆ ಎಷ್ಟೋ ಮೇಲುಗಳನ್ನು ಮಾಡುತ್ತಿದ್ದರೂ ಅವರು ಗುಣುಗುಟ್ಟುತ್ತಾ ಆತನಿಗೆ ಅವಿಧೇಯರಾಗುತ್ತಿದ್ದರು. ಒಂದು ದಿನ ದೇವರು ವಿಷಕಾರಿಸರ್ಪಗಳನ್ನು ಅವರ ಮದ್ಯದಲ್ಲಿ ಕಳುಹಿಸಿದಂಡಿಸಿದನು, ಅನೇಕ ಜನರು ಕಚ್ಚಲ್ಪಟ್ಟು ಮರಣಿಸಿದರು. ನಂತರ ಜನರು ತಮ್ಮ ಪಾಪಗಳಿಗಾಗಿ ಕ್ಷಮಾಪಣೆ ಕೇಳಿದರು, ಆಗ ದೇವರು ಮೋಶೆಗೆ ' ನೀನು ತಾಮ್ರದ ಸರ್ಪವನ್ನು ಮಾಡಿ ಒಂದು ಎತ್ತರವಾದ ಕೋಲಿನ ಮೇಲಿಡು, ಅದನ್ನು ನೋಡಿದವನೂ ಬದುಕಿಕೊಳ್ಳುವನು' ಎಂದು ಹೇಳಿದನು. ನಂಬಿಕೆಯು ಹೇಗೆ ಜನರನ್ನು ಪಾಪಗಳಿಂದ ರಕ್ಷಿಸುವದು ಎಂಬದರ ಉದಾಹರಣೆಯಾಗಿ ಈ ಕಥೆಯನ್ನು ಹೇಳಲಾಗಿವೆ.









ಅನೇಕ ವೇಳೆ ಇಸ್ರಾಯೇಲರು ತಮ್ಮ ಸುತ್ತಲಿನ ರಾಷ್ಟ್ರಗಳ ದೇವತೆಗಳನ್ನು ಪೂಜಿಸಿದರು. ಅಥವಾ ತಮ್ಮ ದೇವರನ್ನು ಹಿಂಬಾಲಿಸಬೇಕೆಂಬ ಸಲಹೆಗಳನ್ನು ಮರೆತು ಬಿಡುತ್ತಿದ್ದರು. ಅನಂತರ ಪಶ್ಚಾತ್ತಾಪಪಟ್ಟು ದೇವರಿಂದ ಕ್ಷಮೆಯನ್ನು ಕೇಳುತ್ತಿದ್ದರು. ಜನರು ತಮ್ಮ ಪಾಪಗಳಿಗೆ ಕ್ಷಮೆ ಹೊಂದಿ ದೇವರೊಂದಿಗಿನ ಸಂಬಂಧವನ್ನು ತಿರಿಗಿ ಪಡೆಕೊಳ್ಳಲು ಒಂದು ಪರಿಪೂರ್ಣವಾದ ಪ್ರಾಣಿಯನ್ನು ಯಜ್ಞವಾಗಿ ಅರ್ಪಿಸುವದು ಅವಶ್ಯವಾಗಿತ್ತು.

ಅನೇಕ ವರ್ಷಗಳ ನಂತರ ಅರಸನಾದ ದಾವಿದನ ಮಗ ಸೊಲೊಮೋನನಿಗೆ ದೇವರು ತನಗಾಗಿ ಒಂದು ಆಲಯವನ್ನು ಕಟ್ಟಬೇಕೆಂದು ಅಪ್ಪಣೆ ಮಾಡಿದನು. ಜನರ ಪಾಪಗಳು ಕ್ಷಮಿಸಲ್ಪಡುವ ಹಾಗೆ ಪ್ರತಿದಿನವು ಆಲಯದಲ್ಲಿ ದೇವರಿಗೆ ಯಜ್ಞಗಳು ಅರ್ಪಿಸಲ್ಪಡುತ್ತಿದ್ದವು. ದೇವಾಲಯವು ಅನೇಕ ಸಾರಿ ನಾಶಕ್ಕೆ ಒಳಗಾಗಿ ಪುನಃ ಕಟ್ಟಲ್ಪಟ್ಟಿದ್ದರೂ ಈ ಸ್ಥಳದಲ್ಲಿಯೇ ಯೇಸು ತನ್ನ ತಂದೆಯನ್ನು ಆರಾಧಿಸಲು ಸಂಧಿಸಲಿದ್ದನು.

ಅರಸನಾದ ದಾವಿದ ಹಾಗು ಯೇಸುವಿನ ನಡುವಿನ ೧೦೦೦ ವರ್ಷಗಳ ಅವಧಿಯಲ್ಲಿ ಇಸ್ರಾಯೇಲರು ಹಲವಾರು ವೇಳೆ ದೇವರಿಗೆ ಅವಿಧೇಯರಾದರು. ಅನೇಕ ವರ್ಷಗಳ ವರೆಗೆ ದೇವರ ಪ್ರವಾದಿಗಳು ಇಸ್ರಾಯೇಲರಿಗೆ ಪಾಪವನ್ನು ತೊರೆದು ದೇವರ ಕಡೆಗೆ ತಿರಿಗಿಕೊಳ್ಳ ಬೇಕೆಂದು ಹೇಳಿದರು. ಅಲ್ಲದೆ ದೇವರು ' ಮೆಸ್ಸಿಯನಾಗಿ ' ಬರುವನೆಂದು ಸಹ ಹೇಳುತ್ತಲಿದ್ದರು.




ಇಸ್ರಾಯೇಲರು ನಮ್ಮೆಲ್ಲರ ಹಾಗೆಯೇ ಇದ್ದರು ಯಾಕೆಂದರೆ ನಾವೆಲ್ಲರೂ ತಪ್ಪು ಮಾಡಿದ್ದೇವೆ. ಈ ತಪ್ಪು ಕಾರ್ಯ ಹಾಗು ಆಲೋಚನೆಗಳನ್ನು ಪಾಪವೆನ್ನುತ್ತಾರೆ. ಪ್ರತಿಯೊಬ್ಬನು ದೇವರಿಗೆ ವಿರೋಧವಾಗಿ ನಡೆದು ಪಾಪದಲ್ಲಿ ಜೀವಿಸಿದ್ದಾನೆಂದು ಸತ್ಯವೇದ ಹೇಳುತ್ತದೆ. ನಮ್ಮ ಪಾಪಗಳು ನಮ್ಮನ್ನು ದೇವರ ಕುಟುಂಬದಲ್ಲಿ ಪಾಲುಗಾರರಾಗದಂತೆ ತಡೆಯುತ್ತವೆ. ಆದರೆ ದೇವರು ನಾವು ಆತನ ಕುಟುಂಬದ ಭಾಗವಾಗಿರಬೇಕೆಂದು ಇಚ್ಛಿಸುತ್ತಾನೆ. ನಮ್ಮ ಸ್ವಶಕ್ತಿಯಿಂದ ನಾವು ದೇವರ ಕುಟುಂಬದಲ್ಲಿ ಸ್ಥಾನ ಪಡೆಯಲು ಎಂದಿಗೂ ಸಾಧ್ಯವಿಲ್ಲ. ನಾವು ಎಷ್ಟೇ ಕಠಿಣವಾಗಿ ಶ್ರಮಿಸಿದರೂ ಪ್ರಯೋಜನವಿಲ್ಲ. ಆದರೆ ದೇವರು ನಮ್ಮನ್ನು ಬಹಳವಾಗಿ ಪ್ರೀತಿಸುತ್ತಾನೆ, ಹಾಗು ನಾವು ಆತನಿಗೆ ಆಪ್ತರಾಗಿರಬೇಕೆಂದು ಬಯಸುತ್ತಾನಾದ್ದರಿಂದ ಒಂದು ವಿಶೇಷ ಯೋಜನೆಯನ್ನು ಹೊಂದಿದ್ದಾನೆ.ಆತನು ಮಾನವ ಜನಾಂಗದ ಭಾಗವಾಗಲು ತೀರ್ಮಾನಿಸಿದನು. ಆತನ ಮಗನಾದ ಯೇಸು ಒಬ್ಬ ಮಾನವ ಮಗುವಾಗಿ ಹುಟ್ಟುವವನಾದನು, ಆದರೆ ಆತನಿಗೆ ಯಾವ ಮಾನವ ತಂದೆ ಬೇಕಾಗಿರಲಿಲ್ಲ.




ಒಂದು ದಿನ ಗಾಬ್ರಿಯೇಲನೆಂಬ ದೇವದೂತನು ಅವಿವಾಹಿತ ಕನ್ಯೆಯಾದ ಮರಿಯಳ ಬಳಿಗೆ ಬಂದನು, ಅವಳಿಗೆ ನಜರೇತಿನಲ್ಲಿ ಬಡಗಿಯಾಗಿದ್ದ ಯೋಸೇಫನೊಂದಿಗೆ ನಿಶ್ಚಿತಾರ್ಥವಾಗಿತ್ತು. ಮಾನವ ತಂದೆಯಿಲ್ಲದೆ ಜನಿಸಿದ ಆಕೆಯ ಮಗು ಯಾವ ಪಾಪವೂ ಇಲ್ಲದೆ ಸಂಪೂರ್ಣ ಪರಿಶುದ್ಧವಾಗಿರುವನೆಂದು ದೇವದೂತನು ಆಕೆಗೆ ಹೇಳಿದನು. ಯೇಸುವಿನ ಪ್ರಾರಂಭಿಕ ಜೀವನದಲ್ಲಿ ದೇವದೂತನು ಮರಿಯಳಿಗೆ ಹೇಳಿದ ಅನೇಕ ಸಂಗತಿಗಳು ದೃಢಪಟ್ಟವು.












೩೩ ವರ್ಷಗಳ ವರೆಗೆ ಯೇಸು ಪಾಪರಹಿತನಾಗಿ ಜೀವಿಸಿದನು. ಆತನು ಕೊನೆಯ ಮೂರುವರ್ಷಗಳಲ್ಲಿ ಎಲ್ಲೆಡೆಯೂ ಸಂಚರಿಸಿ ಜನರಿಗೆ ತನ್ನ ತಂದೆಯಾದ ದೇವರ ಕುರಿತಾಗಿ ಹೇಳುತ್ತಾ ನಾವು ಹೇಗೆ ಜೀವಿಸ ಬೇಕೆಂದು ಬೋಧಿಸುತ್ತಾ ಮಹತ್ಕಾರ್ಯಗಳ ಮೂಲಕ ದೇವರ ಶಕ್ತಿಯನ್ನು ತೋರ್ಪಡಿಸಿ ಪಾಪಗಳನ್ನು ಕ್ಷಮಿಸುವವನಾಗಿ ಜೀವಿಸಿದನು.









ತಾನು ಬಂಧಿಸಲ್ಪಡುವ ಹಿಂದಿನ ರಾತ್ರಿ ಯೇಸು ತನ್ನ ಶಿಷ್ಯರೊಂದಿಗೆ ಪಸ್ಕ ಹಬ್ಬವನ್ನು ಆಚರಿಸಿದನು. ಮೇಲಂತಸ್ತಿನ ಕೋಣೆಯಲ್ಲಿ ಸೇವಿಸಿದ ಭೋಜನವು ೧೪೦೦ ವರ್ಷಗಳ ಹಿಂದೆ ಮೋಶೆಯಿಂದ ಪ್ರಾರಂಬಗೊಂಡ ಆಚಾರಕ್ಕನುಗುಣ-ವಾಗಿತ್ತು. ಆದರೆ ಆಗ ಯೇಸು ತಾನು ತಿರಿಗೊಮ್ಮೆ ಲೋಕದ ಪಾಪಗಳ ನಿವಾರಣೆಗಾಗಿ ಸಾಯಲಿದ್ದೇನೆಂದು ವಿವರಿಸುವದರ ಮೂಲಕ ನೂತನ ಆಚಾರವನ್ನು ಪ್ರಾರಂಭಿಸಿದನು. ಯೇಸು ರೊಟ್ಟಿ ಮತ್ತು ದ್ರಾಕ್ಷಾರಸಗಳನ್ನು ತನ್ನ ಪ್ರಾಯಶ್ಚಿತ್ತ ಯಜ್ಞದ ಉದಾಹರಣೆಯಾಗಿ ಉಪಯೋಗಿಸುವನು. ಎಲ್ಲಾ ಜನರ ಪಾಪದ ದಂಡನೆಯನ್ನು ಹೊತ್ತುಕೊಳ್ಳಲು ತಾನು ಶಿಲುಬೆಯ ಮೇಲೆ ಸಾಯಬೇಕೆಂಬ ದೇವರ ಯೋಜನೆಯನ್ನು ಮತ್ತೊಮ್ಮೆ ವಿವರಿಸಿದನು



ಯೇಸು ತನ್ನ ಮರಣವನ್ನು ಮುಂತಿಳಿಸಿದ್ದು ಮಾತ್ರವಲ್ಲದೆ ತಾನು ಸತ್ತವರಿಂದ ತಿರಿಗಿ ಎದ್ದು ಬರುತ್ತೇನೆಂದು ಸಹ ಮುಂಚೆಯೇ ಹೇಳಿದನು. ಆತನು ಶಿಷ್ಯರಿಗೆ - ನಾನು ತಿರಿಗಿ ಜೀವಿತನಾಗಿ ಎದ್ದ ಮೇಲೆ ಗಲಿಲಾಯಕ್ಕೆ ಹೋಗಿ ಅಲ್ಲಿ ನಿಮ್ಮನ್ನು ಬೇಟಿಯಾಗುವೆನು ಎಂದು ನಿಶ್ಚಯಪಡಿಸಿ ' ಪ್ರವಾದಿಗಳು ನನ್ನ ಬಗ್ಗೆ ಬರೆದಿರುವ ಎಲ್ಲಾ ಸಂಗತಿಗಳು ನೆರವೇರುವವು' ಎಂದು ಮತ್ತೂ ಹೇಳಿದನು. ಆದಾದ ನಂತರ ಯೇಸು ಬಂಧಿಸಲ್ಪಟ್ಟನು. ಬಿರುಗಾಳಿಯನ್ನು

ಶಾಂತಗೊಳಿಸಿ, ಸತ್ತವರನ್ನು ಎಬ್ಬಿಸಿ, ೫,೦೦೦ ಜನರಿಗೆ ಹಸಿವು ನೀಗಿಸಿದ ಯೇಸು ತನ್ನನ್ನು ಬಂಧಿಸಲು ಬಂದಿದ್ದ ಸಿಪಾಯಿಗಳನ್ನು ತಡೆಯಬಹುದಿತ್ತು, ಶಿಲುಬೆಗೆ ಹಾಕದಂತೆ ಮಾಡ ಬಹುದಿತ್ತು. ಆದರೆ ಯೇಸು ನಮ್ಮ ದಂಡನೆ(ಶಿಕ್ಷೆ)ಯನ್ನು ಹೊತ್ತುಕೊಳ್ಳುತ್ತಿದ್ದನಾದ್ದರಿಂದ ತನ್ನನ್ನು ಸಾಯಲು ಒಪ್ಪಿಸಿಕೊಟ್ಟನು.




ನ್ಯಾಯ ವಿಚಾರಣೆಯ ವೇಳೆ ಯೇಸು ಯಾವ ತಪ್ಪನ್ನು ಮಾಡಲಿಲ್ಲ ಎಂದು ಪಿಲಾತನು ಪ್ರಕಟಿಸಿದನು. ಆದರೆ ಜನರ ಗುಂಪನ್ನು ಮೆಚ್ಚಿಸಬೇಕೆಂದು ಆತನು ಯೇಸುವಿಗೆ ಶಿಲುಬೆಯ ಮರಣದ ತೀರ್ಪು ನೀಡಿದನು.




ಯೇಸು ಮರಣಸಿದಾಗ ಆತನನ್ನು ಸಮೀಪದ ಸಮಾಧಿಯಲ್ಲಿ ಇಟ್ಟರು.
ಅದಕ್ಕೆ ದೊಡ್ಡ ಬಂಡೆಯನ್ನು ಇಟ್ಟು
ಮುದ್ರೆ ಹಾಕಿ ಸಿಪಾಯಿಗಳ ಕಾವಲು ಇಡಲಾಯಿತು, ಯಾಕೆಂದರೆ ಆತನನ್ನು
ಮರಣಕ್ಕೆ ಒಪ್ಪಿಸಿದ ನಾಯಕರುಗಳು
ತಾನು ತಿರಿಗಿ ಜೀವಿತನಾಗುವೆನೆಂದು ಯೇಸು ಹೇಳಿದ್ದನ್ನು
ನೆನಪಿನಲ್ಲಿಟ್ಟುಕೊಂಡಿದ್ದರು. ಆದರೆ ಮೂರನೆಯ
ದಿನವಾದ ಭಾನುವಾರ ಬೆಳಿಗ್ಗೆ ಕೆಲವು ಸ್ತ್ರೀಯರು ಸಮಾಧಿಗೆ ಹೋದರು.
ತಕ್ಷಣವೇ ಒಂದು ದೊಡ್ಡ ಭೂಕಂಪವಾಗಿ
ದೇವದೂತನೊಬ್ಬನು ಸಮಾದಿಗೆ ಮುಚ್ಚಿದ ಕಲ್ಲನ್ನು ಉರುಳಿಸಿದನು.
ದೇವದೂತನು ಆ ಸ್ತ್ರೀಯರಿಗೆ 'ಹೆದರಬೇಡಿರಿ!
ಆತನು ಇಲ್ಲಿಯಿಲ್ಲಾ, ತಾನು ಹೇಳಿದಂತೆಯೇ ತಿರಿಗಿ ಜೀವಿತನಾಗಿ
ಎದ್ದಿದ್ದಾನೆ. ಒಳಗೆ ಬಂದು ಆತನ ದೇಹ
ಇಟ್ಟಿದ್ದ ಜಾಗವನ್ನು ನೋಡಿರಿ...ಈಗ ನೀವು ಶೀಘ್ರವೇ ಹೋಗಿ ಆತನು
ಸತ್ತವರೊಳಗಿಂದ ಜೀವಿತನಾಗಿದ್ದಾನೆ,
ಮತ್ತು ಅವರನ್ನು ಸಂಧಿಸಲು ಗಲಿಲಾಯಕ್ಕೆ ಹೋಗಲಿದ್ದಾನೆ' ಎಂದು ಆತನ
ಶಿಷ್ಯರಿಗೆ ಹೇಳಿರಿ ಅಂದನು.



ಯೇಸು ನಿಮ್ಮ ಪಾಪಕ್ಕಾಗಿ ಮಾಡಿದ ಪ್ರಾಯಶ್ಚಿತ್ತವನ್ನು ಸ್ವೀಕರಿಸಲು ನೀವು ಆತನನ್ನು ನಂಬಬೇಕೆಂದು ದೃಢ ಮನಸ್ಸು ಮಾಡಬೇಕು. ಯೇಸು ನಮ್ಮ ಪಾಪಗಳನ್ನು ಕ್ಷಮಿಸಲು ಸತ್ತನೆಂದು ಬಾಯಿಂದ ಅರಿಕೆ ಮಾಡಿ ದೇವರು ಆವನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ನಂಬಿದರೆ ನಮ್ಮ ಪಾಪಗಳನ್ನು ಕ್ಷಮಿಸಿ ಮರೆತು ಬಿಡುತ್ತೇನೆಂದು ದೇವರು ವಾಗ್ದಾನ ಮಾಡುತ್ತಾನೆ. ನಾವು ಇದನ್ನು ಮಾಡುವಾಗ ದೇವರ ಕುಟುಂಬದ ಸದಸ್ಯರಾಗುತ್ತೇವೆ. ಪವಿತ್ರಾತ್ಮನು ನಮ್ಮಲ್ಲಿ ವಾಸಿಸುತ್ತಾನೆ. ಹಾಗು ನಾವು ವಿಶ್ವಾಸದ (ಕ್ರೈಸ್ತೀಯ) ಜೀವಿತ ನಡೆಸಲು ಸಾಮರ್ಥ್ಯವನ್ನು ಕೊಡುವನು ಒಂದು ದಿನ ನಾವು ಪರಲೋಕಕ್ಕೆ ಹೋಗಿ ಸದಾ ಕಾಲ ದೇವರೊಂದಿಗೆ ಇರುತ್ತೇವೆ. ಬಹುಶ: ನೀವು ಇದುವರೆಗೂ ಪಾಪಗಳನ್ನು ಒಪ್ಪಿಕೊಂಡು ದೇವರಿಂದ ಕ್ಷಮೆಯನ್ನು ಪಡೆದು ಕೊಂಡು ಆತನ ಮಹಿಮೆಗಾಗಿ ಜೀವಿಸುವ ದೃಢ ತಿರ್ಮಾನವನ್ನು ಮಾಡಿರಲಿಕ್ಕಿಲ್ಲ. ಹಾಗಾದರೆ ಯಾಕೆ ಈ ಪ್ರಾರ್ಥನೆಯನ್ನು ಮಾಡಬಾರದು?

ಯೇಸುವೇ, ನೀನು ದೇವರ ಮಗನೆಂದು ನಂಬುತ್ತೇನೆ.ನೀನು ನನ್ನ ಹಾಗು ನಮ್ಮ ಪಾಪಗಳ ನಿವಾರಣೆಗಾಗಿ ಭೂಮಿಗೆ ಬಂದಿಯೆಂದು ನಂಬುತ್ತೇನೆ.ನೀನು ಮರಣಿಸಿ ತಿರಿಗಿ ಜೀವಿತವಾಗಿ ಎದ್ದು ಇಂದಿಗೂ ಜೀವಿಸುತ್ತಿಯೆಂದು ವಿಶ್ವಾಸಿಸುತ್ತೇನೆ. ಯೇಸುವೇ, ನನ್ನ ಪಾಪಗಳನ್ನು ಕ್ಷಮಿಸು, ನಿನ್ನ ಅದ್ಭುತವಾದ ಕುಟುಂಬದಲ್ಲಿ ಪಾಲುಗಾರನನ್ನಾಗಿ ಮಾಡೆಂದು ಬೇಡುತ್ತೇನೆ. ನನ್ನೊಳಗೆ ಬಂದು ವಾಸಿಸಿ ನನ್ನ ಒಡೆಯನಾಗಿರೆಂದು ಪ್ರಾರ್ಥಿಸುತ್ತೇನೆ. ಆಮೆನ್ ನಾನು ನಂಬುತ್ತೇನೆ! ನನ್ನ ರಕ್ಷಕನಾಗಿರಲು ಬೇದಿಕೊಂಡಿದ್ದೇನೆ.

---

(ಹೆಸರು) (ದಿನಾಂಕ)

ನೀನು ಮಾಡಿರುವ ತಿರ್ಮಾನವನ್ನು ಅರ್ಥಮಾಡಿಕೊಳ್ಳಲು ಸಹಾಯ ವಾಗುವಂತೆ ಇಲ್ಲಿ ಕೆಲವೊಂದು ವಚನಗಳನ್ನು ಕೊಡಲಾಗಿದೆ.

ಯೋಹಾನ ೩:೧೬
೧ ಯೋಹಾನ ೫:೧೧,೧೨
ಯೇಹಾವ ೧:೧೨
ರೋಮ ೩:೨೩
ರೋಮ ೫:೮
ರೋಮ ೬:೨೩
ರೋಮ ೧೦:೯,೧೦
೨ ಕೊರಿ ೫:೧೬

ನೀವು ಕ್ರಿಸ್ತನ ರಕ್ಷಣೆಯೆಂಬ ವರವನ್ನು ಸ್ವೀಕರಿಸಿದ ಮೇಲೆ ಪ್ರತಿದಿನ ಬೈಬಲ್ ಓದಿರಿ, ಹಾಗು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತನಾಡಿರಿ. ಬೇಗನೆ ನೀನು ಆತನಿಗೆ ಹತ್ತಿರವಾಗಿ ಬೆಳೆಯುವಿ ಹಾಗು ದೇವರ ಅದ್ಭುತವಾದ ಕುಟುಂಬದ ಸದಸ್ಯನಾದ ನಿನಗೆ ಆತನು ನೀಡುವ ಪೂರ್ಣ ಜೀವಿತವನ್ನು ಆನಂದಿಸಲು ಪ್ರಾರಂಭಿಸುವಿ.

ಹೌದು, ಮೆಸ್ಸಿಯನು ಬಾಧೆಗೊಳಗಾಗಿ ಮರಣಿಸಿ ಮೂರನೆಯ ದಿನದಲ್ಲಿ ತಿರಿಗಿ ಸತ್ತವರೊಳಗಿಂದ ಎದ್ದು ಬರುವನು ಮತ್ತು ಆತನ ರಕ್ಷಣೆಯ ಸಂದೇಶವು ಯೆರೂಸಲೇಮಿನಿಂದ ಎಲ್ಲಾ ರಾಷ್ಟ್ರಗಳಿಗೂ ಒಯ್ಯಲ್ಪಡುವದು. ಆತನ ಕಡೆಗೆ ತಿರಿಗಿಕೊಳ್ಳುವವರಿಗೆಲ್ಲಾ ಪಾಪಕ್ಷಮಾಪಣೆ ದೊರೆಯುತ್ತದೆಂದು ಅನೇಕ ವರ್ಷಗಳಿಗೆ ಮುಂಚೆಯೇ ಬರೆದದೆ. ಈ ಪ್ರವಾದನೆಗಳು ನಿಜವಾದದ್ದನ್ನು ಕಣ್ಣಾರೆ ನೋಡಿದ್ದೀರಿ.



## ಪ್ರಶ್ನೆಗಳು

೧. ಇಮ್ಮಾನುವೇಲ ಎಂಬುದರ ಅರ್ಥವೇನು?
೨. ಯೇಸುವಿನ ಜನನದ ಸಮಯದಲ್ಲಿ ದೇವದೂತನು ಕುರುಬರಿಗೆ ಏನು ಹೇಳಿದನು?
೩. ಯೋಹಾನನಿಂದ ಜನರು ಏಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿದ್ದರು?
೪. ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಪರಲೋಕದಿಂದ ಏನೆಂದು ಆಕಾಶವಾಣಿಯಾಯಿತು?
೫. ಯೇಸು ಅರಣ್ಯದಲ್ಲಿ ಹೇಗೆ ಸೈತಾನನ್ನು ಸೋಲಿಸಿದನು?
೬. ಕ್ರಿಸ್ತನು ಯಾರೆಂದು ಪೇತ್ರನು ಅರಿಕೆಮಾಡಿದನು? ಆತನು ಅದನ್ನು ಹೇಗೆ ತಿಳಿದುಕೊಂಡನು?
೭. ಯೇಸು ಪಟ್ಟಣದಲ್ಲಿ ಸವಾರಿ ಮಾಡಿದಾಗ ಜನರ ಗುಂಪು ಏನು ಮಾಡಿತು?
೮. ಯೇಸು ದೇವಾಲಯದಲ್ಲಿ ಪ್ರವೇಶಿಸಿ ನಂತರ ಏನು ಮಾಡಿದನು?
೯. ಯೇಸು ಪಾರ್ಶ್ವವಾಯು ರೋಗಿಗೆ ಏನೆಂದು ಹೇಳಿದನು?
೧೦. ಯೇಸು ಪಾರ್ಶ್ವವಾಯು ರೋಗಿಯನ್ನು ಗುಣಪಡಿಸಲು ಏನು ಮಾಡಿದನು?
೧೧. ಯೇಸು ತೋಟದಲ್ಲಿ ಏನೆಂದು ಪ್ರಾರ್ಥಿಸಿದನು?
೧೨. ಪೇತ್ರನು ಯೇಸುವಿನ ಹಿಂಬಾಲಕನೆಂದು ಜನರು ಏಕೆ ನೆನೆಸಿದರು?
೧೩. ಯೇಸುವಿಗೆ ತನ್ನ ಮರಣದ ಬಗ್ಗೆ ತಿಳಿದಿತ್ತೇ?
೧೪. ಅವರು ಸಮಾಧಿಯನ್ನು ಪ್ರವೇಶಿದಾಗ ಏನನ್ನು ಕಂಡರು?
೧೫. ಯುವಕನು ಅವರಿಗೆ ಏನು ಮಾಡಬೇಕೆಂದು ಹೇಳಿದನು?
೧೬. ಯೇಸು ಎಷ್ಟು ವಿಧಗಳಲ್ಲಿ ಅನೇಕ ರೋಗಿಗಳನ್ನು ಸ್ವಸ್ಥಮಾಡಿದನು?
೧೭. ಸತ್ತ ನಂತರ ಯೇಸುವಿನಿಂದ ಬದುಕಿಸಲ್ಪಟ್ಟ ವ್ಯಕ್ತಿಗಳಾರು?
೧೮. ಯೇಸುವಿನೊಡನೆ ಇಬ್ಬರು ಕಳ್ಳರನ್ನು ಶಿಲುಬೆಗೇರಿಸಲಾಗಿತ್ತು. ಪಶ್ಚಾತ್ತಾಪಪಟ್ಟ ಕಳ್ಳನು ಯೇಸುವಿಗೆ ಏನು ಹೇಳಿದನು?
೧೯. ಪಶ್ಚಾತ್ತಾಪ ಪಟ್ಟ ಕಳ್ಳನಿಗೆ ಯೇಸು ಏನು ಹೇಳಿದನು?
೨೦. ಒಬ್ಬ ಮನುಷ್ಯನು ಹೊಸದಾಗಿ ಹುಟ್ಟುವುದು ಹೇಗೆ?
೨೧. ಒಬ್ಬನು ಯೇಸುವಿನಲ್ಲಿ ನಂಬಿಕೆಯಿಟ್ಟರೆ ಏನಾಗುತ್ತದೆ? ನಂಬಿಕೆ ಎಂದರೇನು?
೨೨. ಯೇಸುವಿನ ಬಗ್ಗೆ ವಿಮ್ಮ ಸ್ವಂತ ಅಭಿಪ್ರಾಯವೇನು?

The Life of Christ
*Illustrated* - Kannada

*Cook Communications*
*Ministries International*

G G Enterprises
gg.amar@RMB.sril.in